VOLUME: 16 | 23 APRIL 2026 | ಬುಧವಾರ | RS: 2 | PAGE: 06 ISSUE: 78
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com



ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಒಂದು ವರ್ಷದಿಂದ ಜೈಲಿನಲ್ಲಿದ್ದ ಸ್ಯಾಂಡಲ್‌ವುಡ್ ನಟಿ ರನ್ಯಾ ರಾವ್ ಅವರು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದಾರೆ. ವಕೀಲರ ಕಪ್ಪು ಬಣ್ಣದ ಕಾರಿನಲ್ಲಿ ಜೈಲು ಆವರಣದಿಂದ ರನ್ಯಾರಾವ್ ಹೊರಬಂದಿದ್ದಾರೆ. ಮಾಧ್ಯಮವರ ಕಣ್ತಪ್ಪಿಸಲು ನ್ಯಾಷನಲ್ ಗೇಮ್ಸ್ ಆವರಣದಲ್ಲಿ ರನ್ಯಾರಾವ್ ಕಾರು ಚಾಲಕ 8 ಬಾರಿ ರೌಂಡ್ಸ್ ಹಾಕಿದ ಪ್ರಸಂಗವೂ ಸಂಜೆ ನಡೆಯಿತು.

BHARATHA SARATHI
KANNADA DAILY NEWS PAPER
CALL 9740160669

# ಭಾರತ ಸಾರಥಿ

prabhavaa.com
RNI KARKAN2011/44806
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ



ಪೆಸಿಫಿಕ್ ಸಾಗರದ ಮೇಲ್ಮೈ ಉಷ್ಣಾಂಶವು ವಾಡಿಕೆಗಿಂತ ಹೆಚ್ಚಾಗುವುದನ್ನೇ 'ಎಲ್ ನಿನೋ' ಎನ್ನಲಾಗುತ್ತದೆ. ಇದರಿಂದ ವಾತಾವರಣದಲ್ಲಿನ ತೇವಾಂಶ ಕಡಿಮೆಯಾಗಿ ಗಾಳಿಯ ದಿಕ್ಕು ಬದಲಾಗುತ್ತದೆ. ಇದರ ನೇರ ಪರಿಣಾಮ ನೈಋತ್ಯ ಮುಂಗಾರು ಮಳೆಯ ಮೇಲೆ ಉಂಟಾಗಲಿದ್ದು, ಮಳೆಯ ಪ್ರಮಾಣ ಗಣನೀಯವಾಗಿ ಕುಸಿಯುವ ಸಾಧ್ಯತೆಯಿದೆ. ಮಳೆ ಕಡಿಮೆಯಾದರೆ ಉಷ್ಣಾಂಶ ಮತ್ತಷ್ಟು ಹೆಚ್ಚಾಗಿ ತೀವ್ರ ಬರಗಾಲದಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಮುಂಗಾರು ಮಳೆ ಕುಂಠಿತಗೊಂಡರೆ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಇಳಿಕೆಯಾಗಲಿದೆ.

# ಈ ವರ್ಷ ಬರ ಫಿಕ್ಸ್...?

ಬೆಂಗಳೂರು: ಕರ್ನಾಟಕದಲ್ಲಿ ಸೂರ್ಯನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಇಂತಹ ಸಮಯದಲ್ಲಿ ಹವಾಮಾನ ಇಲಾಖೆಯು 'ಎಲ್ ನಿನೋ' ಸುಳಿವು ನೀಡಿದ್ದು, ಜನರಲ್ಲಿ ಮತ್ತಷ್ಟು ಆತಂಕ ಮೂಡಿಸಿದೆ. ಪೆಸಿಫಿಕ್ ಸಾಗರದ ಉಷ್ಣಾಂಶದಲ್ಲಿನ ಏರಿಕೆಯಿಂದ ಉಂಟಾಗುವ ಈ ಹವಾಮಾನ ವೈಪರೀತ್ಯವು ಭಾರತದ ಮುಂಗಾರು ಮಳೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಪೆಸಿಫಿಕ್ ಸಾಗರದ ಮೇಲ್ಮೈ ಉಷ್ಣಾಂಶವು ವಾಡಿಕೆಗಿಂತ ಹೆಚ್ಚಾಗುವುದನ್ನೇ 'ಎಲ್ ನಿನೋ' ಎನ್ನಲಾಗುತ್ತದೆ. ಇದರಿಂದ ವಾತಾವರಣದಲ್ಲಿನ ತೇವಾಂಶ ಕಡಿಮೆಯಾಗಿ ಗಾಳಿಯ ದಿಕ್ಕು ಬದಲಾಗುತ್ತದೆ. ಇದರ ನೇರ ಪರಿಣಾಮ ನೈಋತ್ಯ ಮುಂಗಾರು ಮಳೆಯ ಮೇಲೆ ಉಂಟಾಗಲಿದ್ದು, ಮಳೆಯ ಪ್ರಮಾಣ ಗಣನೀಯವಾಗಿ ಕುಸಿಯುವ ಸಾಧ್ಯತೆಯಿದೆ. ಮಳೆ ಕಡಿಮೆಯಾದರೆ ಉಷ್ಣಾಂಶ ಮತ್ತಷ್ಟು ಹೆಚ್ಚಾಗಿ ತೀವ್ರ ಬರಗಾಲದಂತಹ ಪರಿಸ್ಥಿತಿ ನಿರ್ಮಾಣವಾಗಬಹುದು.



ಮುಂಗಾರು ಮಳೆ ಕುಂಠಿತಗೊಂಡರೆ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಇಳಿಕೆಯಾಗಲಿದೆ. ಇದು ಆಹಾರ ಭದ್ರತೆಗೆ ಧಕ್ಕೆ ತರುವುದಲ್ಲದೆ, ಮಾರುಕಟ್ಟೆಯಲ್ಲಿ ದಿನಬಳಕೆಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗಲಿದೆ. ಈಗಾಗಲೇ ಮಹಾರಾಷ್ಟ್ರ ಸರ್ಕಾರ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚೆ ನಡೆಸಿದೆ. ಒಡಿಶಾದ ತಿಟ್ಲಾಘರ್‌ನಲ್ಲಿ 42.7 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಮುಂಗಾರು ಮಳೆ ಕುಂಠಿತಗೊಂಡರೆ

ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಇಳಿಕೆಯಾಗಲಿದೆ. ಇದು ಆಹಾರ ಭದ್ರತೆಗೆ ಧಕ್ಕೆ ತರುವುದಲ್ಲದೆ, ಮಾರುಕಟ್ಟೆಯಲ್ಲಿ ದಿನಬಳಕೆಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗಲಿದೆ. ಈಗಾಗಲೇ ಮಹಾರಾಷ್ಟ್ರ ಸರ್ಕಾರ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚೆ ನಡೆಸಿದೆ. ಒಡಿಶಾದ ತಿಟ್ಲಾಘರ್‌ನಲ್ಲಿ 42.7 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಒಡಿಶಾದ 9 ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಶಾಲಾ ಸಮಯವನ್ನು ಬದಲಿಸಲಾಗಿದ್ದು, ಬೆಳಗ್ಗೆ 7:30 ರಿಂದ ಮಧ್ಯಾಹ್ನ 1:30 ರವರೆಗೆ ಮಾತ್ರ ತರಗತಿ ನಡೆಸಲು ಸೂಚಿಸಲಾಗಿದೆ. ಜಾರ್ಖಂಡ್ ಮತ್ತು ಮಹಾರಾಷ್ಟ್ರದಲ್ಲೂ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಇಂತಹದೇ ಕ್ರಮಗಳನ್ನು ಕೈಗೊಳ್ಳಲಾಗಿದೆ. ಒಟ್ಟಾರೆಯಾಗಿ, ಅಗ್ನಿಕುಂಡದಂತಾಗಿರುವ ಭೂಮಿಗೆ ಎಲ್ ನಿನೋ ಎಂಟ್ರಿಯು ಗಾಯದ ಮೇಲೆ ಬರೆ ಎಳೆದಂತಾಗಿದ್ದು, ಮುಂಬರುವ ದಿನಗಳಲ್ಲಿ ಬರಗಾಲ ಎದುರಿಸಲು ಸಜ್ಜಾಗಬೇಕಾದ ಅನಿವಾರ್ಯತೆ ಎದುರಾಗಿದೆ.

# ಪರಂಗೆ ಸಂಕಷ್ಟ...!

ಬೆಂಗಳೂರು: ತುಮಕೂರು ನಗರದಲ್ಲಿ ನಡೆದ ಕಬಡ್ಡಿ ಪಂದ್ಯಾವಳಿಯಲ್ಲಿ ಕಾನೂನು ಬಾಹಿರವಾಗಿ ಬೆಟ್ಟಿಂಗ್ ನಡೆಸಿದ ಆರೋಪಕ್ಕೆ ಸಂಬಂಧಿಸಿ ಗೃಹ ಸಚಿವರು ಹಾಗೂ ತುಮಕೂರು ಜಿಲ್ಲಾಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ (ಮ್ಯಾಜಿಸ್ಟ್ರೇಟ್) ಆದೇಶಿಸಿದೆ.

ಈ ಸಂಬಂಧ ಹೆಚ್.ಆರ್.ನಾಗಭೂಷಣ ಎಂಬವರು ಸಲ್ಲಿಸಿದ್ದ ಖಾಸಗಿ ದೂರು ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ಎನ್.ಶಿವಕುಮಾರ್ ಅವರು ಈ ಆದೇಶ ನೀಡಿದ್ದಾರೆ.

ಪ್ರಕರಣ ಸಂಬಂಧ ದಾಖಲೆಗಳನ್ನು ಪರಿಶೀಲಿಸಿ ನ್ಯಾಯಾಲಯ ಮಾಧ್ಯಮಗಳ ವರದಿಯನ್ನು ಉಲ್ಲೇಖಿಸಿ, ಪ್ರಕರಣವು ಪ್ರಾಥಮಿಕವಾಗಿ ತನಿಖೆಗೆ ಅರ್ಹವಾಗಿದೆ. ಅಲ್ಲದೆ, ಪ್ರಕರಣ ಸಂಬಂಧ ದಾಖಲಾದ ದೂರನ್ನು ತನಿಖೆ ನಡೆಸದೆ ತಳ್ಳಿಹಾಕಲಾಗಿದೆ. ಅಲ್ಲದೆ, ಆರೋಪಿಗಳು ಸಾರ್ವಜನಿಕ ಹುದ್ದೆಯಲ್ಲಿ ಇದ್ದರೂ, ಈ ಘಟನೆ ಅವರ ಅಧಿಕೃತ ಕರ್ತವ್ಯಗಳ ವ್ಯಾಪ್ತಿಗೆ ಸೇರದ ಕಾರಣ ಸರ್ಕಾರದ ಅನುಮತಿ ಅಗತ್ಯವಿಲ್ಲ. ಆದ್ದರಿಂದ ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಿ ವರದಿಯನ್ನು ಸಲ್ಲಿಸಬೇಕು ಎಂದು ಸೂಚನೆ ನೀಡಿ ವಿಚಾರಣೆ ಮುಂದೂಡಿದೆ. ಪ್ರಕರಣದ ಹಿನ್ನೆಲೆ: 2025ರ ಅಕ್ಟೋಬರ್ 19ರಂದು ತುಮಕೂರಿನಲ್ಲಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿತ್ತು. ಈ ವೇಳೆ ದಕ್ಷಿಣ ಕನ್ನಡ ಮತ್ತು ವಿಜಯಪುರ ತಂಡಗಳು ಮುಖಾಮುಖಿಯಾಗಿದ್ದವು. ಪಂದ್ಯದಲ್ಲಿ ದಕ್ಷಿಣ ಕನ್ನಡ ಗೆಲುವು ಸಾಧಿಸಲಿದೆ ಎಂಬುದಾಗಿ ಜಿಲ್ಲಾಧಿಕಾರಿ ನಾಗಭೂಷಣ್ ಅವರೊಂದಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ 500 ರೂ. ಬೆಟ್ಟಿಂಗ್ ಕಟ್ಟಿದ್ದರು. ಪಂದ್ಯ ಮುಗಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಡಾ.ಪರಮೇಶ್ವರ್ ಅವರು, ದಕ್ಷಿಣ ಕನ್ನಡ ಗೆಲ್ಲುವುದಾಗಿ ಜಿಲ್ಲಾಧಿಕಾರಿಗಳೊಂದಿಗೆ ಬೆಟ್ಟಿಂಗ್ ಕಟ್ಟಿ 500 ರೂ. ಕಳೆದುಕೊಂಡುಬಿಟ್ಟ ಎಂದು ಹೇಳಿದ್ದರು.

# ಇಂದು ಎಸ್‌ಎಸ್‌ಎಲ್‌ಸಿ ಫಲಿತಾಂಶ

ಬೆಂಗಳೂರು: ಲಕ್ಷಾಂತರ ವಿದ್ಯಾರ್ಥಿಗಳು ಹಾಗು ಪೋಷಕರುಗಳು ಕಾತುರದಿಂದ ನಿರೀಕ್ಷಿಸುತ್ತಿರುವ ಹತ್ತನೇ ತರಗತಿ ಪರೀಕ್ಷೆ – 1 ರ ಫಲಿತಾಂಶ ಗುರುವಾರ ಪ್ರಕಟವಾಗಲಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಕಾರ್ಯಾಲಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಫಲಿತಾಂಶದ ವಿವರಗಳನ್ನು ನಾಳೆ ಮಧ್ಯಾಹ್ನ 12 ಗಂಟೆಗೆ ಮಾಧ್ಯಮಗೋಷ್ಠಿಯಲ್ಲಿ ಘೋಷಣೆ ಮಾಡಲಿದ್ದಾರೆ.

ವಿದ್ಯಾರ್ಥಿಗಳು ನಾಳೆ ಮಧ್ಯಾಹ್ನ 12 ಗಂಟೆಯ ಬಳಿಕ ಎಸ್ ಎಸ್ ಎಲ್ ಸಿ ಪರೀಕ್ಷೆ – 1 ರ ಫಲಿತಾಂಶವನ್ನು https://karresults.nic.in ಲಿಂಕ್ ಮೂಲಕ ಮತ್ತು ಕರ್ನಾಟಕ ಒನ್ ಮೊಬೈಲ್ ಆಪ್ ಮೂಲಕವೂ ಪಡೆಯಬಹುದಾಗಿದೆ ಎಂದು ಮಾಧ್ಯಮ ಪ್ರಕಟಣೆಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಅಧ್ಯಕ್ಷರು ತಿಳಿಸಿದ್ದಾರೆ.

ಡಿಜಿಲಾಕರ್‌ನಲ್ಲಿ ಅಂಕಪಟ್ಟಿ: ದ್ವಿತೀಯ ಪಿಯುಸಿಯಂತೆಯೇ ಹತ್ತನೇ ತರಗತಿ ವಿದ್ಯಾರ್ಥಿಗಳಿಗೂ ಸಹ ಡಿಜಿಲಾಕರ್‌ನಲ್ಲಿ ಅಂಕಪಟ್ಟಿಗಳು ಲಭ್ಯವಾಗುವ ವ್ಯವಸ್ಥೆಯನ್ನು ಇದೇ ಮೊದಲ ಬಾರಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮಾಡಿದೆ. ವಿದ್ಯಾರ್ಥಿಗಳು https://digilocker.gov.in ಅನ್ನು ಬಳಸಿ ಅಂಕಪಟ್ಟಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ನಾಳೆ ಮಧ್ಯಾಹ್ನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಲಿದೆ. ಎಪ್ರಿಲ್ 24 ಅನ್ನು ತಾತ್ಕಾಲಿಕ ದಿನಾಂಕ ಎಂದು ನಾನು ಮೊದಲೇ ಹೇಳಿದ್ದೆ, ಆದರೆ ನಾವು ಒಂದು ದಿನ ಮುಂಚಿತವಾಗಿ ಫಲಿತಾಂಶ ಪ್ರಕಟಿಸುತ್ತಿದ್ದೇವೆ ಎಂದು ಮಧು ಬಂಗಾರಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ನಂತರ ಸುದ್ದಿಗಾರರಿಗೆ ತಿಳಿಸಿದರು. ತೃತೀಯ ಭಾಷಾ ಪತ್ರಿಕೆಗೆ ಗ್ರೇಡ್ ಬದಲು ಅಂಕ ನೀಡುವಂತೆ ಹೈಕೋರ್ಟ್ ಆದೇಶಿಸಿರುವ ಸಂಬಂಧ ಈ ಬಾರಿ ನಾವು ನ್ಯಾಯಾಲಯದ ಆದೇಶವನ್ನು ಪಾಲಿಸಬೇಕಾಗುತ್ತದೆ. ಹೆಚ್ಚಿನ ವಿವರಗಳನ್ನು ನಂತರ ನೀಡಲಾಗುವುದು ಎಂದರು. ಫಲಿತಾಂಶಗಳಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದೇನೆ. ಸಿಎಂ ಫಲಿತಾಂಶಗಳಿಂದ ತುಂಬಾ ಸಂತೋಷಪಟ್ಟಿದ್ದಾರೆ. ಅವರು ನಮಗೆ ಕೆಲವು ನಿರ್ದೇಶನಗಳನ್ನು ನೀಡಿದ್ದಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಾವು ಎಲ್ಲವನ್ನೂ ಗಣನೆಗೆ ತೆಗೆದುಕೊಂಡಿದ್ದೇವೆ ಎಂದು ಪ್ರತಿಕ್ರಿಯೆ ನೀಡಿದರು.

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 30-40 ಕಿ.ಮೀ ವೇಗದ ಗಾಳಿಯ ಜೊತೆಗೆ ಗುಡುಗು ಸಹಿತ ಮಳೆಯೂ ಆಗಬಹುದು ಎಂದು ಹವಾಮಾನ ಇಲಾಖೆ ತಿಳಿಸಿದೆ. ಏಪ್ರಿಲ್ 23ರವರೆಗೂ ಇದೇ ವಾತಾವರಣವಿರಲಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಣ ಹವೆಯಿರಲಿದೆ ಎನ್ನಲಾಗಿದೆ. ಉತ್ತರ ಒಳನಾಡಿನ ವಿಜಯಪುರ, ಬೆಳಗಾವಿ, ಹಾವೇರಿ ಮತ್ತು ಧಾರವಾಡ ಗುಡುಗು ಸಹಿತ ಮಳೆಯಾಗಲಿದ್ದು, ಉಳಿದೆಡೆ ಒಣ ಹವೆಯಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ರಾಜ್ಯದ ಹಲವೆಡೆ ಇಂದು ಮಳೆ ಸಾಧ್ಯತೆ

ಬೆಂಗಳೂರು: ಬೆಂಗಳೂರು ಸೇರಿದಂತೆ ಹಲವೆಡೆ ತಾಪಮಾನ ಹೆಚ್ಚಾಗಿದ್ದು, ಈಗಾಗಲೇ ಕರಾವಳಿ ಹಾಗೂ ಕಲ್ಯಾಣ ಕರ್ನಾಟಕವು ಬಿಸಿಲಿನ ಬೇಗೆ ತತ್ತರಿಸಿದೆ. ಆದರೆ ಇಂದು ಕರಾವಳಿ ಸೇರಿದಂತೆ ರಾಜ್ಯದ ಹಲವೆಡೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್ ಗೆ ಏರುವ ಸಾಧ್ಯತೆಯಿದೆ. ಹೀಗಾಗಿ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಅನಗತ್ಯವಾಗಿ ಹೊರಗೆ ಬರಬೇಡಿ, ಹೆಚ್ಚು ನೀರು ಸೇವಿಸಿ ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 30–40 ಕಿ.ಮೀ ವೇಗದ ಗಾಳಿಯ ಜೊತೆಗೆ ಗುಡುಗು ಸಹಿತ ಮಳೆಯೂ ಆಗಬಹುದು



ಎಂದು ಹವಾಮಾನ ಇಲಾಖೆ ತಿಳಿಸಿದೆ. ಏಪ್ರಿಲ್ 23ರವರೆಗೂ ಇದೇ ವಾತಾವರಣವಿರಲಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಣ ಹವೆಯಿರಲಿದೆ ಎನ್ನಲಾಗಿದೆ. ಉತ್ತರ ಒಳನಾಡಿನ ವಿಜಯಪುರ, ಬೆಳಗಾವಿ, ಹಾವೇರಿ ಮತ್ತು ಧಾರವಾಡ ಗುಡುಗು ಸಹಿತ ಮಳೆಯಾಗಲಿದ್ದು, ಉಳಿದೆಡೆ ಒಣ ಹವೆಯಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿಯೂ ಗುಡುಗು, ಸಿಡಿಲು ಸಹಿತ ಮಳೆಯಾಗಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಮುಂಬರುವ ದಿನಗಳಲ್ಲಿ ರಾಜ್ಯದೆಲ್ಲೆಡೆ ತಾಪಮಾನ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕಾ ಕ್ರಮ ವಹಿಸುವಂತೆ ಹವಾಮಾನ ಇಲಾಖೆ ಸೂಚಿಸಿದೆ.

ಅವಶ್ಯಕತೆ ಇಲ್ಲದೆ ಮನೆಯಿಂದ ಹೊರಬರುವುದನ್ನು ತಪ್ಪಿಸುಂತೆ ಹೇಳಲಾಗಿದೆ. ಬೇಸಿಗೆ ರಜೆಯಲ್ಲಿ ಮಕ್ಕಳು ಬಿಸಿಲಲ್ಲಿ ಆಟವಾಡುವುದನ್ನು ಆದಷ್ಟು ನಿಯಂತ್ರಿಸುವಂತೆ ಸೂಚಿಸಲಾಗಿದೆ.

# ಖರ್ಗೆ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು

ನವದೆಹಲಿ: ಪ್ರಧಾನಿ ನರೇಂದ್ರ ಮೋದಿಯನ್ನು ಭಯೋತ್ಪಾದಕ ಎಂದು ಕರೆದ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಬಿಜೆಪಿ ತೀವ್ರ ಆಕ್ರೋಶ ಹೊರಹಾಕಿದೆ. ಕೂಡಲೇ ಕಾಂಗ್ರೆಸ್ ಅಧ್ಯಕ್ಷರು ಸಾರ್ವಜನಿಕ ಕ್ಷಮೆಯಾಚಿಸುವಂತೆ ನಿರ್ದೇಶಿಸುವಂತೆ ಭಾರತೀಯ ಜನತಾ ಪಕ್ಷ (ಬಿಜೆಪಿ) ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಕಿರಣ್ ರಿಜಿಜು ಮತ್ತು ಅರ್ಜುನ್ ರಾಮ್ ಮೇಘವಾಲ್ ಅವರನ್ನೊಳಗೊಂಡ ಬಿಜೆಪಿ ನಿಯೋಗ ಈ ವಿಷಯವನ್ನು ಎತ್ತಲು ಚುನಾವಣಾ ಆಯೋಗವನ್ನು ಭೇಟಿ ಭೇಟಿ ಮಾಡಿದ್ದಾರೆ ಎನ್ನಲಾಗಿದೆ.

ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಿದ ಅರ್ಜಿಯಲ್ಲಿ, ಬಿಜೆಪಿ ನಾಯಕರು ಪ್ರಧಾನ ಮಂತ್ರಿ ಮೋದಿಯ ವಿರುದ್ಧದ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ತೀವ್ರ ಅವಹೇಳನಕಾರಿ ಮತ್ತು ಚುನಾವಣಾ ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಎಂದು ಆರೋಪಿಸಿದೆ. ಮಲ್ಲಿಕಾರ್ಜುನ ಖರ್ಗೆ ನೀಡಿದ ಹೇಳಿಕೆಗಳಿಗಾಗಿ ಭಾರತೀಯ ನ್ಯಾಯ ಸಂಹಿತೆಯ ವಿವಿಧ ವಿಭಾಗಗಳ ಅಡಿಯಲ್ಲಿ ಸೂಕ್ತ ದಂಡ ವಿಧಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪತ್ರದಲ್ಲಿ ಒತ್ತಾಯಿಸಲಾಗಿದೆ.

"ಅಣ್ಣಾದೊರೈ ಅವರ ಫೋಟೋ ಹಾಕುವ ಈ ಎಐಎಡಿಎಂಕೆ ಜನರು ಮೋದಿಯೊಂದಿಗೆ ಹೇಗೆ ಕೈಜೋಡಿಸುತ್ತಾರೆ? ಎಐಎಡಿಎಂಕೆ ಮೋದಿಯೊಂದಿಗೆ ಹೇಗೆ ಕೈ ಜೋಡಿಸಿದರು? ಅವರೊಬ್ಬ ಭಯೋತ್ಪಾದಕ. ಅವರು ಸಮಾನತೆಯನ್ನು ನಂಬುವುದಿಲ್ಲ. ಅವರ ಪಕ್ಷವೆಂದೂ ಸಮಾನತೆ ಮತ್ತು ನ್ಯಾಯವನ್ನು ನಂಬುವುದಿಲ್ಲ. ಅಂತಹ ಬಿಜೆಪಿಯೊಂದಿಗೆ ಎಐಎಡಿಎಂಕೆ ಸೇರುತ್ತಿದೆ. ಅಂದರೆ ಅವರು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದರ್ಥ" ಎಂದು ಖರ್ಗೆ ಹೇಳಿಕೆ ನೀಡಿದ್ದರು.

ತಮ್ಮ ಹೇಳಿಕೆ ವಿವಾದಕ್ಕೆ ಕಾರಣವಾದ ಕೂಡಲೆ ಪ್ರತಿಕ್ರಿಯೆ ನೀಡಿರುವ ಮಲ್ಲಿಕಾರ್ಜುನ ಖರ್ಗೆ, "ಪ್ರಧಾನಿ ಮೋದಿ ಯಾವಾಗಲೂ ನಮಗೆ ಬೆದರಿಕೆ ಹಾಕುತ್ತಾರೆ ಎಂದು ನಾನು ಹೇಳಿದ್ದೇನೆ. ಆದಾಯ ತೆರಿಗೆ ಇಲಾಖೆ, ಇಡಿ ಮತ್ತು ಇತರ ಸಂಸ್ಥೆಗಳು ಅವರ ಕೈಯಲ್ಲಿವೆ ಎಂದು ನಾನು ಹೇಳಿದ್ದೆ. ಅವರು ಭಯೋತ್ಪಾದಕ ಎಂದು ನಾನು ಖಂಡಿತವಾಗಿಯೂ ಹೇಳಲಿಲ್ಲ" ಎಂದು ಸ್ಪಷ್ಟನೆ ನೀಡಿದ್ದರು.

# ಪ್ರಿಯಕರನ ಜೀವಂತ ದಹನ ಮಾಡಿದ ಯುವತಿ

ಬೆಂಗಳೂರು: ಬೆಂಗಳೂರಿನ ಬ್ಯಾಡರಹಳ್ಳಿಯಲ್ಲಿ ಯುವತಿಯೊಬ್ಬಳು ತನ್ನ ಪ್ರಿಯಕರನನ್ನೇ ಜೀವಂತ ದಹನ ಮಾಡಿದ ಭೀಕರ ಘಟನೆಗೆ ಸಂಬಂಧಿಸಿದಂತೆ ಈಗ ಮತ್ತಷ್ಟು ಆಘಾತಕಾರಿ ವಿಚಾರಗಳು ಬಯಲಾಗಿವೆ. ಪ್ರಿಯಕರ ಕಿರಣ್‌ನನ್ನು ಕೊಲೆ ಮಾಡಿದ ಬಳಿಕ ತಾನೂ ಆತ್ಮಹತ್ಯೆ ಮಾಡಿಕೊಳ್ಳಲು ಆರೋಪಿ ಪ್ರೇಮಾ ಸ್ಕೆಚ್ ಹಾಕಿದ್ದಳು ಎಂಬ ಸ್ಫೋಟಕ ವಿಚಾರ ಪೊಲೀಸ್ ವಿಚಾರಣೆ ವೇಳೆ ಬಯಲಾಗಿದೆ. ಅಲ್ಲದೆ, ಅದಕ್ಕಾಗಿ ಏನೇನು ಸಿದ್ಧತೆ ಮಾಡಿಕೊಂಡಿದ್ದಳು ಎಂಬುದೂ ಗೊತ್ತಾಗಿದೆ.

ಪ್ರಿಯಕರ ಕಿರಣ್ ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಬಳಿಕ ಪ್ರೇಮಾ ಕೂಡ ಅದೇ ಬೆಂಕಿಯಲ್ಲಿ ಆಹುತಿಯಾಗಲು ನಿರ್ಧರಿಸಿದ್ದಳು. ಒಂದು ವೇಳೆ ಬೆಂಕಿಯಿಂದ ಬದುಕುಳಿದರೆ ಆತ್ಮಹತ್ಯೆ ಮಾಡಿಕೊಳ್ಳಲು ರೂಮಿನಲ್ಲಿ ವಿಷದ ಬಾಟಲಿ ಹಾಗೂ ಮಾತ್ರೆಗಳನ್ನು ಸಿದ್ಧಪಡಿಸಿಟ್ಟುಕೊಂಡಿದ್ದಳು. ಆದರೆ, ಕಿರಣ್ ಬೆಂಕಿಯಲ್ಲಿ ನರಳುತ್ತಾ ಕಿರುಚಾಡುತ್ತಿದ್ದಾಗ ಬೆಂಕಿಯ ತೀವ್ರತೆ ಹೆಚ್ಚಾದ ಕಾರಣ ಪ್ರೇಮಾ ಭಯಬಿದ್ದು ಹೊರಕ್ಕೆ ಓಡಿ ಬಂದಿದ್ದಾಳೆ. ಅರೆಬರೆ ಬಟ್ಟೆಯಲ್ಲಿದ್ದ ಆಕೆಯನ್ನು ಕಂಡು ಪಕ್ಕದ ಮನೆಯ ಮಹಿಳೆ ಮಾನವೀಯತೆಯ ದೃಷ್ಟಿಯಿಂದ ಬಟ್ಟೆ ನೀಡಿ ರಕ್ಷಿಸಿದ್ದರು.

ಕಳೆದ ನಾಲ್ಕು ವರ್ಷಗಳಿಂದ ಪರಿಚಿತರಾಗಿದ್ದ ಕಿರಣ್ ಮತ್ತು ಪ್ರೇಮಾ ಎರಡು ವರ್ಷಗಳಿಂದ ಪ್ರೀತಿಸುತ್ತಿದ್ದರು. ಆದರೆ ಇತ್ತೀಚೆಗೆ ಕಿರಣ್, ಪ್ರೇಮಾಳನ್ನು ಕಡೆಗಣಿಸಿ ತನ್ನ ಹಳೆಯ ಪ್ರಿಯತಮೆಯ ಜೊತೆ ಮತ್ತೆ ಸಂಪರ್ಕದಲ್ಲಿದ್ದ. ಮಾಜಿ ಪ್ರಿಯತಮೆಯ ಹುಟ್ಟುಹಬ್ಬವನ್ನು ಆಚರಿಸಿ ಕಿರಣ್ ಫೋಟೋಗಳನ್ನು ತೆಗೆಸಿಕೊಂಡಿದ್ದ. ಇದನ್ನು ಕಂಡು ಆಕ್ರೋಶಗೊಂಡ ಪ್ರೇಮಾ ಕಿರಣ್ ಜೊತೆ ಜಗಳವಾಡಿದ್ದಳು. ಕಿರಣ್ ಆಕೆಯ ನಂಬರ್ ಬ್ಲಾಕ್ ಮಾಡಿದ್ದರಿಂದ ಸೇಡು ಮತ್ತಷ್ಟು ಹೆಚ್ಚಾಗಿತ್ತು.

# ಪಹಲ್ಗಾಮ್ ದಾಳಿಗೆ 1 ವರ್ಷ..., ಅಳಿಸಿಲ್ಲ ರಕ್ತದ ಕಲೆಗಳು

ನವದೆಹಲಿ: ಪ್ರವಾಸಿಗರಲ್ಲಿ ಹಿಂದೂಗಳನ್ನು ಹುಡುಕಿ ಹತ್ಯೆ ಮಾಡಿದ ಪಹಲ್ಗಾಮ್ ಭಯೋತ್ಪಾದಕ ದಾಳಿ ಇಂದಿಗೆ (ಏ.22) ಒಂದು ವರ್ಷ ಪೂರ್ಣಗೊಂಡಿದೆ. ದಾಳಿಯಲ್ಲಿ ತಮ್ಮವರನ್ನು ಕಳೆದುಕೊಂಡ ಕುಟುಂಬದವರ ನೋವು, ಕಣ್ಣೀರು ಹಸಿಯಾಗಿಯೇ ಉಳಿದಿದೆ. ನಮ್ಮ ನೆಲಕ್ಕೆ ನುಗ್ಗಿ ನಮ್ಮವರನ್ನೇ ಗುಂಡಿಕ್ಕಿ ಕೊಂದ ಉಗ್ರರ ಅಟ್ಟಹಾಸ. ಭಯೋತ್ಪಾದಕರನ್ನು ಸದೆಬಡಿಯಲು ಭಾರತ ಕೈಗೊಂಡ ದಿಟ್ಟ ಕ್ರಮ. 'ಆಪರೇಷನ್ ಸಿಂಧೂರ' ಮತ್ತು 'ಆಪರೇಷನ್ ಮಹಾದೇವ' ಮೂಲಕ ಭಾರತೀಯ ಸೇನೆಯು ತೋರಿದ ಪರಾಕ್ರಮ. ಪ್ರತೀಕಾರದ ಕುದಿಯಲ್ಲಿ ಪಹಲ್ಗಾಮ್ ದಾಳಿಕೋರರನ್ನು ಹುಡುಕಿ ಸದೆಬಡಿದ ಚಿತ್ರಣಗಳು ಸ್ಮೃತಿಪಟಲದಲ್ಲಿ ಒಂದೊಂದಾಗಿ ತೆರೆದುಕೊಳ್ಳುತ್ತವೆ.

ಜಮ್ಮು–ಕಾಶ್ಮೀರದ ಪಹಲ್ಗಾಮ್ ಬಳಿಯ ಬೈಸರನ್ ಎಂಬ ಸುಂದರ ಪ್ರವಾಸಿ ತಾಣದಲ್ಲಿ



ಪ್ರವಾಸಿಗರು ಸಂಭ್ರಮದಲ್ಲಿದ್ದರು. ಪ್ರವಾಸಿಗರು ತೆರೆದ ಕಣಿವೆಯಲ್ಲಿ ಆನಂದಿಸುತ್ತಿದ್ದಾಗ ಇದ್ದಕ್ಕಿದ್ದಂತೆ, ಶಸ್ತ್ರಸಜ್ಜಿತ ವ್ಯಕ್ತಿಗಳು ಆ ಪ್ರದೇಶಕ್ಕೆ ಪ್ರವೇಶಿಸಿ ಮನಬಂದಂತೆ ಗುಂಡು ಹಾರಿಸಲು ಪ್ರಾರಂಭಿಸಿದರು. ಜನರು ಭಯಭೀತರಾಗಿ ದಿಕ್ಕಾಪಾಲಾಗಿ ಓಡಲು ಪ್ರಾರಂಭಿಸಿದರು. ಈ ವೇಳೆ ಪ್ರವಾಸಿಗರ ಮೇಲೆ ಏಕಾಏಕಿ ದಾಳಿ ನಡೆಸಿದ ಉಗ್ರರು, ಹಿಂದೂಗಳನ್ನು ಹುಡುಕಿ ಕೊಂದರು. ಭಯೋತ್ಪಾದಕರ ದಾಳಿಗೆ 26 ಮಂದಿ

ಜನರು ಭಯಭೀತರಾಗಿ ದಿಕ್ಕಾಪಾಲಾಗಿ ಓಡಲು ಪ್ರಾರಂಭಿಸಿದರು. ಈ ವೇಳೆ ಪ್ರವಾಸಿಗರ ಮೇಲೆ ಏಕಾಏಕಿ ದಾಳಿ ನಡೆಸಿದ ಉಗ್ರರು, ಹಿಂದೂಗಳನ್ನು ಹುಡುಕಿ ಕೊಂದರು. ಭಯೋತ್ಪಾದಕರ ದಾಳಿಗೆ 26 ಮಂದಿ ಪ್ರವಾಸಿಗರು ಪ್ರಾಣ ಕಳೆದುಕೊಂಡರು. ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಹಲವರು ಗಾಯಗೊಂಡರು. ಕಣ್ಣೆದುರೇ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಸ್ಥರ ದುಃಖ ಮುಗಿಲು ಮುಟ್ಟಿತು. ಹೆಣ್ಣೊಬ್ಬಳು ತನ್ನ ಪತಿಯ ಮೃತದೇಹದ ಮುಂದೆ ಕುಳಿತು ಅಳುತ್ತಿದ್ದ ದೃಶ್ಯ ಮನಕಲಕುವಂತಿತ್ತು.

ಪ್ರವಾಸಿಗರು ಪ್ರಾಣ ಕಳೆದುಕೊಂಡರು. ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಹಲವರು ಗಾಯಗೊಂಡರು. ಕಣ್ಣೆದುರೇ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಸ್ಥರ ದುಃಖ ಮುಗಿಲು ಮುಟ್ಟಿತು. ಹೆಣ್ಣೊಬ್ಬಳು ತನ್ನ ಪತಿಯ ಮೃತದೇಹದ ಮುಂದೆ ಕುಳಿತು ಅಳುತ್ತಿದ್ದ ದೃಶ್ಯ ಮನಕಲಕುವಂತಿತ್ತು.

ಭಯೋತ್ಪಾದಕ ದಾಳಿಯ ಹೊಣೆಯನ್ನು ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಹೊತ್ತುಕೊಂಡಿದೆ. ಇದು ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪುಗಳೊಂದಿಗೆ ಸಂಪರ್ಕ ಹೊಂದಿದೆ. ಆದರೆ, ಪಾಕಿಸ್ತಾನ ಮಾತ್ರ ಈ ದಾಳಿಯಲ್ಲಿ ತನ್ನದೇನೂ ಪಾತ್ರವಿಲ್ಲ ಅಂತ ನಾಟಕವಾಡಿತು. ಪಾಕ್ ಮೂಲದ ಭಯೋತ್ಪಾದಕ ಸಂಘಟನೆ ಲಷ್ಕರ್–ಎ–ತೊಯ್ಬಾ ಕಮಾಂಡರ್ ಸಾಜಿದ್ ಜಾಟ್ ಸೇರಿದಂತೆ ಏಳು ಆರೋಪಿಗಳನ್ನು ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾಯಿತು. ದಾಳಿಯ ಹಿಂದಿನ ಪಾಕ್ ಪಿತೂರಿಯನ್ನು ಸಹ ಎನ್‌ಐಎ ಬಹಿರಂಗಪಡಿಸಿತು.

ದಾಳಿಯ ಬೆನ್ನಲ್ಲೇ ಭದ್ರತಾ ಪಡೆಗಳು ಸ್ಥಳಕ್ಕೆ ಧಾವಿಸಿ ಪ್ರದೇಶವನ್ನು ಸುರಕ್ಷಿತಗೊಳಿಸಿದವು. ತುರ್ತು ಸೇವೆಗಳನ್ನು ಸಕ್ರಿಯಗೊಳಿಸಲಾಯಿತು. ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ಸಾಗಿಸಲಾಯಿತು. ಜನರು ಸುರಕ್ಷಿತ ಸ್ಥಳಕ್ಕೆ ತಲುಪಲು ಸಹಾಯ ಮಾಡುವಲ್ಲಿ ಸ್ಥಳೀಯ ನಿವಾಸಿಗಳು, ಪೋನಿ ಹ್ಯಾಂಡ್ಲರ್‌ಗಳು ಮತ್ತು ಮಾರ್ಗದರ್ಶಕರು ನಿರ್ಣಾಯಕ ಪಾತ್ರ ವಹಿಸಿದರು. ಅವರ ತ್ವರಿತ ಪ್ರತಿಕ್ರಿಯೆಯು ಇನ್ನೂ ಹೆಚ್ಚಿನ ಸಾವು–ನೋವುಗಳನ್ನು ತಡೆಯಲು ಸಹಾಯ ಮಾಡಿತು. ಈ ದಾಳಿಯು ಇಡೀ ರಾಷ್ಟ್ರವನ್ನು ಆಘಾತಗೊಳಿಸಿತು.

23/04/2026
# ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

## ಯುವ ನಟಿ ಮಧು ಗುಬ್ಬಿ ಮಧುಶ್ರೀ ಆರಾಧ್ಯ: ಕನ್ನಡದಿಂದ ದಕ್ಷಿಣ ಭಾರತದ ಚಿತ್ರರಂಗದತ್ತ ಬೆಳೆಯುತ್ತಿರುವ ಪ್ರತಿಭೆ

ಕನ್ನಡ ಚಿತ್ರರಂಗದಲ್ಲಿ ಇತ್ತೀಚೆಗೆ ವೇಗವಾಗಿ ಗಮನ ಸೆಳೆಯುತ್ತಿರುವ ಯುವ ಕಲಾವಿದೆ ಮಧುಶ್ರೀ ಆರಾಧ್ಯ ಅವರು ತಮ್ಮ ಅಭಿನಯದ ಮೂಲಕ ಪ್ರೇಕ್ಷಕರ ಮನಗೆದ್ದಿದ್ದಾರೆ. ಧಾರಾವಾಹಿ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿ ಸಮಾನವಾಗಿ ತಮ್ಮ ಪ್ರತಿಭೆಯನ್ನು ತೋರಿಸುತ್ತಿರುವ ಅವರು, ಕನ್ನಡದ ಜೊತೆಗೆ ತೆಲುಗು ಮತ್ತು ತಮಿಳು ಭಾಷೆಗಳಲ್ಲಿಯೂ ಅವಕಾಶಗಳನ್ನು ಪಡೆದುಕೊಳ್ಳುತ್ತಿರುವುದು ವಿಶೇಷ.

ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಜನಿಸಿದ ಮಧುಶ್ರೀ ಆರಾಧ್ಯ ಅವರು ತಂದೆ ಚನ್ನಬಸವ ಆರಾಧ್ಯ ಹಾಗೂ ತಾಯಿ ಪಾರ್ವತಮ್ಮ ಅವರ ಮುದ್ದಿನ ಮಗಳು. ಬಾಲ್ಯದಿಂದಲೇ ಕಲೆಯ ಮೇಲೆ ಆಸಕ್ತಿ ಹೊಂದಿದ್ದ ಅವರು, ತಮ್ಮ ಪರಿಶ್ರಮ ಮತ್ತು ಸಮರ್ಪಣೆಯಿಂದ ಇಂದಿನ ಮಟ್ಟಿಗೆ ಬೆಳೆಯುತ್ತಿದ್ದಾರೆ.

ಇದುವರೆಗೆ ಅವರು 30ಕ್ಕೂ ಹೆಚ್ಚು ಸಿನಿಮಾ ಧಾರಾವಾಹಿಗಳು ಮತ್ತು ಸಿನಿಮಾಗಳಲ್ಲಿ ಅಭಿನಯಿಸಿದ್ದು, ಪ್ರೇಕ್ಷಕರಲ್ಲಿ ಉತ್ತಮ ಹೆಸರು ಗಳಿಸಿದ್ದಾರೆ. ಪ್ರಮುಖವಾಗಿ “ಪುಟ್ಟಕನ ಮಕ್ಕಳು”, “ಗಟ್ಟಿಮೇಳ”, “ಶ್ರೀ ರಷ್ಟು ಶುಭ ಮಸ್ತು”, “ಕಲರ್ಸ್ ಕನ್ನಡ ವಧು” ಮೊದಲಾದ ಜನಪ್ರಿಯ ಧಾರಾವಾಹಿಗಳಲ್ಲಿ ತಮ್ಮ ಅಭಿನಯದ



ಮೂಲಕ ಗುರುತಿಸಿಕೊಂಡಿದ್ದಾರೆ. ಅದಲ್ಲದೆ “ಮೂವಿ”, “ಬಿಟ್ ಪೊಲೀಸ್”, “ಹೀರೋಯಿನ್”, “ಪೈನ” ಸೇರಿದಂತೆ ಹಲವು ಪ್ರಾಜೆಕ್ಟ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಏಪ್ರಿಲ್ 24ರಂದು ಬಿಡುಗಡೆಯಾಗಲಿರುವ “ಪುನೀತ್ ನಿವಾಸ” ಚಿತ್ರದಲ್ಲಿ ಅವರು ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವುದು ಅವರ ಕರಿಯರ್‌ನ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಈ ಚಿತ್ರದ ಮೂಲಕ ಅವರು ಇನ್ನಷ್ಟು ದೊಡ್ಡ ಮಟ್ಟದಲ್ಲಿ ಗುರುತಿಸಿಕೊಳ್ಳುವ ನಿರೀಕ್ಷೆಯಿದೆ.

> ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಜನಿಸಿದ ಮಧುಶ್ರೀ ಆರಾಧ್ಯ ಅವರು ತಂದೆ ಚನ್ನಬಸವ ಆರಾಧ್ಯ ಹಾಗೂ ತಾಯಿ ಪಾರ್ವತಮ್ಮ ಅವರ ಮುದ್ದಿನ ಮಗಳು. ಬಾಲ್ಯದಿಂದಲೇ ಕಲೆಯ ಮೇಲೆ ಆಸಕ್ತಿ ಹೊಂದಿದ್ದ ಅವರು, ತಮ್ಮ ಪರಿಶ್ರಮ ಮತ್ತು ಸಮರ್ಪಣೆಯಿಂದ ಇಂದಿನ ಮಟ್ಟಿಗೆ ಬೆಳೆಯುತ್ತಿದ್ದಾರೆ.

ಸರಳ ವ್ಯಕ್ತಿತ್ವ, ಶ್ರಮ ಮತ್ತು ಪ್ರತಿಭೆಯ ಸಂಯೋಜನೆಯಾದ ಮಧುಶ್ರೀ ಆರಾಧ್ಯ ಅವರು ಭವಿಷ್ಯದಲ್ಲಿ ದಕ್ಷಿಣ ಭಾರತದ ಪ್ರಮುಖ ನಟಿಯರಲ್ಲೊಬ್ಬರಾಗುವ ಸಾಧ್ಯತೆ ಹೆಚ್ಚಾಗಿದೆ. ಅವರ ಮುಂದಿನ ಸಾಧನೆಗಳಿಗೆ ಸಿನಿರಂಗ ಹಾಗೂ ಅಭಿಮಾನಿಗಳಿಂದ ಹೆಚ್ಚಿನ ನಿರೀಕ್ಷೆಯಿದೆ.

## ಕ್ರಾಂತಿಕಾರಿ ರಿಯಾಲಿಟಿ ಶೋ ಆಯೋಜನೆ

ಬೆಂಗಳೂರು

ಭಾರತೀಯ ಮನರಂಜನಾ ಲೋಕದ ದಿಕ್ಕನ್ನೇ ಬದಲಿಸುವ ನಿಟ್ಟಿನಲ್ಲಿ ‘ಗ್ಯಾಮೆನ್ ಸ್ಪೋರ್ಟ್ಸ್ ಅಂಡ್ ಎಂಟರ್ಟೈನ್ಮೆಂಟ್ ಪ್ರೈವೇಟ್ ಲಿಮಿಟೆಡ್’ ಸಂಸ್ಥೆಯು ‘ಬಿಗ್ ಪಿಚ್ಚರ್’ ಎಂಬ ಕ್ರಾಂತಿಕಾರಿ ರಿಯಾಲಿಟಿ ಶೋ ಅನ್ನು ಘೋಷಿಸಿದೆ. ಚಲನಚಿತ್ರ ನಿರ್ಮಾಣದ ಜವಾಬ್ದಾರಿಯನ್ನು ನೇರವಾಗಿ ಪ್ರೇಕ್ಷಕರ ಕೈಗೇ ನೀಡುವ ಈ ಶೋ, ಶೀಘ್ರದಲ್ಲೇ ಜಿಯೋ ಹಾಟ್ ಸ್ಟಾರ್ ನಲ್ಲಿ ಐದು ಭಾಷೆಗಳಲ್ಲಿ ಪ್ರಸಾರವಾಗಲಿದೆ. “ನೀವು ಯಾವಾಗಲೂ ಸಿನಿಮಾಗಳನ್ನು ವಿಮರ್ಶಿಸಿದ್ದೀರಿ, ಈಗ ನೀವೇ ಒಂದು ಸಿನಿಮಾ ಮಾಡಿ” ಎಂಬ ಸವಾಲನ್ನು ಈ ಶೋ ದೇಶದ ಜನರ ಮುಂದಿಟ್ಟಿದೆ.



ಇಂದಿನ ಕಾಲದಲ್ಲಿ ಸಿನಿಮಾಗಳು ಬಿಡುಗಡೆಯಾದ ತಕ್ಷಣವೇ ಸ್ಮಾರ್ಟ್ ಫೋನ್ಗಳಲ್ಲಿ ವಿಮರ್ಶೆ ಮಾಡುವವರ ಸಂಖ್ಯೆ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ, ‘ಬಿಗ್ ಪಿಚ್ಚರ್’ 15 ವಾರಗಳ ಕಾಲ ನಡೆಯುವ ಪ್ರಯಾಣವಾಗಿದ್ದು, ಪ್ರೇಕ್ಷಕರನ್ನೇ ಕಥೆಗಾರರು, ನಿರ್ದೇಶಕರು, ನಟರು ಮತ್ತು ನಿರ್ಣಯಕಾರರನ್ನಾಗಿ ಮಾಡುತ್ತದೆ. ಸಿನಿಮಾ ನಿರ್ಮಾಣದ ಹಿಂದಿರುವ ಶ್ರಮ ಮತ್ತು ಪ್ರೇಕ್ಷಕರ ನಿರೀಕ್ಷೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಶೋನ ಅಂತ್ಯದಲ್ಲಿ “ಜನರಿಂದ, ಜನರಿಗಾಗಿ” ತಯಾರಾದ ಚಲನಚಿತ್ರವು ದೇಶಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

ದ ಸ್ಟಾಬೋರ್ಡ್: ಪ್ರತಿ ಸಂಚಿಕೆಯಲ್ಲಿ ಪ್ರದರ್ಶಿಸಲಾಗುವ ಬೃಹತ್ ಡಿಜಿಟಲ್ ಹಬ್ ಇದಾಗಿದ್ದು, ಭಾರತದಾದ್ಯಂತ ಸಲ್ಲಿಕೆಯಾಗುವ ಸಾವಿರಾರು ಕಥೆಗಳು, ಆಡಿಷನ್ಗಳು ಮತ್ತು ಸಂಗೀತದ ಟ್ಯೂನ್ಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ.

ದ ಮದರ್ಬೋರ್ಡ್: ಇದು ಕಾರ್ಯಕ್ರಮದ ಮುಖ್ಯ ಕೇಂದ್ರ. ಇಲ್ಲಿ ಪ್ರೇಕ್ಷಕರು ಮತ್ತು ಅನುಭವಿ ಮಾರ್ಗದರ್ಶಕರು ಅತ್ಯುತ್ತಮವಾದ ಪ್ರತಿಭೆಗಳನ್ನು ಆಯ್ಕೆ ಮಾಡುತ್ತಾರೆ. ವಾರಗಳು ಕಳೆದಂತೆ, ಚಲನಚಿತ್ರದ ಅಂತಿಮ ತಾರಾಗಣ, ತಾಂತ್ರಿಕ ತಂಡ ಮತ್ತು ಚಿತ್ರಕಥೆಯು ಇಲ್ಲಿ ರೂಪುಗೊಳ್ಳುತ್ತದೆ.

ಗ್ಯಾಮೆನ್ ಸ್ಪೋರ್ಟ್ಸ್ ಅಂಡ್ ಎಂಟರ್ಟೈನ್ಮೆಂಟ್ ಪ್ರೈವೇಟ್ ಲಿಮಿಟೆಡ್ನ ನಿರ್ಮಾಪಕ ಮಿ. ರಾವ್ ಮಾತನಾಡಿ “ಪ್ರತಿ ಶುಕ್ರವಾರ ಬಿಡುಗಡೆಯಾಗುವ ಸಿನಿಮಾದ ವರ್ಷಗಳ ಕಠಿಣ ಶ್ರಮವನ್ನು ಕೇವಲ ಕೆಲವು ನಿಮಿಷಗಳ ವಿಮರ್ಶೆಯಲ್ಲಿ ಅಳೆದುಹಾಕಲಾಗುತ್ತದೆ. ‘ಬಿಗ್ ಪಿಚ್ಚರ್’ ಮೂಲಕ ನಾವು ಈ ಚಿತ್ರಣವನ್ನು ಬದಲಿಸಲು ಬಯಸಿದ್ದೇವೆ. ಸಿನಿಮಾ ನಿರ್ಮಾಣದ ಒತ್ತಡ ಮತ್ತು ಅದರ ಗಾಂಭೀರ್ಯ ಪ್ರೇಕ್ಷಕರಿಗೆ ತಿಳಿಯಬೇಕು ಎಂಬುದು ನಮ್ಮ ಆಸೆ. ಇದು ಕೇವಲ ಒಂದು ಶೋ ಅಲ್ಲ, ಇದೊಂದು ಚಳುವಳಿ. ಭಾರತದ ಮೂಲೆ ಮೂಲೆಯಲ್ಲಿರುವ ಅಡಗಿರುವ ಪ್ರತಿಭೆಗಳನ್ನು ಹೊರತರುವುದು ನಮ್ಮ ಗುರಿ,” ಎಂದರು.

## ಮನೆಗಳ ಟೆರೇಸ್ ರಕ್ಷಣೆಗೆ ಸೂಕ್ತ ಉತ್ಪನ್ನ ಡ್ಯಾಂಪ್ ಪ್ರೂಫ್: ಅಮಿತ್ ಸಿಂಗಲ್

ಮಂಗಳೂರು: “ದಕ್ಷಿಣ ಭಾರತದ ಪ್ರತೀ ಮನೆಗಳ ಟೆರೇಸ್ ಗಳು ಕೂಡ ಸಂಭ್ರಮದ ತಾಣಗಳಾಗಿರುತ್ತವೆ. ಅಂಥಾ ಟೆರೇಸ್ ಗಳಿಗೆ ಸೋರಿಕೆ ಅಥವಾ ಶಾಖದಿಂದ ತೊಂದರೆ ಆಗದಂತೆ ಇರಲು ಏಷ್ಯನ್ ಪೇಂಟ್ಸ್ ನ ‘ಡ್ಯಾಂಪ್ ಪ್ರೂಫ್’ ಉತ್ಪನ್ನ ನೆರವಾಗಲಿದೆ. ಈ ಕುರಿತು ವಿಶೇಷ ಅಭಿಯಾನ ಬಿಡುಗಡೆಯಾಗಿದೆ” ಎಂದು ಏಷ್ಯನ್ ಪೇಂಟ್ಸ್ ಲಿಮಿಟೆಡ್ ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಓ ಅಮಿತ್ ಸಿಂಗಲ್ ಹೇಳಿದ್ದಾರೆ.




ಏಷ್ಯನ್ ಪೇಂಟ್ಸ್ ನ ‘ಡ್ಯಾಂಪ್ ಪ್ರೂಫ್’ ಉತ್ಪನ್ನದ ಕುರಿತ ವಿನೂತನ ಸೂಪರ್ ಸ್ಟಾರ್ ಅಭಿಯಾನವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ದಕ್ಷಿಣ ಭಾರತದ ಮನೆಗಳ ಟೆರೇಸ್ ಗಳು ದೈನಂದಿನ ಚಟುವಟಿಕೆ ಮತ್ತು ಸಂಭ್ರಮಾಚರಣೆಯ ತಾಣಗಳು. ಆದರೆ ಮಳೆಗಾಲದಲ್ಲಿನ ನೀರಿನ ಸೋರಿಕೆ ಮತ್ತು ಬೇಸಿಗೆಯ ಸುಡುವ ತಾಪಮಾನ ಈ ಸಂಭ್ರಮಕ್ಕೆ ಅಡ್ಡಿಪಡಿಸುವುದು ಸಾಮಾನ್ಯವಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಲು ಏಷ್ಯನ್ ಪೇಂಟ್ಸ್ ಡ್ಯಾಂಪ್ ಪ್ರೂಫ್ ಉತ್ಪನ್ನ ತಂದಿದೆ. ಜೊತೆಗೆ ವಿಶೇಷ ಅಭಿಯಾನ ಕೂಡ ಅನಾವರಣ ಮಾಡಲಾಗಿದೆ. ಈ ಅಭಿಯಾನ ಚಿತ್ರದಲ್ಲಿ ‘ರೌಡಿ ಬೇಬಿ’ ಹಾಡಿನ ಧಾಟಿಯನ್ನು ಬಳಸಿಕೊಳ್ಳಲಾಗಿದ್ದು, ಜನರಿಗೆ ಸುಲಭವಾಗಿ ಮತ್ತು ಆಕರ್ಷಕವಾಗಿ ತಲುಪಿಸುವ ಪ್ರಯತ್ನ ಮಾಡಲಾಗಿದೆ.

## ಚಿಕಿತ್ಸಾ ವೆಚ್ಚಗಳು ಹೆಚ್ಚಾಗುತ್ತಿವೆ: ಕೇರ್ ಹೆಲ್ತ್ ಇನ್ಶೂರನ್ಸ್ ವರದಿ

ಬೆಂಗಳೂರು

ಭಾರತವು ಬೆಳೆಯುತ್ತಿರುವ, ಆದರೆ ಗುರುತಿಸಲ್ಪಡದ ಯಕೃತ್ತಿನ ಆರೋಗ್ಯ ಬಿಕ್ಕಟ್ಟು ಎದುರಿಸುತ್ತಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಪ್ರಕಾರ, ಆಲ್ಕೊಹಾಲ್ ರಹಿತ ಕೊಬ್ಬಿನ ಯಕೃತ್ತಿನ ಕಾಯಿಲೆ– ಎನ್ಎಎಫ್ಎಲ್‌ಡಿ ಒಟ್ಟಾರೆ ಜನಸಂಖ್ಯೆಯ 9%ರಿಂದ 32% ಪ್ರಮಾಣದ ಜನರಿಗೆ ಪರಿಣಾಮ ಬೀರುತ್ತಿದೆ, ಇದು ಸುಮಾರು 3 ವ್ಯಕ್ತಿಗಳಲ್ಲಿ ಒಬ್ಬರ ಮೇಲೆ ಪರಿಣಾಮ ಬೀರುತ್ತಿದ್ದು, ಇದನ್ನು ‘ಮೂಕ ಸಾಂಕ್ರಾಮಿಕ’ ಎಂದು ಗುರುತಿಸಲಾಗುತ್ತಿದೆ. ಯಕೃತ್ತಿಗೆ ಸಂಬಂಧಿಸಿದ ವೈದ್ಯಕೀಯ ಪರಿಸ್ಥಿತಿಗಳು ಈಗಾಗಲೇ ಒಟ್ಟು ಸಾವುಗಳಲ್ಲಿ 66%ಗಿಂತ ಹೆಚ್ಚಿನ ಪ್ರಮಾಣಕ್ಕೆ ಕಾರಣವಾಗಿವೆ, ಹೆಚ್ಚುತ್ತಿರುವ ಚಿಕಿತ್ಸಾ ವೆಚ್ಚಗಳಿಂದಾಗಿ ಜನರಿಗೆ ಆರ್ಥಿಕ ಹೊರೆಯಾಗಿದೆ. ಭಾರತವು ತನ್ನ ಎನ್‌ಪಿ–ಎನ್‌ಸಿಡಿ(ಸಾಂಕ್ರಾಮಿಕವಲ್ಲದ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣದ ರಾಷ್ಟ್ರೀಯ ಕಾರ್ಯಕ್ರಮ) ಕಾರ್ಯಕ್ರಮಕ್ಕೆ ಎನ್ಎಎಫ್ಎಲ್‌ಡಿ ಸ್ಕ್ರೀನಿಂಗ್ ಸಂಯೋಜಿಸಿದ್ದರೂ, ಈ ನೀತಿಯ ಆವೇಗವು ಬಲವಾದ ವೈಯಕ್ತಿಕ ಮಟ್ಟದ ಆರ್ಥಿಕ ಸಿದ್ಧತೆಗೆ ಪೂರಕವಾಗಿರಬೇಕು.

ವಿಶ್ವ ಯಕೃತ್ತಿನ ಸಂರಕ್ಷಣೆ ದಿನದ ಸಂದರ್ಭದಲ್ಲಿ, ಕೇರ್ ಹೆಲ್ತ್ ಇನ್ಶುರೆನ್ಸ್‌ನ ದತ್ತಾಂಶವು ವೈಯಕ್ತಿಕ ಮತ್ತು ಮನೆಯ ಮಟ್ಟದಲ್ಲಿ ಎದುರಾಗಿರುವ ಸವಾಲಿನ ತೀವ್ರತೆಯನ್ನು ಎತ್ತಿ ತೋರಿಸುತ್ತದೆ. ಚಿಕಿತ್ಸಾ ತೀವ್ರತೆಯ ಹೆಚ್ಚಳ, ಜನಸಂಖ್ಯಾ ಮತ್ತು ಭೌಗೋಳಿಕ ಹೆಜ್ಜೆಗುರುತು ಸ್ಥಿರವಾಗಿ ವಿಸ್ತರಿಸುವುದರಿಂದ ಕಳೆದ 3 ವರ್ಷಗಳಲ್ಲಿ ಯಕೃತ್ತಿಗೆ ಸಂಬಂಧಿಸಿದ ಕ್ಲೈಮ್‌ಗಳು ದ್ವಿಗುಣಗೊಂಡಿವೆ ಎಂದು ವಿಶ್ಲೇಷಣೆ ಸೂಚಿಸುತ್ತಿದೆ. ಯಕೃತ್ತಿನ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ವೈದ್ಯಕೀಯ ವೆಚ್ಚಗಳು ಇಂದು 3 ವರ್ಷಗಳ ಹಿಂದಿನದಕ್ಕಿಂತ ಸುಮಾರು 100% ಹೆಚ್ಚಾಗಿದೆ. ಯಕೃತ್ತಿನ ಕಾಯಿಲೆ ಚಿಕಿತ್ಸೆಯ ವಿರುದ್ಧ ಸಾಕಷ್ಟು ಆರ್ಥಿಕ ರಕ್ಷಣೆಗಾಗಿ ಕನಿಷ್ಠ 15 ಲಕ್ಷ ರೂ. ಮತ್ತು ಅದಕ್ಕಿಂತ ಹೆಚ್ಚಿನ ರಕ್ಷಣೆಯು ಮೂಲಾಧಾರವಾಗುತ್ತಿದೆ ಎಂದು ಕ್ಲೈಮ್ ಅನುಭವವು ಸೂಚಿಸುತ್ತಿದೆ. ಯುವ ಪಾಲಿಸಿದಾರರಲ್ಲಿ ವರ್ಷದಿಂದ ವರ್ಷಕ್ಕೆ 5–10% ಯಕೃತ್ತಿನ ಕಾಯಿಲೆಗಳ ಹೆಚ್ಚಳ, 2 ಮತ್ತು 3ನೇ ಶ್ರೇಣಿಯ ನಗರಗಳಲ್ಲಿ ವಾರ್ಷಿಕ 10–15% ಕ್ಲೇಮ್‌ಗಳ ಹೆಚ್ಚಳ ಮತ್ತು ಮಹಿಳಾ ಪಾಲಿಸಿದಾರರಲ್ಲಿ ವರ್ಷದಿಂದ ವರ್ಷಕ್ಕೆ ಸುಮಾರು 10% ಕ್ಲೇಮ್‌ಗಳ ಹೆಚ್ಚಳ ಆಗುತ್ತಿರುವುದನ್ನು ಈ ದತ್ತಾಂಶ ಸೂಚಿಸುತ್ತಿದೆ.

## ಬಿಜೆಪಿ ಕಚೇರಿಯಲ್ಲಿ ಕ್ರಾಂತಿಯೋಗಿಗೆ ಗೌರವ ನಮನ

ತುಮಕೂರು

ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಸೋಮವಾರ ಬಸವ ಜಯಂತಿ ಅಂಗವಾಗಿ ಮುಖಂಡರು ಜಗಜ್ಯೋತಿ ಬಸವಣ್ಣ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಬಸವಣ್ಣ ನಾಡಿಗೆ ಕೊಟ್ಟ ಕೊಡುಗೆ ಸ್ಮರಿಸಿದರು.



ಜಿಲ್ಲಾ ಬಿಜೆಪಿ ಅಧ್ಯಕ್ಷ ಎಚ್.ಎಸ್. ರವಿಶಂಕರ್ ಹೆಬ್ಬಾಕ ಮಾತನಾಡಿ, ಶ್ರೇಷ್ಠ ವಚನಕಾರ, ವಿಶ್ವಗುರು ಬಸವಣ್ಣನವರು ಸಾರಿದ ತತ್ವಗಳು ಜಾತ್ಯತೀತತೆ, ಕಾಯಕ, ದಾಸೋಹ ಮತ್ತು ಸಮಾನತೆಯ ಆಧಾರದಲ್ಲಿವೆ. ಕಾಯಕವೇ ಕೈಲಾಸ ಎಂದು ಹೇಳಿ ದುಡಿದದ್ದನ್ನು ಸಮಾಜದೊಂದಿಗೆ ಹಂಚಿಕೊಳ್ಳಬೇಕೆಂದ ಆದರ್ಶ ಸಮಾಜದ ಪರಿಕಲ್ಪನೆ ಬಿತ್ತಿದರು ಎಂದು ಹೇಳಿದರು.

ಆಗಲೇ ಮಹಿಳಾ ಸಬಲೀಕರಣದ ಧ್ವನಿ ಎತ್ತಿದ್ದ ಬಸವಣ್ಣನವರು ಮಹಿಳೆಯರಿಗೆ ಸಮಾನ ಅವಕಾಶ, ವೇದಿಕೆ ಕಲ್ಪಿಸಿದರು. ಜಾತಿಭೇದವಿಲ್ಲದೆ ಮಾನವರೆಲ್ಲರೂ ಒಂದೇ ಎಂದು ಮಾನವ ಧರ್ಮ ಪ್ರತಿಪಾದಿಸಿದ ಬಸವಣ್ಣ, ಶ್ರೇಷ್ಠ ಮಾನವತಾವಾದಿ. ದಯವಿಲ್ಲದ ಧರ್ಮ ಯಾವುದಯ್ಯ ಎಂದು ಹೇಳಿ ಸಕಲ ಪ್ರಾಣಿ–ಪಕ್ಷಿ, ಮನುಷ್ಯರಲ್ಲಿ ದಯೆ ತೋರುವುದೇ ನಿಜವಾದ ಧರ್ಮ ಎಂದು ಸಾರಿದ ಬಸವಣ್ಣನವರ ತತ್ವಗಳನ್ನು ಎಲ್ಲರೂ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಬಿಜೆಪಿ ಹಿರಿಯ ಉಪಾಧ್ಯಕ್ಷ ವೈ.ಹೆಚ್. ಹುಚ್ಚಯ್ಯ ಮಾತನಾಡಿ, ಜಾತಿ ವೈಷಮ್ಯಗಳನ್ನು ಬಿಟ್ಟು ಮನುಷ್ಯ ಸಮಾನತೆ ಸಾರಿದ ದಾರ್ಶನಿಕರು ಬಸವಣ್ಣ. ಬಸವಣ್ಣನವರ ತತ್ವಗಳು ಎಲ್ಲಾ ಧರ್ಮಗಳಿಗೂ ಆದರ್ಶಪ್ರಾಯ. ಸಮಾಜ ಸುಧಾರಣೆ, ಹೆಣ್ಣುಮಕ್ಕಳಿಗೆ ಸಮಾನ ಅವಕಾಶ ಸೇರಿದಂತೆ ನಮ್ಮ ಸಂವಿಧಾನಕ್ಕೆ ಮಿಗಿಲಾದ ಆಶಯಗಳ ಆದರ್ಶ ಸಮಾಜವನ್ನು ಕಟ್ಟುವ ಪ್ರಯತ್ನ ಮಾಡಿದ್ದರು ಎಂದು ಹೇಳಿದರು.

ಸಪ್ತಗಿರಿ ಕಾಲೇಜಿನ ಶಿಕ್ಷಣಾಧಿಕಾರಿ ಚನ್ನಪ್ಪ ಬಾರಿಗಿಡದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಬಸವಣ್ಣನವರ ಆದರ್ಶಗಳನ್ನು ಪರಿಚಯಿಸಿದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸಾಗರನಹಳ್ಳಿ ವಿಜಯಕುಮಾರ್, ಕಾರ್ಯದರ್ಶಿಗಳಾದ ಹೆಚ್.ಎಂ. ರವೀಶಯ್ಯ, ಜ್ಯೋತಿ ತಿಪ್ಪೇಸ್ವಾಮಿ, ನಗರ ಅಧ್ಯಕ್ಷ ಟಿ.ಕೆ. ಧನುಷ್, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಪ್ಪ, ಜಿಲ್ಲಾ ವಕ್ತಾರ ಟಿ.ಆರ್. ಸದಾಶಿವಯ್ಯ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ನವಚೇತನ್, ಒಬಿಸಿ ಮೋರ್ಚಾ ಅಧ್ಯಕ್ಷ ಕೆ.ವೇದಮೂರ್ತಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಸಿದ್ಧರಾಮಣ್ಣ, ನಗರಪಾಲಿಕೆ ಮಾಜಿ ಮೇಯರ್ ಬಿ.ಜಿ. ಕೃಷ್ಣಪ್ಪ, ಮುಖಂಡರಾದ ಕೆ. ಮಲ್ಲಿಕಾರ್ಜುನ್, ಬಂಬೂ ಮೋಹನ್, ಪಂಚಾಕ್ಷರಯ್ಯ, ಗಂಗಾಧರ್ ಸೇರಿದಂತೆ ವಿವಿಧ ಮೋರ್ಚಾಗಳ ಮುಖಂಡರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ನಗರದ ಸರ್ಕಾರಿ ಜ್ಯೂನಿಯರ್ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಿಜೆಪಿಯಿಂದ ಪುರಸ್ಕಾರ ನೀಡಿ ಗೌರವಿಸಲಾಯಿತು. ಇದೇ ವೇಳೆ ಕೊಪ್ಪಲ್ ಸಿದ್ಧವೀರಯ್ಯ ಮತ್ತು ಪಾರ್ವತಮ್ಮ ಪ್ರತಿಷ್ಠಾನದಿಂದ ಕೊಪ್ಪಲ್ ನಾಗರಾಜು ಅವರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಿಸಿದರು.

## 18ನೇ ಆವೃತ್ತಿಗೆ 36,000 ಕ್ಕೂ ಹೆಚ್ಚು ಸ್ಪರ್ಧಿಗಳು ಸಜ್ಜು

ಬೆಂಗಳೂರು: ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೋಡ್ ರೇಸ್, ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರು ಪ್ರವರ್ತಕ ಪ್ರೊಕ್ಯಾಮ್ ಇಂಟರ್ನ್ಯಾಷನಲ್ ಇಂದು 2026 ರ ಏಪ್ರಿಲ್ 26ರಂದು ಭಾನುವಾರ ನಡೆಯಲಿರುವ ರೇಸ್ ದಿನದ ವ್ಯವಸ್ಥೆಗಳು ಮತ್ತು ಮುನ್ನೆಚ್ಚರಿಕೆಗಳನ್ನು ವಿವರಿಸಿದೆ. 18ನೇ ಆವೃತ್ತಿಯನ್ನು ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣೆಕ್ ಶಾ ಪರೇಡ್ ಮೈದಾನದಿಂದ ಹಸಿರು ನಿಶಾನೆ ತೋರಲಾಗುವುದು ಮತ್ತು ಗಾರ್ಡನ್ ಸಿಟಿಯಲ್ಲಿ ದಾಖಲೆಯ 36,000 ಕ್ಕೂ ಹೆಚ್ಚು ಓಟಗಾರರ ಭಾಗವಹಿಸುವಿಕೆಗೆ ಸಾಕ್ಷಿಯಾಗಲಿದೆ.

ಮಾಧ್ಯಮ ಕೇಂದ್ರದಲ್ಲಿ ನಡೆದ ಸಭೆ ಮತ್ತು ಶುಭಾಶಯ ಅಧಿವೇಶನದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿದ್ದರು, ಅವರು ಓಟವನ್ನು ಉತ್ತಮವಾಗಿ ನಿರ್ವಹಿಸುವುದನ್ನು




ಖಚಿತಪಡಿಸಿಕೊಳ್ಳುವಲ್ಲಿ ತಮ್ಮ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಚರ್ಚಿಸಿದರು. ಓಟದ ಪೂರ್ವ ಮತ್ತು ನಂತರದ ಹಂತಗಳಲ್ಲಿ ಓಟಗಾರರನ್ನು ಉತ್ತಮವಾಗಿ ಬೆಂಬಲಿಸಲಾಗುತ್ತದೆ ಮತ್ತು ಕಾಳಜಿ ವಹಿಸಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಅವರು ಬಿಂಬಿಸಿದರು. ಈ ಕಾರ್ಯಕ್ರಮಕ್ಕೆ ಭಾರತೀಯ ಸೇನೆ, ಕರ್ನಾಟಕ ಮತ್ತು ಕೇರಳ ಉಪ ಪ್ರದೇಶಗಳು ಬೆಂಬಲ ನೀಡುತ್ತವೆ.

ರೇಸ್–ಡೇ ಪರಿಸ್ಥಿತಿಗಳು ಮತ್ತು ಕೋರ್ಸ್ ಬಗ್ಗೆ ತಮ್ಮ ಮೌಲ್ಯಮಾಪನವನ್ನು ಹಂಚಿಕೊಂಡ ಹಗ್ ಜೋನ್ಸ್,“ ಹವಾಮಾನವು ಪ್ರಮುಖ ಸಮಯದ ಮೇಲೆ ಪ್ರಭಾವ ಬೀರುತ್ತದೆ, ಆದರೆ ಕೋರ್ಸ್ ಉತ್ತಮ ಸ್ಥಿತಿಯಲ್ಲಿದೆ. ಪ್ರಮುಖ ಸುಧಾರಣೆಗಳಲ್ಲಿಒಂದು ಹಲಸೂರು ಕೆರೆಯ ಸುತ್ತಲಿನ ಪೂರ್ಣ ವಿಸ್ತಾರಕ್ಕೆ ಮರಳುವುದು.

## ಹೊಚ್ಚಹೊಸ ಲುಮಿಯೊ ವಿಷನ್ 9 (2026) ಬಿಡುಗಡೆ

ಬೆಂಗಳೂರು: ಗೃಹ ಮನರಂಜನೆಯನ್ನು ಮರು ವ್ಯಾಖ್ಯಾನಿಸುವ ಹೊಸ ಯುಗದ ಗ್ರಾಹಕ ತಂತ್ರಜ್ಞಾನ ಬ್ರಾಂಡ್ ಲುಮಿಯೊ ತನ್ನ ಹೊಚ್ಚಹೊಸ ಲುಮಿಯೊ ವಿಷನ್ 9 (2026) ಬಿಡುಗಡೆ ಮಾಡಿದ್ದು ಇದು ಇಲ್ಲಿಯವರೆಗಿನ ಅತ್ಯಂತ ಶಕ್ತಿಯುತ ಮತ್ತು ಸಂಪೂರ್ಣ ಸ್ಮಾರ್ಟ್ ಟಿ.ವಿ.ಯಾಗಿದೆ. ನಿಧಾನ, ಅಡೆತಡೆಯ ಟೆಲಿವಿಷನ್ ಅನುಭವಗಳ ಸಮಸ್ಯೆಯನ್ನು ಪರಿಹರಿಸಲು ನಿರ್ಮಿಸಲಾದ ವಿಷನ್ 9 (2026) 65–ಇಂಚು ಮತ್ತು 55–ಇಂಚು ಮಾದರಿಗಳಲ್ಲಿ ದೊರೆಯುತ್ತದೆ.




ಇದು ಲುಮಿಯೊದ ಬಾಸ್ ಕಾರ್ಯಕ್ಷಮತೆ ಮತ್ತು ಡೋಪ್ 2 ಪಿಕ್ಚರ್ ಟ್ಯೂನಿಂಗ್ ಅನ್ನು ಒಟ್ಟಿಗೆ ತರುವ ಮೂಲಕ ಎಂದಿಗೂ ನಿಧಾನಗೊಳ್ಳದ ವೇಗದ, ಸರಾಗ ಮತ್ತು ತಲ್ಲೀನಗೊಳಿಸುವ ಟಿ.ವಿ. ಅನುಭವವನ್ನು ನೀಡುತ್ತದೆ. ಸ್ಮಾರ್ಟ್ ಟಿ.ವಿ. ಮಾರುಕಟ್ಟೆಯು ಬ್ರಾಂಡ್–ಕೇಂದ್ರಿತ ನಿರ್ಧಾರಗಳಿಂದ ಅನುಭವ–ಕೇಂದ್ರಿತ ಆಯ್ಕೆಗಳತ್ತ ಬದಲಾಗುತ್ತಿದ್ದು ಕಾರ್ಯಕ್ಷಮತೆ, ವೇಗ ಮತ್ತು ವಿಶ್ವಾಸಾರ್ಹತೆಯು ಮುಖ್ಯವಾಗಿದೆ. ಲುಮಿಯೊ ಈ ಬದಲಾವಣೆಯನ್ನು ಕಾರ್ಯಕ್ಷಮತೆ–ಪ್ರಥಮ ವಿಧಾನದಿಂದ ಮುನ್ನಡೆಸುತ್ತಿದ್ದು ಇದು ನಿಜ ಜೀವನದ ಬಳಸಬಲ್ಲತೆ ಹೊಂದಿದೆ.

## ಹೊಸ ಒಪ್ಪೋ ಎಫ್33 ಸರಣಿ ಬಿಡುಗಡೆ

ನವದೆಹಲಿ: ಒಪ್ಪೋ ಇಂಡಿಯಾ ಇಂದು ಭಾರತದಲ್ಲಿ ತನ್ನ ಹೊಸ ಒಪ್ಪೋ ಎಫ್33 ಸರಣಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿದೆ. ಈ ಸರಣಿಯಲ್ಲಿ ಒಪ್ಪೋ ಎಫ್33 ಪ್ರೊ 5ಜಿ ಹಾಗೂ ಒಪ್ಪೋ ಎಫ್33 5ಜಿ ಮಾದರಿಗಳು ಸೇರಿವೆ.

ಎಫ್33 ಸರಣಿ ಒಪ್ಪೋ ಎಫ್ ಸರಣಿಯಲ್ಲಿ ಇದುವರೆಗೆ ಕಂಡ ಅತ್ಯಂತ ದೊಡ್ಡ ಅಪ್‌ಗ್ರೇಡ್ ಆಗಿದ್ದು, ವಿಭಾಗದಲ್ಲಿಯೇ ಅತ್ಯುತ್ತಮವಾದ 50 ಮೆಗಾಪಿಕ್ಸೆಲ್ ಅಲ್ಟ್ರಾ–ವೈಡ್ ಸೆಲ್ಫಿ ಕ್ಯಾಮೆರಾ, ಐಪಿ69ಕೆ ದರ್ಜೆಯ ಬಾಳಿಕೆ ಶಕ್ತಿ, ಭಾರೀ 7000 ಎಂಎಎಚ್ ಬ್ಯಾಟರಿ, ಕಲರ್ ಓಎಸ್ 16 ಮತ್ತು 5ಜಿ ಪ್ಲಸ್ ಪ್ಲಸ್ ಸಂಪರ್ಕತೆ ಸೇರಿದಂತೆ ಹಲವು ಸುಧಾರಿತ ವೈಶಿಷ್ಟ್ಯಗಳನ್ನು ಹೊಂದಿದೆ.

ಬಿಡುಗಡೆ ಕುರಿತು ಮಾತನಾಡಿದ ಒಪ್ಪೋ ಇಂಡಿಯಾ ಸಂವಹನ ವಿಭಾಗದ ಮುಖ್ಯಸ್ಥ ಗೋಲ್ಡಿ ಪಟ್ನಾಯಕ್ ಅವರು, “ಎಫ್ ಸರಣಿ ಭಾರತದಲ್ಲಿ ‘ದೃಢವಾದ ಚಾಂಪಿಯನ್’ ಎಂಬ ಹೆಸರನ್ನು ಪಡೆದಿದೆ. ನೈಜ ಜೀವನದ ಪರಿಸ್ಥಿತಿಗಳಿಗೆ ತಕ್ಕಂತೆ ನಿರ್ಮಿಸಲಾದ ಸ್ಮಾರ್ಟ್‌ಫೋನ್ ಆಗಿದ್ದು, ಎಫ್33 ಸರಣಿ ಆ ಭರವಸೆಯನ್ನು ಇನ್ನಷ್ಟು ಬಲಪಡಿಸುತ್ತದೆ. 100 ಡಿಗ್ರಿ ವೀಕ್ಷಣಾ ಕ್ಷೇತ್ರ ಹೊಂದಿರುವ 50 ಮೆಗಾಪಿಕ್ಸೆಲ್ ಅಲ್ಟ್ರಾ–




ವೈಡ್ ಸೆಲ್ಫಿ ಕ್ಯಾಮೆರಾ ಹಾಗೂ ಹಲವು ಕೃತಕ ಬುದ್ಧಿಮತ್ತೆ ಆಧಾರಿತ ಚಿತ್ರಣ ವೈಶಿಷ್ಟ್ಯಗಳು ಬಳಕೆದಾರರಿಗೆ ಅತ್ಯುತ್ತಮ ಅನುಭವ ನೀಡುತ್ತವೆ,” ಎಂದು ಹೇಳಿದರು. ಅವರು ಮುಂದುವರಿದು, “ಬಾಳಿಕೆ ಶಕ್ತಿ ಮತ್ತು ಉತ್ತಮ ಫೋಟೋಗ್ರಫಿ ನಡುವಿನ ಆಯ್ಕೆ ಮಾಡಬೇಕಾದ ಅಗತ್ಯವೇ ಇಲ್ಲ. ಮಳೆಯಂತಹ ಕಠಿಣ ಪರಿಸ್ಥಿತಿಗಳಲ್ಲೂ ಕಾರ್ಯನಿರ್ವಹಿಸುವ ಫೋನ್ ಮತ್ತು ಗುಂಪಿನ ಪ್ರತಿಯೊಬ್ಬರನ್ನೂ ಸ್ಪಷ್ಟವಾಗಿ ಸೆರೆಹಿಡಿಯುವ ಕ್ಯಾಮೆರಾ ಎರಡನ್ನೂ ಎಫ್33 ಸರಣಿ ಒಟ್ಟಿಗೆ ನೀಡುತ್ತದೆ.

## ಬೆಂಗಳೂರಿನಲ್ಲಿ ‘ಮೈಸೂರು ಡೈನಿಂಗ್ ಹಾಲ್’: ಸಾಂಪ್ರದಾಯಿಕ ಊಟದ ಶೈಲಿಗೆ ಮರುಹುಟ್ಟು

ಬೆಂಗಳೂರು

ನಗರದಲ್ಲಿ ಹೊಸ ರೀತಿಯ ‘ಫುಡ್–ಫಸ್ಟ್’ ಡೈನಿಂಗ್ ವ್ಯವಸ್ಥೆಯೊಂದು ಆರಂಭವಾಗಿದೆ. ‘ಮೈಸೂರು ಡೈನಿಂಗ್ ಹಾಲ್’, ಸಾಂಪ್ರದಾಯಿಕ ಡೈನಿಂಗ್ ಹಾಲ್‌ಗಳ ಶಿಸ್ತು ಮತ್ತು ಲಯಬದ್ಧತೆಯಿಂದ ಸ್ಫೂರ್ತಿ ಪಡೆದಿದ್ದು, ಸಮಯಬದ್ಧವಾಗಿ ಊಟದ ಅನುಭವವನ್ನು ನೀಡುವ ಹೊಸ ಪರಿಕಲ್ಪನೆಯನ್ನು ಪರಿಚಯಿಸಿದೆ.




ಈ ಡೈನಿಂಗ್ ಹಾಲ್ ರಚನೆ, ಸಮಯಪಾಲನೆ ಮತ್ತು ಪುನರಾವರ್ತನೆಯ ತತ್ವಗಳ ಮೇಲೆ ರೂಪುಗೊಂಡಿದೆ. ಇದು ಕೇವಲ ಒಂದು ರೆಸ್ಟೋರೆಂಟ್ ಅಲ್ಲ, ಬದಲಾಗಿ ಊಟವನ್ನು ಸರಳಗೊಳಿಸುವ ಮತ್ತು ಜನರು ಮತ್ತೆ ಮತ್ತೆ ಭೇಟಿ ನೀಡಲು ಪ್ರೇರೇಪಿಸುವ ಒಂದು ಸುಸಜ್ಜಿತ ವ್ಯವಸ್ಥೆಯಾಗಿದೆ. ಇಲ್ಲಿ ಊಟದ ಸಮಯ ನಿಗದಿತವಾಗಿದ್ದು, ದಿನವಿಡೀ ಕ್ರಮಬದ್ಧವಾದ ಸೇವೆಯನ್ನು ಒದಗಿಸುತ್ತದೆ.

ಮೈಸೂರು ಡೈನಿಂಗ್ ಹಾಲ್‌ನ ಪ್ರಮುಖ ಆಕರ್ಷಣೆ ‘ಥಾಲಿ’. ಸ್ಟೇನ್‌ಲೆಸ್ ಸ್ಟೀಲ್ ತಟ್ಟೆಗಳಲ್ಲಿ ಬಡಿಸುವ ಈ ಥಾಲಿ, ಗ್ರಾಹಕರಿಗೆ ಏನು ತಿನ್ನಬೇಕು ಎಂಬ ಗೊಂದಲವನ್ನು ನಿವಾರಿಸಿ, ಸಂಪೂರ್ಣವಾದ ಮತ್ತು ತೃಪ್ತಿದಾಯಕ ಊಟವನ್ನು ನೀಡುವ ಉದ್ದೇಶವನ್ನು ಹೊಂದಿದೆ. ಇಲ್ಲಿನ ಮೆನು ಕಾಲಕಾಲಕ್ಕೆ ಬದಲಾದರೂ, ಬಡಿಸುವ ವಿಧಾನ ಮತ್ತು ಲಯಬದ್ಧತೆ ಒಂದೇ ಆಗಿರುತ್ತದೆ.

ಸೀಮಿತವಾದ ‘ಅ ಲಾ ಕಾರ್ಟೆ’ ಆಯ್ಕೆಗಳಿದ್ದರೂ, ಅವು ಥಾಲಿ ವ್ಯವಸ್ಥೆಗೆ ಪೂರಕವಾಗಿವೆಯೇ ಹೊರತು ಮುಖ್ಯ ಮೆನುವಿನೊಂದಿಗೆ ಪೈಪೋಟಿ ನಡೆಸುವುದಿಲ್ಲ. ಈ ಮೂಲಕ ಊಟದ ಅನುಭವದ ಮೇಲೆ ಕೇಂದ್ರೀಕರಿಸಲಾಗಿದೆ.

“ಮೈಸೂರು ಡೈನಿಂಗ್ ಹಾಲ್ ಎಂದರೆ ಹೊಸತನದ ಅನ್ವೇಷಣೆಯಲ್ಲ, ಬದಲಾಗಿ ಜನರು ನಂಬಿದ್ದ ಆ ಹಳೆಯ ಶಿಸ್ತುಬದ್ಧ ವ್ಯವಸ್ಥೆಯನ್ನು ಮತ್ತೆ ಪರಿಚಯಿಸುವ ಪ್ರಯತ್ನ,” ಎಂದು ಈ ಯೋಜನೆಯ ತಂಡ ತಿಳಿಸಿದೆ.

ನಿಗದಿತ ಸಮಯ, ಸರಳೀಕೃತ ಊಟದ ಪದ್ಧತಿ ಮತ್ತು ಪರಿಚಿತ ವಿನ್ಯಾಸದೊಂದಿಗೆ, ಮೈಸೂರು ಡೈನಿಂಗ್ ಹಾಲ್ ಬೆಂಗಳೂರಿನ ಜನರಿಗೆ ಹಳೆಯ ಕಾಲದ ನೆನಪನ್ನು ತರುವ ಜೊತೆಗೆ, ಶಿಸ್ತುಬದ್ಧ ಮತ್ತು ತೃಪ್ತಿದಾಯಕ ಭೋಜನದ ಅನುಭವವನ್ನು ನೀಡುತ್ತದೆ. ಸ್ಥಳ:ಯಾಕೇ ಬಾರ್ ಅಂಡ್ ಕ್ಯಾಂಟೀನ್ ಕೆಳಭಾಗ, ಬೆಂಗಳೂರು.

## ಸಾಮಾಜಿಕ ಒಳಿತಿಗಾಗಿ 5 ಕೋಟಿ ರೂ.ಗಳನ್ನು ಸಂಗ್ರಹ

ಬೆಂಗಳೂರು

ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ವರ್ಲ್ಡ್ 10 ಕೆ ಬೆಂಗಳೂರು ತನ್ನ 18ನೇ ಆವೃತ್ತಿಗಾಗಿ ಹೊಸ ಹುರುಪಿನೊಂದಿಗೆ ಮರಳಲು ಸಜ್ಜಾಗಿದೆ. ಇದು ಸಾಮಾಜಿಕ ವಲಯವನ್ನು #EndendiguBengaluru, ಫಾರೆವರ್ ಬೆಂಗಳೂರು ಸ್ಫೂರ್ತಿಯೊಂದಿಗೆ ಒಟ್ಟುಗೂಡಿಸುತ್ತದೆ. ಕಾರ್ಪೊರೇಟ್ಗಳು, ವ್ಯಕ್ತಿಗಳು ಮತ್ತು ಓಟಗಾರರ ಬೆಂಬಲದೊಂದಿಗೆ ಯುನೈಟೆಡ್ ವೇ ಬೆಂಗಳೂರು ನಡೆಸುತ್ತಿರುವ ಕೂಟದ ಲೋಕೋಪಕಾರಿ ಸ್ತಂಭವು ಈ ವರ್ಷ ಈಗಾಗಲೇ 5 ಕೋಟಿ ರೂ.ಗಳನ್ನು ಸಂಗ್ರಹಿಸಿದೆ, ಇದು 16 ಕಾರಣಗಳಲ್ಲಿ94ಕ್ಕೂ ಹೆಚ್ಚು ಎನ್ಜಿಒಗಳಿಗೆ ಪ್ರಯೋಜನವನ್ನು ನೀಡುತ್ತದೆ.




ವರ್ಷಗಳಲ್ಲಿ, ಈ ವೇದಿಕೆಯು ಅಸಾಧಾರಣವಾಗಿ ಬೆಳೆದಿದೆ, 260 ಕ್ಕೂ ಹೆಚ್ಚು ಎನ್ಜಿಒಗಳಿಗೆ 59.20 ಕೋಟಿ ರೂ. ಗಳನ್ನು ಸಂಗ್ರಹಿಸಿದೆ ಮತ್ತು ಲೋಕೋಪಕಾರಕ್ಕಾಗಿ ದಕ್ಷಿಣ ಭಾರತದ ಅತಿದೊಡ್ಡ ಕ್ರೀಡಾ ವೇದಿಕೆಯಾಗಿ ವಿಕಸನಗೊಂಡಿದೆ. ಈವರ್ಷವೊಂದರಲ್ಲೇ, 43ಕ್ಕೂ ಹೆಚ್ಚು ಕಂಪನಿಗಳು ಮತ್ತು 215ಕ್ಕೂ ಹೆಚ್ಚು ವೈಯಕ್ತಿಕ ನಿಧಿಸಂಗ್ರಹಕಾರರು ಒಟ್ಟಿಗೆ ಸೇರಿದ್ದಾರೆ.

## ರಿಯಲ್ಟರ್‌ಗಳ ಕಮಿಷನ್ ಪಾವತಿ ಭದ್ರ

ಬೆಂಗಳೂರು: ಭಾರತದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಬ್ರೋಕರೇಜ್ ವ್ಯವಹಾರಗಳ ರಚನೆಯನ್ನು ಮತ್ತಷ್ಟು ಪಾರದರ್ಶಕ ಮತ್ತು ನಂಬಿಕೆ ಆಧಾರಿತವಾಗಿಸುವ ದಿಶೆಯಲ್ಲಿ ಮಹತ್ವದ ಹೆಜ್ಜೆಯಾಗಿ, ಬೆಂಗಳೂರು ಆಧಾರಿತ ಡೆವಲಪರ್ ಸಂಸ್ಥೆ




ಎಸ್‌ಜೆಆರ್ ಪ್ರೈಮ್‌ಕಾರ್ಪ್ ಸಂಸ್ಥೆ ಎರಡು ಕೋಟಿ ರೂಪಾಯಿ ಮೊತ್ತವನ್ನು ಎಸ್ಕ್ರೋ ಖಾತೆಯಲ್ಲಿ ಠೇವಣಿ ಇಟ್ಟು, ಕಾನ್ಫೆಡರೇಶನ್ ಆಫ್ ರಿಯಲ್ ಎಸ್ಟೇಟ್ ಅಸೋಸಿಯೇಟ್ಸ್ (ಇಂಡಿಯಾ) ಸಂಸ್ಥೆಗೆ ಸಂಬಂಧಿಸಿದ ರಿಯಲ್ಟರ್‌ಗಳ ಕಮಿಷನ್ ಪಾವತಿಯನ್ನು ಭದ್ರಪಡಿಸಿದೆ.

ಈ ಘೋಷಣೆ ಬೆಂಗಳೂರಿನ ತಾಜ್ ಎಂ.ಜಿ. ರೋಡ್‌ನಲ್ಲಿ ನಡೆದ ಕೈಗಾರಿಕಾ ಕಾರ್ಯಕ್ರಮದಲ್ಲಿ, ಕಾನ್ಫೆಡರೇಶನ್ ಆಫ್ ರಿಯಲ್ ಎಸ್ಟೇಟ್ ಅಸೋಸಿಯೇಟ್ಸ್ (ಇಂಡಿಯಾ) ಮತ್ತು ನ್ಯಾಷನಲ್ ಅಸೋಸಿಯೇಶನ್ ಆಫ್ ರಿಯಲ್ಟರ್ಸ್ ಇಂಡಿಯಾ ಸಂಸ್ಥೆಗಳ ಹಿರಿಯ ನಾಯಕತ್ವದ ಸಮ್ಮುಖದಲ್ಲಿ ಮಾಡಲಾಯಿತು.

ಈ ವ್ಯವಸ್ಥೆಯ ಪ್ರಕಾರ, ಎಸ್ಕ್ರೋ ಖಾತೆಯನ್ನು ಎಸ್‌ಜೆಆರ್ ಪ್ರೈಮ್‌ಕಾರ್ಪ್ ಮತ್ತು ಕಾನ್ಫೆಡರೇಶನ್ ಆಫ್ ರಿಯಲ್ ಎಸ್ಟೇಟ್ ಅಸೋಸಿಯೇಟ್ಸ್ (ಇಂಡಿಯಾ) ಸಂಸ್ಥೆಗಳು ಸಂಯುಕ್ತವಾಗಿ ನಿರ್ವಹಿಸಲಿವೆ. ಈ ನಿಧಿಯನ್ನು ಡೆವಲಪರ್ ಸಂಸ್ಥೆಯ ಯೋಜನೆಗಳಲ್ಲಿ ವ್ಯವಹಾರಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಸದಸ್ಯ ರಿಯಲ್ಟರ್‌ಗಳಿಗೆ ಕಮಿಷನ್ ಪಾವತಿಸಲು ಮಾತ್ರ ಬಳಸಲಾಗುತ್ತದೆ.

# ‘ಸಮಾಜದ ಸಮಸ್ಯೆಗಳಿಗೆ ಬಸವ ತತ್ವದಲ್ಲಿ ಪರಿಹಾರವಿದೆ’

ತುಮಕೂರು

ಬಸವಣ್ಣ ಎಂದರೆ ವ್ಯಕ್ತಿಯಲ್ಲ, ಅದೊಂದು ಶಕ್ತಿ, ಅದೊಂದು ತತ್ವ. ಬಸವ ತತ್ವದಲ್ಲಿ ಸಮಾಜದ ಎಲ್ಲಾ ಸಮಸ್ಯೆಗಳಿಗೂ ಪರಿಹಾರವಿದೆ. ಇಂದು ಪ್ರಾಚ್ಯದೇಶಗಳಲ್ಲಿ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ನಾವು ಇಂತಹ ಆಚರಣೆಗಳನ್ನು ಮಾಡಿಕೊಂಡು ನೆಮ್ಮದಿಯಾಗಿದ್ದೇವೆಂದರೆ ಅದಕ್ಕೆ ಅನೇಕ ಮಹನೀಯರು ಕೊಟ್ಟ ಚಿಂತನೆಗಳೇ ಕಾರಣ ಎಂದು ಸಿದ್ಧಗಂಗಾ ಮಠದ ಶಿವಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ನಗರ ವೀರಶೈವ ಸಮಾಜ ಸೇವಾ ಸಮಿತಿ ಹಾಗೂ ಅಂಗಸಂಸ್ಥೆಗಳು ಜಗದ್ಗುರು ರೇಣುಕಾಚಾರ್ಯರು, ಜಗಜ್ಯೋತಿ ಬಸವೇಶ್ವರರು, ಹಾಗೂ ಕಾಯಕಯೋಗಿ ಸಿದ್ಧರಾಮೇಶ್ವರರ ಜಯಂತ್ಯೋತ್ಸವದ ಅಂಗವಾಗಿ ಭಾನುವಾರ ಸಂಜೆ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ವೀರಶೈವ ಧರ್ಮ ಸಮ್ಮೇಳನದ ದಿವ್ಯಸಾನಿಧ್ಯವಹಿಸಿ ಮಾತನಾಡಿದ ಸ್ವಾಮೀಜಿ, ಬಸವಣ್ಣನವರ ತತ್ವಗಳು ಸಾರ್ವಕಾಲಿಕವಾಗಿವೆ. ನಮ್ಮಲ್ಲಿ ಬಸವಪ್ರಜ್ಞೆ ಮೂಡದಿದ್ದರೆ ಅವರ ಜಯಂತಿಗಳು ಕೇವಲ ಸಮಾರಂಭವಾಗುತ್ತವೆ ಅಷ್ಟೇ ಎಂದರು.



ಅಂದಿನ ಕಾಲದಲ್ಲಿ ಇದ್ದ ಸಾಮಾಜಿಕ ಅಸಮಾನತೆ, ಹೆಣ್ಣು-ಗಂಡಿನ ನಡುವಿನ ತಾರತಮ್ಯ, ಮೇಲುಕೀಳು, ಜಾತಿ ವೈಷಮ್ಯ, ಮೂಢ ನಂಬಿಕೆ ಇವುಗಳ ಬಗ್ಗೆ ಆಲೋಚನೆ ಮಾಡಿದ ಬಸವಣ್ಣ ಇವುಗಳು ಮಾನವನ ಉನ್ನತಿಗೆ ತೊಡಕಾಗಿವೆ ಎಂದು ತೊಡೆದುಹಾಕುವ ಪ್ರಯತ್ನ ಮಾಡಿದರು. ಸರ್ವಸಮಾನತೆಯ ಸಂದೇಶ ಸಾರಿದರು. ಬಸವಣ್ಣನವರು ಸರ್ವ ಸಮಾಜಗಳ ಕ್ರಾಂತಿಕಾರರಾದರು ಎಂದು ಸ್ವಾಮೀಜಿ ಹೇಳಿದರು.

ಶಾಸಕ ಜಿ.ಬಿ. ಜ್ಯೋತಿಗಣೇಶ್ ಮಾತನಾಡಿ, ನಮ್ಮ ಸಮಾಜದ ಪರಂಪರೆಯನ್ನು ಮುಂದುವರೆಸಲು ಯುವಪೀಳಿಗೆ ಜವಾಬ್ದಾರಿ ತೆಗೆದುಕೊಳ್ಳಬೇಕು. ಸಮಾಜದ ಅಸ್ತಿತ್ವ ಉಳಿಸಲು ಯಾವ ರೀತಿಯ ಕಾರ್ಯಗಳನ್ನು ಮಾಡಬೇಕು ಎಂಬ ಬಗ್ಗೆ ಚರ್ಚೆ ಆಗಬೇಕು. ಇಂದು ವೀರಶೈವ ಸಮಾಜ ವಿಶ್ವದಾದ್ಯಂತ ಇದೆ. ಹೊರದೇಶಗಳಲ್ಲೂ ಬಸವ ಜಯಂತಿ ಕಾರ್ಯಕ್ರಮ ನಡೆಯುತ್ತಿವೆ ಎಂದರು.

ವೀರಶೈವ ಸಮಾಜವು ವಿಶ್ವಮಟ್ಟದಲ್ಲಿ ಪ್ರಚಾರ ಪಡೆದಿದೆಯೆಂದರೆ ಅದಕ್ಕೆ ನಮ್ಮ ಮಠಮಾನ್ಯಗಳ ಮಠಾಧೀಶರುಗಳೇ ಪ್ರಮುಖ ಕಾರಣ. ಸಮಾಜ ಬಂಧುಗಳು ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡು ಯಶಸ್ವಿಯಾಗಬೇಕು. ಹಾಗೇ ನಮ್ಮ ಸಮಾಜದ ಅಸ್ತಿತ್ವದ ಬಗ್ಗೆಯೂ ಚಿಂತನೆ ಮಾಡಬೇಕು ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ. ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಿ, ವಿಶ್ವವನ್ನು ನನ್ನ ಕುಟುಂಬದಂತೆ ಭಾವಿಸುವುದು ಧರ್ಮದ ಸಂದೇಶ. ಸಮಾಜಕ್ಕೆ ಒಳಿತು ಮಾಡುವುದು, ಹೃದಯಗಳನ್ನು ಬೆಸೆಯುವುದು, ಭಾವನೆಗಳಿಗೆ ಧಕ್ಕೆಯಾಗದಂತೆ ಎಲ್ಲರನ್ನು ಒಟ್ಟಿಗೆ ಕರೆದುಕೊಂಡು ಹೋಗುವುದು ಧರ್ಮದ ಉದ್ದೇಶ, ಮಾನವ ಧರ್ಮಕ್ಕೆ ಜಯವಾಗಲಿ ಎಂದ ರೇಣುಕಾಚಾರ್ಯಕರು, ಬಸವಣ್ಣ, ಸಿದ್ಧರಾಮೇಶ್ವರರು ಸೇರಿದಂತೆ ಅನೇಕ ಮಹನೀಯರು ಮಾನವ ಧರ್ಮದ ಶ್ರೇಷ್ಠತೆಯ ಸಾರವನ್ನು ಪ್ರತಿಪಾದಿಸಿದ್ದಾರೆ ಎಂದು ಹೇಳಿದರು.

ಬಸವಣ್ಣನ ಭಕ್ತಿ, ಅಕ್ಕಮಹಾದೇವಿಯ ವೈರಾಗ್ಯ, ಅಲ್ಲಮಪ್ರಭುವಿನ ಜ್ಞಾನವನ್ನು ಒಂದು ಚೇತನದಲ್ಲಿ ಕಂಡಿದ್ದೇನೆ, ಆ ಚೇತನವೇ ಸಿದ್ಧಗಂಗಾ ಮಠದ ತ್ರಿವಿಧ ದಾಸೋಹಿ ಡಾ. ಶಿವಕುಮಾರ ಸ್ವಾಮೀಜಿಗಳು. ಸುಮಾರು 60 ವರ್ಷಗಳ ಕಾಲ ಪೂಜ್ಯರ ಪಾದಸ್ಪರ್ಶ, ಆಶೀರ್ವಾದ ಪಡೆದ ನನಗೆ ಅವರು ಬದುಕಿನ ದಾರಿದೀಪವಾಗಿದ್ದರು, ಅವರಿಂದಾಗಿ ನನ್ನ ಬದುಕು ಸಾರ್ಥಕ ಬದುಕು ಆಗಲು ಸಾಧ್ಯವಾಯಿತು ಎಂದು ತಿಳಿಸಿದರು.

ಸಪ್ತಗಿರಿ ಕಾಲೇಜಿನ ಶಿಕ್ಷಣಾಧಿಕಾರಿ ಚನ್ನಪ್ಪ ಬಾರಿಗಿಡದ ವಿಶೇಷ ಉಪನ್ಯಾಸ ನೀಡಿದರು. ಇದರ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸಮಾಜ ಹಿರಿಯರಾದ ಟಿ.ಕೆ. ನಂಜುಂಡಪ್ಪ, ಕೆ.ವೈ. ಸಿದ್ಧಲಿಂಗಮೂರ್ತಿ, ಸಿದ್ಧಗಂಗಮ್ಮ ಸಿದ್ಧರಾಮಣ್ಣ, ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಕೋರಿ ಮಂಜುನಾಥ್, ಉಪಾಧ್ಯಕ್ಷ ಟಿ.ಬಿ. ಹರೀಶ್, ಗೌರವ ಕಾರ್ಯದರ್ಶಿ ಡಿ.ಜೆ. ಶಶಿಧರನ್, ಸಹ ಕಾರ್ಯದರ್ಶಿ ಟಿ.ಜೆ. ಸಿದ್ಧಲಿಂಗಸ್ವಾಮಿ, ಖಜಾಂಚಿ ಜಿ.ಕೆ. ಸ್ವಾಮಿ, ನಿರ್ದೇಶಕರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಸಿದ್ಧಲಿಂಗಪ್ಪ, ಸಿದ್ಧಗಂಗಾ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಎಸ್. ಪರಮೇಶ್, ವೀರಶೈವ ಸಹಕಾರ ಬ್ಯಾಂಕ್ ಅಧ್ಯಕ್ಷ ಕೆ.ಜೆ. ರುದ್ರಪ್ಪ, ಸ್ನೇಹಸಂಗಮ ಬ್ಯಾಂಕ್ ಅಧ್ಯಕ್ಷ ಬಿ.ಎಸ್. ಮಂಜುನಾಥ್, ಬಸವೇಶ್ವರ ಬ್ಯಾಂಕ್ ಅಧ್ಯಕ್ಷ ಟಿ.ಸಿ.ಓಹಿಲೇಶ್ವರ್, ಕೆ. ಮಲ್ಲಿಕಾರ್ಜುನ್ ಸೇರಿದಂತೆ ವೀರಶೈವ ಸಮಾಜದ ಅಂಗಸಂಸ್ಥೆಗಳ ಪದಾಧಿಕಾರಿಗಳು, ಸಮಾಜದ ಮುಖಂಡರು ಭಾಗವಹಿಸಿದ್ದರು.

# ಹಕ್ಕ-ಬುಕ್ಕರ ಸಾಧನೆ ಸ್ಮರಿಸಿದ ಸಾಹಿತ್ಯ ಪರಿಷತ್ತು



ಕೋಲಾರ

ದೆಹಲಿ ಸುಲ್ತಾನರಿಂದ ವಿಜಯನಗರ ಸಾಮ್ರಾಜ್ಯವನ್ನು ಬಿಡುಗಡೆಗೊಳಿಸಿ ಸ್ವತಂತ್ರ ಸಂಸ್ಥಾನವನ್ನಾಗಿ ಮಾಡಿದ ಕೀರ್ತಿ ಹಕ್ಕಬುಕ್ಕರಿಗೆ ಸಲ್ಲುತ್ತದೆಂದು ಹಿರಿಯ ಉಪನ್ಯಾಸಕರಾದ ನಾಗಾನಂದ ಕೆಂಪರಾಜು ಅಭಿಪ್ರಾಯಪಟ್ಟರು.

ಅವರು ಕೋಲಾರದ ಧರ್ಮರಾಯನಗರದಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ವತಿಯಿಂದ ಹಮ್ಮಿಕೊಂಡಿದ್ದ ಹಕ್ಕ ಬುಕ್ಕರ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಹದಿನಾಲ್ಕನೇ ಶತಮಾನದಲ್ಲಿ ಹೆದಲಿ ಸುಲ್ತಾನರ ದಬ್ಬಾಳಿಕೆಯಯಿಂದ ಇಡೀ ದೇಶ ಹಂಚಿ ಹೋಗಿದ್ದ ಸಂದರ್ಭದಲ್ಲಿ ಇಡೀ ನಾಡನ್ನು ರಕ್ಷಿಸಿದ ವೀರರು ಶೂರರಾದ ಹಕ್ಕ ಬುಕ್ಕರನ್ನು ಸ್ಮರಿಸುವುದು ಅತ್ಯಂತ ಸೂಕ್ತ ಮತ್ತು ಸಮಂಜಸವಾದುದು. ಇಡೀ ನಾಡಿನ ಜನರು ಅವರ ಶೌರ್ಯ, ಆಡಳಿತದ ಅವಧಿಯಯ ಸಾಧನೆಗಳನ್ನು ಜನರಿಗೆ ತಿಳಿಯ ಪಡಿಸುವುದು ಇಂದು ಅನಿವಾರ್ಯವಾಗಿದೆ. ಆದ್ದರಿಂದ ಅಂದಿನ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಮಾಡಿ ಇಡೀ ಪ್ರಪಂಚದಾದ್ಯಂತ ಹೆಸರುವಾಸಿ ಮಾಡಿದ ಸಾಮ್ರಾಜ್ಯದವೆಂದು ತಂದ ಕೀರ್ತಿ ಹಕ್ಕ ಬುಕ್ಕರಿಗೆ ಸಲ್ಲುತ್ತದೆಂದರು.

ನಿವೃತ್ತ ಶಿಕ್ಷಣಾಧಿಕಾರಿಗಳಾದ ಸಿ ಆರ್ ಅಶೋಕ್ ಮಾತಾನಾಡಿ 14ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಸಂಗಮ ವಂಶದ ಇಬ್ಬರು ಸಹೋದರರು. ಸಂಗಮನ ಪುತ್ರರಾದ ಇವರು, ವಿದ್ಯಾಶಂಕರ (ವಿದ್ಯಾರಣ್ಯ) ಅವರ ಮಾರ್ಗದರ್ಶನದಲ್ಲಿ ತುಂಗಭದ್ರಾ ನದಿಯ ದಡದಲ್ಲಿ 1336ರಲ್ಲಿ ಈ ಸಾಮ್ರಾಜ್ಯವನ್ನು ಕಟ್ಟಿ, ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಿದರು ಎಂದರು.

ನಿವೃತ್ತ ಎ ಎಸ್ ಐ ರವೀಂದ್ರನಾಥ್ ಮಾತಾನಾಡಿ ಹಕ್ಕ ಬುಕ್ಕರು ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದು, ಇವರು ಸ್ಥಾಪಿಸಿದ ಸಾಮ್ರಾಜ್ಯವು ಸುಮಾರು 300 ವರ್ಷಗಳಿಗೂ ಹೆಚ್ಚು ಕಾಲ ಆಡಳಿತ ನಡೆಸಿದ ಹಕ್ಕ ಬುಕ್ಕರು ವಿಜಯನಗರದಲ್ಲಿ ಮೊದಲು ರಾಜ್ಯಭಾರ ಮಾಡಿದ ವಂಶ ಕರ್ನಾಟಕದ ಸಂಗಮ ವಂಶದವರು. ಈಗಿನ ಕನಕಗಿರಿಯ ಕಂಪಿಲರಾಯನ ಅಳಿಯನಾದ ಸಂಗಮನ ಮಕ್ಕಳಾದ ಹಕ್ಕ-ಬುಕ್ಕರು ವಿಜಯನಗರದ ಸ್ಥಾಪನೆಗೆ ಕಾರಣರಾದರೆಂದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಿ ನಾರಾಯಣಪ್ಪ ಮಾತಾನಾಡಿ ಹಕ್ಕ ಬುಕ್ಕರು ಈಗಿನ ಕನಕಗಿರಿ ಸಂಸ್ಥಾನದ ವೀರ ಕಂಪಿಲರಾಯನ ಬೀಗರು. ಪ್ರಾಚೀನ ಕಾಲದಿಂದಲೂ ಕುಮ್ಮಟದ ಪ್ರದೇಶದಲ್ಲಿ ವಾಲ್ಮೀಕಿ/ಬೇಡರು ಪ್ರಬಲವಾಗಿ ಆಡಳಿತ ಮಾಡಿದ್ದಾರೆ. ದಕ್ಷಿಣ ಭಾರತದ ಹಿಂದೂ ಸಾಮ್ರಾಜ್ಯ ಮತ್ತು ವಿಶ್ವದ ಅತೀ ಶ್ರೀಮಂತ ಬಲಿಷ್ಠ ಸಾಮ್ರಾಜ್ಯ ವಾಗಿದ್ದ ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರು ಹಕ್ಕ-ಬುಕ್ಕರು ಕನ್ನಡಿಗರೆಂದು ಶಿಲಾ-ಶಾಸನಗಳು ಮತ್ತು ಇತಿಹಾಸಕಾರರು ಸ್ಪಷ್ಟಪಡಿಸುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಡಾ. ಶರಣಪ್ಪ ಗಬ್ಬೂರು, ಡಿಟಿಪಿ ಮುರುಳಿ, ಕೆಎಸ್ ಆರ್ಟಿಸಿಯ ಶಿವಕುಮಾರ್, ಬೆಮೆಲ್ ಶ್ರೀನಿವಾಸ್, ಅರ್ಬನ್ ಬ್ಯಾಂಕ್‌ನ ಶ್ರೀಧರ್, ನಿವೃತ್ತ ಪೋಲೀಸ್ ನಾರಾಯಣಪ್ಪ, ಮುಂತಾದವರು ಉಪಸ್ಥಿತರಿದ್ದರು.

ದೆಹಲಿ ಸುಲ್ತಾನರಿಂದ ವಿಜಯನಗರ ಸಾಮ್ರಾಜ್ಯವನ್ನು ಬಿಡುಗಡೆಗೊಳಿಸಿ ಸ್ವತಂತ್ರ ಸಂಸ್ಥಾನವನ್ನಾಗಿ ಮಾಡಿದ ಕೀರ್ತಿ ಹಕ್ಕಬುಕ್ಕರಿಗೆ ಸಲ್ಲುತ್ತದೆಂದು ಹಿರಿಯ ಉಪನ್ಯಾಸಕರಾದ ನಾಗಾನಂದ ಕೆಂಪರಾಜು ಅಭಿಪ್ರಾಯಪಟ್ಟರು.

ಅವರು ಕೋಲಾರದ ಧರ್ಮರಾಯನಗರದಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ವತಿಯಿಂದ ಹಮ್ಮಿಕೊಂಡಿದ್ದ ಹಕ್ಕ ಬುಕ್ಕರ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಹದಿನಾಲ್ಕನೇ ಶತಮಾನದಲ್ಲಿ ಹೆದಲಿ ಸುಲ್ತಾನರ ದಬ್ಬಾಳಿಕೆಯಯಿಂದ ಇಡೀ ದೇಶ ಹಂಚಿ ಹೋಗಿದ್ದ ಸಂದರ್ಭದಲ್ಲಿ ಇಡೀ ನಾಡನ್ನು ರಕ್ಷಿಸಿದ ವೀರರು ಶೂರರಾದ ಹಕ್ಕ ಬುಕ್ಕರನ್ನು ಸ್ಮರಿಸುವುದು ಅತ್ಯಂತ ಸೂಕ್ತ ಮತ್ತು ಸಮಂಜಸವಾದುದು. ಇಡೀ ನಾಡಿನ ಜನರು ಅವರ ಶೌರ್ಯ, ಆಡಳಿತದ ಅವಧಿಯಯ ಸಾಧನೆಗಳನ್ನು ಜನರಿಗೆ ತಿಳಿಯ ಪಡಿಸುವುದು ಇಂದು ಅನಿವಾರ್ಯವಾಗಿದೆ. ಆದ್ದರಿಂದ ಅಂದಿನ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಮಾಡಿ ಇಡೀ ಪ್ರಪಂಚದಾದ್ಯಂತ ಹೆಸರುವಾಸಿ ಮಾಡಿದ ಸಾಮ್ರಾಜ್ಯದವೆಂದು ತಂದ ಕೀರ್ತಿ ಹಕ್ಕ ಬುಕ್ಕರಿಗೆ ಸಲ್ಲುತ್ತದೆಂದರು.

ನಿವೃತ್ತ ಶಿಕ್ಷಣಾಧಿಕಾರಿಗಳಾದ ಸಿ ಆರ್ ಅಶೋಕ್ ಮಾತಾನಾಡಿ 14ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಸಂಗಮ ವಂಶದ ಇಬ್ಬರು ಸಹೋದರರು. ಸಂಗಮನ ಪುತ್ರರಾದ ಇವರು, ವಿದ್ಯಾಶಂಕರ (ವಿದ್ಯಾರಣ್ಯ) ಅವರ ಮಾರ್ಗದರ್ಶನದಲ್ಲಿ ತುಂಗಭದ್ರಾ ನದಿಯ ದಡದಲ್ಲಿ 1336ರಲ್ಲಿ ಈ ಸಾಮ್ರಾಜ್ಯವನ್ನು ಕಟ್ಟಿ, ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಿದರು ಎಂದರು.

ನಿವೃತ್ತ ಎ ಎಸ್ ಐ ರವೀಂದ್ರನಾಥ್ ಮಾತಾನಾಡಿ ಹಕ್ಕ ಬುಕ್ಕರು ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದು, ಇವರು ಸ್ಥಾಪಿಸಿದ ಸಾಮ್ರಾಜ್ಯವು ಸುಮಾರು 300 ವರ್ಷಗಳಿಗೂ ಹೆಚ್ಚು ಕಾಲ ಆಡಳಿತ ನಡೆಸಿದ ಹಕ್ಕ ಬುಕ್ಕರು ವಿಜಯನಗರದಲ್ಲಿ ಮೊದಲು ರಾಜ್ಯಭಾರ ಮಾಡಿದ ವಂಶ ಕರ್ನಾಟಕದ ಸಂಗಮ ವಂಶದವರು. ಈಗಿನ ಕನಕಗಿರಿಯ ಕಂಪಿಲರಾಯನ ಅಳಿಯನಾದ ಸಂಗಮನ ಮಕ್ಕಳಾದ ಹಕ್ಕ-ಬುಕ್ಕರು ವಿಜಯನಗರದ ಸ್ಥಾಪನೆಗೆ ಕಾರಣರಾದರೆಂದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಿ ನಾರಾಯಣಪ್ಪ ಮಾತಾನಾಡಿ ಹಕ್ಕ ಬುಕ್ಕರು ಈಗಿನ ಕನಕಗಿರಿ ಸಂಸ್ಥಾನದ ವೀರ ಕಂಪಿಲರಾಯನ ಬೀಗರು. ಪ್ರಾಚೀನ ಕಾಲದಿಂದಲೂ ಕುಮ್ಮಟದ ಪ್ರದೇಶದಲ್ಲಿ ವಾಲ್ಮೀಕಿ/ಬೇಡರು ಪ್ರಬಲವಾಗಿ ಆಡಳಿತ ಮಾಡಿದ್ದಾರೆ. ದಕ್ಷಿಣ ಭಾರತದ ಹಿಂದೂ ಸಾಮ್ರಾಜ್ಯ ಮತ್ತು ವಿಶ್ವದ ಅತೀ ಶ್ರೀಮಂತ ಬಲಿಷ್ಠ ಸಾಮ್ರಾಜ್ಯ ವಾಗಿದ್ದ ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರು ಹಕ್ಕ-ಬುಕ್ಕರು ಕನ್ನಡಿಗರೆಂದು ಶಿಲಾ-ಶಾಸನಗಳು ಮತ್ತು ಇತಿಹಾಸಕಾರರು ಸ್ಪಷ್ಟಪಡಿಸುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಡಾ. ಶರಣಪ್ಪ ಗಬ್ಬೂರು, ಡಿಟಿಪಿ ಮುರುಳಿ, ಕೆಎಸ್ ಆರ್ಟಿಸಿಯ ಶಿವಕುಮಾರ್, ಬೆಮೆಲ್ ಶ್ರೀನಿವಾಸ್, ಅರ್ಬನ್ ಬ್ಯಾಂಕ್‌ನ ಶ್ರೀಧರ್, ನಿವೃತ್ತ ಪೋಲೀಸ್ ನಾರಾಯಣಪ್ಪ, ಮುಂತಾದವರು ಉಪಸ್ಥಿತರಿದ್ದರು.

# ಬಸವಣ್ಣನವರ ಜಯಂತಿ ಸಂಭ್ರಮ

ದೊಡ್ಡಬಳ್ಳಾಪುರ

ನಗರದ ದೇಶದ ಪೇಟೆ ವೀರಶೈವ ಸಂಘ, ಅಕ್ಕಮಹಾದೇವಿ ಮಹಿಳಾ ಸಂಘ ಹಾಗೂ ಬಸವೇಶ್ವರ ಯುವಕ ಸಂಘದ ಸಂಯುಕ್ತ ಆಶ್ರಯದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಕೊಂಗಾಡಿಯಪ್ಪ ಮುಖ್ಯರಸ್ತೆಯಲ್ಲಿರುವ ಶ್ರೀ ಬಸವೇಶ್ವರ ದೇವಾಲಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮುಂಜಾನೆಯಿಂದಲೇ ವಿವಿಧ ಧಾರ್ಮಿಕ ವಿಧಿವಿಧಾನಗಳು ಜರುಗಿದವು.

ಧಾರ್ಮಿಕ ಕಾರ್ಯಕ್ರಮಗಳ ವಿವರ:

ಅಭಿಷೇಕ ಮತ್ತು ಪೂಜೆ: ಮುಂಜಾನೆ 6 ಗಂಟೆಗೆ ಮೂಲ ಬಸವಣ್ಣದೇವರಿಗೆ ವಿಶೇಷ ಅಭಿಷೇಕ ನೆರವೇರಿಸಲಾಯಿತು.

ಮಹಾಮಂಗಳಾರತಿ: ಮಧ್ಯಾಹ್ನ 12 ಗಂಟೆಗೆ ಅಶ್ವರೂಢ ಶ್ರೀ ಬಸವೇಶ್ವರ ಉತ್ಸವಮೂರ್ತಿಗೆ ಆಕರ್ಷಕ ಹೂವಿನ ಅಲಂಕಾರ ಮಾಡಲಾಗಿತ್ತು. ನಂತರ ಮಹಾಮಂಗಳಾರತಿ ಜರುಗಿತು.

ಪ್ರಸಾದ ವಿನಿಯೋಗ: ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾವಿರಾರು ಭಕ್ತಾಧಿಗಳಿಗೆ ಮಧ್ಯಾಹ್ನ ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರು, ಸದಸ್ಯರು, ದೇಶದ ಪೇಟೆಯ ಪ್ರಮುಖ ಮುಖಂಡರು, ನೂರಾರು ಮಹಿಳೆಯರು ಹಾಗೂ ಸುತ್ತಮುತ್ತಲಿನ ಭಕ್ತಾಧಿಗಳು ಪಾಲ್ಗೊಂಡು ಕಾಯಕಯೋಗಿಯ ಕೃಪೆಗೆ ಪಾತ್ರರಾದರು.

# 80ನೇ ವರ್ಷದ ಕರಗ ಮಹೋತ್ಸವದ ಆಹ್ವಾನ ಪತ್ರಿಕೆ ಬಿಡುಗಡೆ

ಬಂಗಾರಪೇಟೆ

ತಾಲೂಕಿನ ಇತಿಹಾಸ ಪ್ರಸಿದ್ಧ 80ನೇ ವರ್ಷದ ಶ್ರೀ ದ್ರೌಪತಾಂಭ ಸಮೇತ ಧರ್ಮರಾಯಸ್ವಾಮಿ ಕರಗ ಮಹೋತ್ಸವದ ಆಹ್ವಾನ ಪತ್ರಿಕೆಯನ್ನು ಕಾರಹಳ್ಳಿ ಗ್ರಾಮದ ಗಂಗಮ್ಮ ದೇವಾಲಯದಲ್ಲಿ ಭಕ್ತಿಭಾವದಿಂದ ಬಿಡುಗಡೆ ಮಾಡಲಾಯಿತು. ವಹ್ನಿಕುಲ ಕ್ಷತ್ರಿಯ ಸಮುದಾಯದ ಯಜಮಾನರು ಹಾಗೂ ಕುಲದ ಗೌಡರ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದ ನೇತೃತ್ವವನ್ನು ಕುಲದ ಗೌಡರಾದ ಚಿನ್ನರಾಜು ಹಾಗೂ ಯಜಮಾನರಾದ ನಾರಾಯಣಸ್ವಾಮಿ ಚಿಲಕಪ್ಪ ಅವರು ವಹಿಸಿದ್ದರು.

ತವರು ಮನೆಯ ಹಬ್ಬ: ಈ ಸಂದರ್ಭದಲ್ಲಿ ಬಂಗಾರಪೇಟೆ ಧರ್ಮರಾಯಸ್ವಾಮಿ ದೇವಾಲಯ ಟ್ರಸ್ಟ್‌ನ ಉಪಾಧ್ಯಕ್ಷ ಚಿನ್ನಿ ವೆಂಕಟೇಶ್ ಮಾತನಾಡಿ, “ಬಂಗಾರಪೇಟೆ ಕರಗ ಮಹೋತ್ಸವಕ್ಕೆ ದಶಕಗಳ ಇತಿಹಾಸವಿದೆ. ವಿಶೇಷವಾಗಿ ಕಾರಹಳ್ಳಿ ಗ್ರಾಮಸ್ಥರಿಗೆ ಇದು ತವರು ಮನೆಯ ಕಾರ್ಯಕ್ರಮವಿದ್ದಂತೆ. ಕಳೆದ 80 ವರ್ಷಗಳಿಂದ ಸತತವಾಗಿ ಶ್ರದ್ಧಾ ಭಕ್ತಿಯಿಂದ ಈ ಉತ್ಸವವನ್ನು ಆಚರಿಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯ,” ಎಂದರು.



ಕರಗ ಮಹೋತ್ಸವದ ದಿನಚರಿ:

ಏಪ್ರಿಲ್ 28ರ ಮಂಗಳವಾರ ಧ್ವಜಾರೋಹಣದೊಂದಿಗೆ ಆರಂಭವಾಗಲಿರುವ ಉತ್ಸವವು ಮೇ 4ರವರೆಗೆ ಸಗಲಿದೆ. ಕಾರ್ಯಕ್ರಮಗಳ ವಿವರ ಇಂತಿದೆ.

ಏಪ್ರಿಲ್ 28: ಧ್ವಜಾರೋಹಣ.

ಏಪ್ರಿಲ್ 29: ದೇವಸ್ಥಾನಗಳಲ್ಲಿ ಆರತಿ ದೀಪೋತ್ಸವ.

ಏಪ್ರಿಲ್ 30: ದೇಶಿಹಳ್ಳಿ ಕೆರೆ ಆವರಣದಲ್ಲಿ ಹಸಿ ಕರಗ.

ಮೇ 1: ಉಟ್ಲು ಜಾತ್ರೆ.

ಮೇ 2: ಕಲ್ಯಾಣೋತ್ಸವ ಹಾಗೂ ರಾತ್ರಿ ಭವ್ಯ ಹೂವಿನ ಕರಗ.

ಮೇ 3: ಅಗ್ನಿಕುಂಡ ಮತ್ತು ವಿಶೇಷವಾಗಿ ಪೋತುಲ ಗಾವು ಕಾರ್ಯಕ್ರಮ.

ಮೇ 4: ವಸಂತೋತ್ಸವ ಹಾಗೂ ಧ್ವಜ ಅವರೋಹಣ.

ವಹ್ನಿಕುಲ ಕ್ಷತ್ರಿಯ ಸಮುದಾಯದ ವತಿಯಿಂದ ಆಯೋಜಿಸಲಾಗಿರುವ ಈ ಉತ್ಸವದಲ್ಲಿ ಬಂಗಾರಪೇಟೆ, ಕಾರಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಮನವಿ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ಕೊಲ್ ಕಾರ್ ಮಂಜು, ಕಾರಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ. ನಾರಾಯಣಸ್ವಾಮಿ, ಬಿ. ಶ್ರೀನಿವಾಸ್, ಮುಖಂಡರಾದ ಪಿ. ಕೃಷ್ಣಪ್ಪ, ರಾಜೇಂದ್ರ, ಅಮರೇಶ್, ಗೋವಿಂದ ಹಾಗೂ ಕಾರಹಳ್ಳಿ ಬಡಾವಣೆಯ ನಾರಾಯಣಸ್ವಾಮಿ, ಮುರುಗೇಶ್ ಸೇರಿದಂತೆ ಗ್ರಾಮದ ಯುವಕರು ಉಪಸ್ಥಿತರಿದ್ದರು.

# ನಾರಿ ಶಕ್ತಿ ವಂದನಾ ಕಾಯ್ದೆ ವಿರೋಧಿಸುವವರಿಗೆ ಉಳಿಗಾಲವಿಲ್ಲ: ಅಶ್ವಿನಿ ಶಂಕರ್

ಚಿಕ್ಕಬಳ್ಳಾಪುರ

ಮಹಿಳೆಯರಿಗೆ ಅವರ ಹಕ್ಕುಗಳು ಸಿಗಬಾರದು ಎಂಬುದು ಕಾಂಗ್ರೆಸ್ ಪಕ್ಷದ ಅಜೆಂಡಾ. ಶೇ. 33 ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ದಶಕಗಳಿಂದ ಅಡ್ಡಿಪಡಿಸಿದ್ದ ಕಾಂಗ್ರೆಸ್‌ನ ನೈಜ ಮುಖ ಈಗ ಮತ್ತೊಮ್ಮೆ ಬಯಲಾಗಿದೆ ಎಂದು ಬಿಜೆಪಿ ರಾಜ್ಯ ಒಬಿಸಿ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಹಾಗೂ ವಕ್ತಾರರಾದ ಅಶ್ವಿನಿ ಶಂಕರ್ ಕಿಡಿಕಾರಿದರು.

ಲೋಕಸಭೆಯಲ್ಲಿ ‘ನಾರಿ ಶಕ್ತಿ ವಂದನಾ ಕಾಯ್ದೆ’ಯನ್ನು ವಿರೋಧಿಸಿದ ಕಾಂಗ್ರೆಸ್ ಹಾಗೂ ಇಂಡಿ ಒಕ್ಕೂಟದ ವಿರುದ್ಧ ಚಿಕ್ಕಬಳ್ಳಾಪುರ ಜಿಲ್ಲಾ ಮಹಿಳಾ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.




ಕಾಂಗ್ರೆಸ್‌ನಿಂದ ಮೊಸಳೆ ಕಣ್ಣೀರು:

ಪ್ರಧಾನಿ ನರೇಂದ್ರ ಮೋದಿ ಅವರು ನಾರಿ ಕುಲದ ಶಕ್ತಿಯ ಬಗ್ಗೆ ಮಹಾ ಸಂಕಲ್ಪ ತೊಟ್ಟು ಕಾಯ್ದೆ ತಂದರೆ, ಸೋನಿಯಾ ಗಾಂಧಿ ನೇತೃತ್ವದ ಕಾಂಗ್ರೆಸ್ ಮಹಿಳೆಯರ ವಿಚಾರದಲ್ಲಿ ಬೂಟಾಟಿಕೆಯ ತಂತ್ರ ಅನುಸರಿಸುತ್ತಿದೆ. ಅವರದ್ದು ಕೇವಲ ಮೊಸಳೆ ಕಣ್ಣೀರು ಎಂದು ಅಶ್ವಿನಿ ಶಂಕರ್ ಆರೋಪಿಸಿದರು.

ಸಂವಿಧಾನ ವಿರೋಧಿ ಧೋರಣೆ:

“ನಾರಿ ಶಕ್ತಿ ವಂದನಾ ಕಾಯ್ದೆಗೆ ವಿರೋಧ ವ್ಯಕ್ತಪಡಿಸಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಕರಾಳ ದಿನ. ಸರ್ವಾಧಿಕಾರಿ ಧೋರಣೆ ಮೆರೆಯುವುದು ಮತ್ತು ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವುದು ಕಾಂಗ್ರೆಸ್‌ನ ಮೂಲ ಸಂಸ್ಕೃತಿ. ಇದು ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯ ಹಾಗೂ ಬಸವಣ್ಣನವರ ಲಿಂಗ ಸಮಾನತೆಯ ತತ್ವಕ್ಕೆ ವಿರುದ್ಧವಾಗಿದೆ” ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಅಸ್ತಿತ್ವಕ್ಕಾಗಿ ಹೋರಾಟ:

ರಾಜಕೀಯ ಭೂಪಟದಲ್ಲಿ ಅಸ್ತಿತ್ವಕ್ಕಾಗಿ ತಿಣುಕಾಡುತ್ತಿರುವ ಕಾಂಗ್ರೆಸ್, ಸ್ತ್ರೀಕುಲದ ಹಕ್ಕನ್ನು ಕಸಿದುಕೊಳ್ಳುವ ಮೂಲಕ ದುಶ್ಯಾಸನ ಹಾಗೂ ರಾವಣರ ಸಂಸ್ಕೃತಿಯನ್ನು ನೆನಪಿಸುತ್ತಿದೆ. ಅಭಿವೃದ್ಧಿಶೀಲ ರಾಷ್ಟ್ರದ ಕನಸಿಗೆ ಕಾಂಗ್ರೆಸ್ ಅಡ್ಡಿಯಾಗುತ್ತಿದೆ ಎಂದು ಅವರು ವಾಗ್ದಾಳಿ ನಡೆಸಿದರು.

2029ಕ್ಕೆ ತಕ್ಕ ಪಾಠ:

ರಾಮ ಮಂದಿರ, 370ನೇ ವಿಧಿ ರದ್ದು, ತ್ರಿವಳಿ ತಲಾಕ್ ನಿಷೇಧ ಹಾಗೂ ಜಿಎಸ್‌ಟಿ ಜಾರಿಯಂತಹ ದೇಶದ ಹಿತದೃಷ್ಟಿಯ ನಿರ್ಧಾರಗಳನ್ನು ವಿರೋಧಿಸುತ್ತಾ ಬಂದಿರುವ ಕಾಂಗ್ರೆಸ್‌ಗೆ 2029ರ ಚುನಾವಣೆಯಲ್ಲಿ ಮಹಿಳೆಯರು ಸೋಲಿಸುವ ಮೂಲಕ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಬೃಹತ್ ಪ್ರತಿಭಟನೆ:

ಸುದ್ದಿಗೋಷ್ಠಿಗೂ ಮುನ್ನ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ ನೂರಾರು ಮಹಿಳಾ ಕಾರ್ಯಕರ್ತೆಯರು ಕಾಂಗ್ರೆಸ್ ಪಕ್ಷದ ವಿರುದ್ಧ ಧಿಕ್ಕಾರ ಕೂಗಿ ಬೃಹತ್ ಪ್ರತಿಭಟನೆ ನಡೆಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮಹಿಳಾ ಮೋರ್ಚಾ ಕಾರ್ಯದರ್ಶಿ ನಿರ್ಮಲಮ್ಮ, ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ, ಜಿಲ್ಲಾ ಉಪಾಧ್ಯಕ್ಷ ಮರಳಕುಂಟೆ ಕೃಷ್ಣಮೂರ್ತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಎಚ್.ಎಸ್. ಮುರುಳಿಧರ್, ಮಧು ಸೂರ್ಯನಾರಾಯಣ ರೆಡ್ಡಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಲೀಲಾವತಿ ಶ್ರೀನಿವಾಸ್ ಸೇರಿದಂತೆ ಮಾಜಿ ಶಾಸಕರು ಹಾಗೂ ಪಕ್ಷದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ತಿಮ್ಮರಾಯಸ್ವಾಮಿ ಜಾತ್ರಾ ಸಂಭ್ರಮ

ಬೂದಿಕೋಟೆ

ಹೋಬಳಿಯ ಬಲಮಂದೆ ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ಶ್ರೀ ತಿಮ್ಮರಾಯಸ್ವಾಮಿ ರಥೋತ್ಸವ ಹಾಗೂ ಕಲ್ಯಾಣೋತ್ಸವವು ಅತ್ಯಂತ ಸಡಗರ ಮತ್ತು ಸಂಭ್ರಮದ ವಾತಾವರಣದಲ್ಲಿ ಅದ್ದೂರಿಯಾಗಿ ನೆರವೇರಿತು.

ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನವನ್ನು ವಿವಿಧ ಪುಷ್ಪಗಳಿಂದ ವೈಭವವಾಗಿ ಅಲಂಕರಿಸಲಾಗಿತ್ತು. ಮುಂಜಾನೆಯಿಂದಲೇ ಬಲಮಂದೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ದೇಗುಲಕ್ಕೆ ಆಗಮಿಸಿ, ದೇವರ ದರ್ಶನ ಪಡೆದು ವಿಶೇಷ ಪೂಜೆಗಳಲ್ಲಿ ಪಾಲ್ಗೊಂಡರು.

ಜಾತ್ರೆಯ ಪ್ರಮುಖ ಆಕರ್ಷಣೆಯಾದ ಶ್ರೀ ತಿಮ್ಮರಾಯಸ್ವಾಮಿ ಕಲ್ಯಾಣ ಮಹೋತ್ಸವವು ವೇದಮಂತ್ರಗಳ ಘೋಷಣೆಗಳ ನಡುವೆ, ಶಾಸ್ತ್ರೋಕ್ತವಾಗಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಜರುಗಿತು. ದೇವರಿಗೆ ವಿಶೇಷ ಅಭಿಷೇಕ, ಹೂವಿನ ಅಲಂಕಾರ ಹಾಗೂ ಮಹಾಮಂಗಳಾರತಿ ಮಾಡಲಾಯಿತು. ರಥೋತ್ಸವದ ವೇಳೆ ಭಕ್ತರು ಹಣ್ಣು-ಜವನಗಳನ್ನು ಸಮರ್ಪಿಸಿ ತಮ್ಮ ಹರಕೆಗಳನ್ನು ತೀರಿಸಿಕೊಂಡರು.

ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಜಿಲ್ಲಾ ಮತ್ತು ತಾಲೂಕು ಮಟ್ಟದ ಜನಪ್ರತಿನಿಧಿಗಳು, ಮಾಜಿ ಜನಪ್ರತಿನಿಧಿಗಳು ಸೇರಿದಂತೆ ರಾಜಕೀಯ ಹಾಗೂ ಸಾಮಾಜಿಕ ವಲಯದ ಅನೇಕ ಮುಖಂಡರು ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ಕೃಪೆಗೆ ಪಾತ್ರರಾದರು.

ಭಕ್ತಾಧಿಗಳಿಗೆ ಕುಡಿಯುವ ನೀರು ಹಾಗೂ ಅನ್ನಸಂತರ್ಪಣೆ ವ್ಯವಸ್ಥೆಯನ್ನು ಆಯೋಜಿಸಲಾಗಿತ್ತು. ಗ್ರಾಮಸ್ಥರು ಹಾಗೂ ದೇವಾಲಯದ ಸಮಿತಿಯವರು ಜಾತ್ರೆಯ ಯಶಸ್ಸಿಗೆ ಶ್ರಮಿಸಿದರು.

# ಸಿಲಿಂಡರ್ ಸ್ಫೋಟಕ್ಕೆ ಎರಡು ಮನೆಗಳು ಭಸ್ಮ

ತಿಪಟೂರು

ತಾಲೂಕಿನ ನೊಣವಿನಕೆರೆ ಹೋಬಳಿಯ ಮಸವನಘಟ್ಟ ಗ್ರಾಪಂ ವ್ಯಾಪ್ತಿಯ ಮಾಟನಹಳ್ಳಿ ಗ್ರಾಮದಲ್ಲಿ ತಡರಾತ್ರಿ ಆಕಸ್ಮಿಕ ಅನಿಲ ಸೋರಿಕೆಯಿಂದ ಸಿಲಿಂಡರ್ ಸ್ಫೋಟಗೊಂಡು ಎರಡು ಮನೆಗಳು ಸಂಪೂರ್ಣ ಸುಟ್ಟು ಕರಕಲಾಗಿವೆ. ಘಟನೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿಪಾಸ್ತಿ ಬೆಂಕಿಗೆ ಆಹುತಿಯಾಗಿದ್ದು, ರೈತ ಕುಟುಂಬಗಳು ಕಣ್ಣೀರಲ್ಲಿ ಕೈ ತೊಳೆಯುವಂತಾಗಿದೆ.

ಗ್ರಾಮದ ರೈತರಾದ ವೆಂಕಟರಮಣಗೌಡ ಮತ್ತು ಸಣ್ಣತಿಮ್ಮೇಗೌಡ ಅವರಿಗೆ ಸೇರಿದ ಮನೆಗಳು ಬೆಂಕಿಯ ಕೆನ್ನಾಲಿಗೆಗೆ ತುತ್ತಾಗಿವೆ. ಮನೆಯಲ್ಲಿದ್ದ ಸುಮಾರು 15 ಸಾವಿರ ಕೊಬ್ಬರಿ ಉಂಡೆಗಳು, ಬೀರುವಿನಲ್ಲಿದ್ದ ಲಕ್ಷಾಂತರ ರೂಪಾಯಿ ನಗದು, ಚಿನ್ನಾಭರಣ, ಬಟ್ಟೆ ಹಾಗೂ ದವಸಧಾನ್ಯಗಳು ಸೇರಿದಂತೆ ದಿನಬಳಕೆಯ ಎಲ್ಲಾ ಸಾಮಗ್ರಿಗಳು ಭಸ್ಮವಾಗಿವೆ. ದುರಂತ ಸಂಭವಿಸಿ ಒಂದು ದಿನ ಕಳೆದರೂ ತಾಲೂಕು ಮಟ್ಟದ ಅಧಿಕಾರಿಗಳಾಗಲಿ ಅಥವಾ ಕ್ಷೇತ್ರದ ಶಾಸಕರಾಗಲಿ ಸ್ಥಳಕ್ಕೆ ಭೇಟಿ ನೀಡಿ ಸಾಂತ್ವನ ಹೇಳದಿರುವುದು ಗ್ರಾಮಸ್ಥರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.



ವಾಸಕ್ಕೆ ಮನೆಯಿಲ್ಲದೆ, ಉಣ್ಣಲು ಅನ್ನವಿಲ್ಲದೆ ಎರಡು ಕುಟುಂಬಗಳು ಬೀದಿಯಲ್ಲಿ ಜೀವನ ಸಾಗಿಸುವಂತಾಗಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳು ತಕ್ಷಣವೇ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು.

ಸಂತ್ರಸ್ತ ಕುಟುಂಬಗಳಿಗೆ ತಾತ್ಕಾಲಿಕವಾಗಿ ವಾಸಿಸಲು ಮನೆ ನಿರ್ಮಿಸಿಕೊಡಬೇಕು ಹಾಗೂ ತುರ್ತಾಗಿ ಊಟ, ವಸತಿ, ಬಟ್ಟೆ ಮತ್ತು ದಿನಬಳಕೆ ಸಾಮಗ್ರಿಗಳನ್ನು ಪರಿಹಾರ ರೂಪದಲ್ಲಿ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕೂಡಲೇ ತಾಲೂಕು ಆಡಳಿತ ಎಚ್ಚೆತ್ತು ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಲಾಗಿದೆ.

# ಮೇ. 1ಕ್ಕೆ ಶ್ರೀ ರೇವಣ್ಣ ಸಿದ್ದೇಶ್ವರ ಸ್ವಾಮಿ ಮಹಾ ರಥೋತ್ಸವ

ರಾಮನಗರ

ತಾಲ್ಲೂಕಿನ ಕೈಲಾಂಚ ಹೋಬಳಿಯ ಅವ್ವೇರಹಳ್ಳಿಯ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಸೇವಾ ಟ್ರಸ್ಟ್ (ರಿ) ವತಿಯಿಂದ ಮೇ 1ರ ಶುಕ್ರವಾರ ಮಹಾರಥೋತ್ಸವ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 6 ರಿಂದ 10ರ ವರೆಗೆ ರಥಬೀದಿ ಅಲಂಕಾರ, 7.30 ರಿಂದ 9.30ರ ವರೆಗೆ ಭಕ್ತವೃಂದಕ್ಕೆ ಸಾಮೂಹಿಕ ಉಪಹಾರ, 10 ರಿಂದ 10.30ರವರೆಗೆ ರಂಗೋಲಿ ಸ್ಪರ್ಧೆ, 10.30 ರಿಂದ 12 ಗಂಟೆಯವರೆಗೆ ಸಾಂಸ್ಕೃತಿಕ ಕಾರ್ಯಕ್ರಮ (ವೀರಗಾಸೆ, ಡೊಳ್ಳು ಕುಣಿತ), ರಂಗೋಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ, ಬೆಂಗಳೂರಿನ ಚಂದ್ರ ಲೇಔಟ್‌ನಲ್ಲಿರುವ ಸಿದ್ಧಗಂಗಾ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳಿಂದ ನೃತ್ಯ, ಮಧ್ಯಾಹ್ನ 12.05ಕ್ಕೆ ಮಹಾರಥೋತ್ಸವದಲ್ಲಿ ಸೇವೆ ಹಾಗೂ 12 ಗಂಟೆಯ ನಂತರ ಟ್ರಸ್ಟಿನ ನೂತನ ಭವನದಲ್ಲಿ ಭಕ್ತರಿಗೆಲ್ಲಾ ಸಾಮೂಹಿಕ ಮಹಾಪ್ರಸಾದ ವಿನಿಯೋಗ ಆಯೋಜಿಸಲಾಗಿದೆ.

ಮೇ 3ರ ಭಾನುವಾರ ಶ್ರೀ ರೇಣುಕಾಂಬದೇವಿ ರಥೋತ್ಸವ ಏರ್ಪಡಿಸಲಾಗಿದೆ.

ಭಾರತ ಸಾರಥಿ
BHARATHA SARATHI KANNADA DAILY NEWS PAPER
23/04/2026
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# 23 ಕೆಸಿಇಟಿ ಪರೀಕ್ಷೆ: ನಿಷೇಧಾಜ್ಞೆ ಜಾರಿ



ತುಮಕೂರು

ನಗರದಲ್ಲಿ 19, ತಿಪಟೂರು ನಗರದಲ್ಲಿ 4 ಹಾಗೂ ಶಿರಾ ನಗರದಲ್ಲಿ 2 ಪರೀಕ್ಷಾ ಕೇಂದ್ರ ಸೇರಿದಂತೆ 25 ಕೇಂದ್ರಗಳಲ್ಲಿ ಇದೇ 23 ಮತ್ತು 24ರಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಯಲಿದ್ದು, ಪರೀಕ್ಷೆಯನ್ನು ಯಾವುದೇ ಲೋಪದೋಷವಿಲ್ಲದಂತೆ ಹಾಗೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯೊಳಗಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶುಭ ಕಲ್ಯಾಣ್ ಅವರು ಆದೇಶ ಹೊರಡಿಸಿದ್ದಾರೆ.

ನಿಷೇಧಾಜ್ಞೆಯು ಇದೇ 23 ಮತ್ತು 24ರಂದು ಬೆಳಿಗ್ಗೆ 9.30 ರಿಂದ ಸಂಜೆ 5.30 ಗಂಟೆಯವರೆಗೆ ಜಾರಿಯಲ್ಲಿರುತ್ತದೆ. ಈ ನಿಷೇಧಾಜ್ಞೆಯನ್ವಯ ಪರೀಕ್ಷೆ ನಡೆಯುವ ದಿನಾಂಕದಂದು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಮತ್ತು ಬೆರಳಚ್ಚು ಕೇಂದ್ರಗಳನ್ನು ಮುಚ್ಚತಕ್ಕದ್ದು. ನಿಷೇಧಾಜ್ಞೆ ಜಾರಿಯಲ್ಲಿರುವ ಅವಧಿಯಲ್ಲಿ ಅನಧಿಕೃತ ವ್ಯಕ್ತಿಗಳು ಯಾರೂ ನಿರ್ಬಂಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಹಾಗೂ ನಿಷೇಧಾಜ್ಞೆಯನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳನ್ನು ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಜಿಲ್ಲಾ ಪೊಲೀಸ್ ಇಲಾಖೆಗೆ ಆದೇಶಿಸಲಾಗಿದೆ.

ನಿಷೇಧಾಜ್ಞೆಯು ಇದೇ 23 ಮತ್ತು 24ರಂದು ಬೆಳಿಗ್ಗೆ 9.30 ರಿಂದ ಸಂಜೆ 5.30 ಗಂಟೆಯವರೆಗೆ ಜಾರಿಯಲ್ಲಿರುತ್ತದೆ. ಈ ನಿಷೇಧಾಜ್ಞೆಯನ್ವಯ ಪರೀಕ್ಷೆ ನಡೆಯುವ ದಿನಾಂಕದಂದು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಮತ್ತು ಬೆರಳಚ್ಚು ಕೇಂದ್ರಗಳನ್ನು ಮುಚ್ಚತಕ್ಕದ್ದು. ನಿಷೇಧಾಜ್ಞೆ ಜಾರಿಯಲ್ಲಿರುವ ಅವಧಿಯಲ್ಲಿ ಅನಧಿಕೃತ ವ್ಯಕ್ತಿಗಳು ಯಾರೂ ನಿರ್ಬಂಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಹಾಗೂ ನಿಷೇಧಾಜ್ಞೆಯನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳನ್ನು ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಜಿಲ್ಲಾ ಪೊಲೀಸ್ ಇಲಾಖೆಗೆ ಆದೇಶಿಸಲಾಗಿದೆ.

ಕೆಲವು ಪ್ರಕರಣಗಳಲ್ಲಿ ದುರುದ್ದೇಶದಿಂದ ನಕಲಿ ಪ್ರಶ್ನೆಪತ್ರಿಕೆಗಳ ಫೋಟೋಗಳನ್ನು ತೆಗೆದು ವಾಟ್ಸ್‌ಆಪ್, ಇತರೆ ಸಾಮಾಜಿಕ ಜಾಲತಾಣಗಳ ಮೂಲಕ ಕಳುಹಿಸಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿ ಮಾಡಲು ಅವಕಾಶವಿರುವುದರಿಂದ ಪರೀಕ್ಷಾ ಮುಖ್ಯ ಅಧೀಕ್ಷಕರಿಗೆ ಬೇಸಿಕ್ ಮೊಬೈಲ್ ಇರಿಸಿಕೊಳ್ಳಲು ಅವಕಾಶವಿದೆ. ಉಳಿದ ಎಲ್ಲಾ ಪರೀಕ್ಷಾ ಸಿಬ್ಬಂದಿ, ವಿದ್ಯಾರ್ಥಿಗಳು ಮೊಬೈಲ್ ತರುವುದು, ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ಜಿಲ್ಲೆಯಲ್ಲಿ ಪ್ರಶ್ನೆ ಪತ್ರಿಕೆಗಳ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವಂತಹ ವ್ಯಕ್ತಿಗಳು ಕಂಡುಬಂದಲ್ಲಿ ಅವರ ವಿರುದ್ಧ ಭಾರತೀಯ ನ್ಯಾ ಸಂಹಿತೆ 2023ರಡಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಸೂಚಿಸಿದ್ದಾರೆ.

## ಬಸವ ಜಯಂತಿ ಬಹಿಷ್ಕಾರ

ಕನಕಪುರ

ತಾಲ್ಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮಕ್ಕೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಗೈರುಹಾಜರಾದ ಹಿನ್ನೆಲೆಯಲ್ಲಿ, ತಾಲ್ಲೂಕು ವೀರಶೈವ ಮುಖಂಡರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಸಮಾರಂಭವನ್ನು ಬಹಿಷ್ಕರಿಸಿ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಈ ಸರ್ಕಾರಿ ಕಾರ್ಯಕ್ರಮದಲ್ಲಿ ಕೇವಲ ಗ್ರೇಡ್–2 ತಹಶೀಲ್ದಾರ್ ಹಾಗೂ ತಾಲ್ಲೂಕು ಪಂಚಾಯಿತಿ ಉಪನಿರ್ದೇಶಕರು ಮಾತ್ರ ಭಾಗವಹಿಸಿದ್ದರು. ತಾಲ್ಲೂಕಿನ ಪ್ರಮುಖ ಅಧಿಕಾರಿಗಳು ಕಾರ್ಯಕ್ರಮಕ್ಕೆ ಬಾರದೆ ನಿರ್ಲಕ್ಷ್ಯ ತೋರಿರುವುದು ವಿಶ್ವಗುರು ಬಸವಣ್ಣನವರಿಗೆ ಮಾಡಿದ ಅಪಮಾನ ಎಂದು ಮುಖಂಡರು ಕಿಡಿಕಾರಿದರು.

ಸರ್ಕಾರಿ ಜಯಂತಿ ಕಾರ್ಯಕ್ರಮಗಳಿಗೆ ಅಧಿಕಾರಿಗಳು ಸತತವಾಗಿ ನಿರ್ಲಕ್ಷ್ಯಧೋರಣೆ ಅನುಸರಿಸುತ್ತಾ ಬರುತ್ತಿದ್ದಾರೆ. ಆದ್ದರಿಂದ ಗೈರುಹಾಜರಾದ ಎಲ್ಲಾ ಅಧಿಕಾರಿಗಳ ಮೇಲೆ ಜಿಲ್ಲಾಧಿಕಾರಿಗಳು ತಕ್ಷಣವೇ ಶಿಸ್ತು ಕ್ರಮ ಜರುಗಿಸಬೇಕು ಎಂದು ವೀರಶೈವ ಸಮಾಜದ ಮುಖಂಡರು ಒತ್ತಾಯಿಸಿದ್ದಾರೆ.

# ಇನ್ನು ಎಷ್ಟು ಜೀವ ಬಲಿ ಬೇಕು?

ತುಮಕೂರು

ಜಿಲ್ಲೆಯ ವಿವಿಧ ರಸ್ತೆಗಳಲ್ಲಿ ಪದೆಪದೇ ಅಪಘಾತ ನಡೆಯುವ ಸ್ಥಳಗಳನ್ನು ಶೀಘ್ರ ಗುರುತಿಸುವಂತೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್ ಅವರಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ತಮ್ಮ ಅಧ್ಯಕ್ಷತೆಯಲ್ಲಿ ರಸ್ತೆ ಸುರಕ್ಷಾ ಸಲಹಾ ಸಮಿತಿ ಸಭೆ ನಡೆಸಿದ ಅವರು, ರಸ್ತೆ ಸುರಕ್ಷಾ ದೃಷ್ಟಿಯಿಂದ ಪದೇ ಪದೇ ಅಪಘಾತ ಸಂಬಂವಿಸುವ ಜಾಗಗಳನ್ನು ಗುರುತಿಸುವಂತೆ ಈ ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು ಈ ಕಾರ್ಯ ಇನ್ನೂ ಪೂರ್ಣವಾಗಿಲ್ಲ. ತಕ್ಷಣ ಪೂರ್ಣಗೊಳಿಸಿ ರಸ್ತೆ ಅಪಘಾತಗಳನ್ನು ನಿಯಂತ್ರಿಸಲು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಅಪಘಾತಗಳಿಗೆ ಕಾರಣವಾಗಿರುವ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸುವ ಕುರಿತು ಈಗಾಗಲೇ ಸೂಚನೆ ನೀಡಲಾಗಿದ್ದರೂ, ಕೆಲವು ಸ್ಥಳಗಳಲ್ಲಿ ಇನ್ನೂ ಗುರುತಿಸುವ ಕಾರ್ಯ ಪೂರ್ಣಗೊಂಡಿಲ್ಲ. ಇದರಿಂದ ಇದರಿಂದ ಇನ್ನು ಎಷ್ಟು ಜನ ಪ್ರಾಣ ಕಳೆದುಕೊಳ್ಳಬೇಕು ಎಂದು ಅಸಮಾಧಾನ ವ್ಯಕ್ತಪಡಿಸಿದರು.



**ಲೋಕೋಪಯೋಗಿ:**

ಇಲಾಖೆಯ ಕಾರ್ಯಪಾಲಕ ಅಭಿಯಂತರರು ತಕ್ಷಣವೇ ಎಲ್ಲಾ ಅಪಘಾತ ಪ್ರದೇಶಗಳನ್ನು ಗುರುತಿಸಿ ವರದಿ ಸಲ್ಲಿಸುವಂತೆ ಅವರು ಸೂಚನೆ ನೀಡಿದರು.

ರಸ್ತೆ ಸುರಕ್ಷತೆ ಸಂಬಂಧಿತ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮುಂದಿನ ವಾರದೊಳಗೆ ಎಲ್ಲಾ ತಾಂತ್ರಿಕ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವಂತೆ ನಿರ್ದೇಶನ ನೀಡಿದ ಅವರು, ಜಿಲ್ಲೆಯಲ್ಲಿ ರಸ್ತೆ ಅಪಘಾತಗಳನ್ನು ಕಡಿಮೆಗೊಳಿಸಲು ಸಂಬಂಧಿತ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ. ಅಶೋಕ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸಿ.ಗೋಪಾಲ್, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರು ರಾಜು, ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಸಾದ್ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಪ್ರಕೃತಿ ಸಂರಕ್ಷಣೆಯ ಪಾಠ ಹೇಳಿದ ಎನ್‌ಎಸ್‌ಎಸ್ ಶಿಬಿರ

ದೊಡ್ಡಬಳ್ಳಾಪುರ

ವಿದ್ಯಾರ್ಥಿಗಳು ಸಮಾಜ ಸೇವೆಯ ಮೂಲಕ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳುವುದರ ಜೊತೆಗೆ ರಾಷ್ಟ್ರಪ್ರೇಮವನ್ನು ಬೆಳೆಸಿಕೊಳ್ಳಬೇಕು ಎಂದು ಭಾರತೀಯ ಕಿಸಾನ್ ಸಂಘದ ತಾಲ್ಲೂಕು ಅಧ್ಯಕ್ಷ ನೆಲ್ಲುಗೆದಿಗೆ ಚಂದ್ರು ತಿಳಿಸಿದರು.

ತಾಲ್ಲೂಕಿನ ತೂಬಗೆರೆ ಹೋಬಳಿಯ ದೊಡ್ಡತಿಮ್ಮನಹಳ್ಳಿ ಗ್ರಾಮದಲ್ಲಿ, ದೊಡ್ಡಬಳ್ಳಾಪುರ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಏಳು ದಿನಗಳ ಎನ್‌ಎಸ್‌ಎಸ್ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

"ಗಾಂಧೀಜಿಯವರ ಧ್ಯೇಯದಂತೆ 1969ರಲ್ಲಿ ಆರಂಭವಾದ ಎನ್.ಎಸ್.ಎಸ್ ಸಂಘಟನೆಯು ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ. ಸ್ವಯಂಪ್ರೇರಿತ ಶ್ರಮದಾನದ ಮೂಲಕ ಗ್ರಾಮದ ನೈರ್ಮಲ್ಯ ಕಾಪಾಡುವುದು ಅವಶ್ಯಕ. ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿದ್ದರೆ ಮಾತ್ರ ಸಾಂಕ್ರಾಮಿಕ ರೋಗಗಳಿಂದ ದೂರವಿರಲು ಸಾಧ್ಯ. ಮನುಷ್ಯನ ಅಸ್ತಿತ್ವಕ್ಕೆ ಪ್ರಕೃತಿ ಮತ್ತು ಜೀವವೈವಿಧ್ಯ ಎಷ್ಟು ಮುಖ್ಯ ಎಂಬುದನ್ನು ಕೊರೊನಾ ಕಾಲ ನಮಗೆ ಕಲಿಸಿಕೊಟ್ಟಿದೆ," ಎಂದು ಅವರು ಎಚ್ಚರಿಸಿದರು.

'ನಾನಲ್ಲ, ನೀನು' ಎಂಬ ಧ್ಯೇಯವಾಕ್ಯದೊಂದಿಗೆ ನಡೆದ ಈ ಶಿಬಿರದಲ್ಲಿ ವಿದ್ಯಾರ್ಥಿನಿಯರು ಸಕ್ರಿಯವಾಗಿ ಪಾಲ್ಗೊಂಡು ಗ್ರಾಮದ ಸ್ವಚ್ಛತೆ, ಪರಿಸರ ಸಂರಕ್ಷಣೆ ಮತ್ತು ಹವಾಮಾನ ಬದಲಾವಣೆಯ ಕುರಿತು ಜಾಗೃತಿ ಮೂಡಿಸಿದರು. ಓಝೋನ್ ಪದರದ ರಕ್ಷಣೆ ಹಾಗೂ ಮಣ್ಣಿನ ಸವಕಳಿ ತಡೆಯುವಲ್ಲಿ ಗಿಡ–ಮರಗಳ ಪಾತ್ರದ ಬಗ್ಗೆಯೂ ಶಿಬಿರದಲ್ಲಿ ಚರ್ಚಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಮಾಯಾ ಸಾರಂಗ ಪಾಣಿ, ಐ.ಕ್ಯೂ.ಎ.ಸಿ. ಸಂಚಾಲಕರು ಡಾ. ಸುಷ್ಮಾ ಹೆಚ್, ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರಾದ ಪ್ರೊ. ಸಂತೋಷ್ ಆರ್.ಎನ್, ಡಾ. ಕುಮಾರ ನಾಯ್ಕ, ಪ್ರೊ. ಕೃಷ್ಣಾನಾಯ್ಕ, ಡಾ. ಜ್ಯೋತಿ ಬನಹಟ್ಟಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ತೂಬಗೆರೆ ಗ್ರಾ.ಪಂ. ಮಾಜಿ ಅಧ್ಯಕ್ಷ ಸುರೇಶ್, ಮಾಜಿ ಸದಸ್ಯ ಅಶ್ವತ್ಥಪ್ಪ, ಗೋಮತಿ ಸೇರಿದಂತೆ ಭಾರತೀಯ ಕಿಸಾನ್ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

# 'ಅಕ್ಷರ ಕಲಿಯದವರ ಅಂತರಂಗದ ಧ್ವನಿಯೇ ಜಾನಪದ'

ವೈ.ಎನ್.ಹೊಸಕೋಟೆ

"ಜಾನಪದ ಎನ್ನುವುದು ಕೇವಲ ಕಲೆಯಲ್ಲ, ಅದು ಜನಸಾಮಾನ್ಯರ ಭಾವನೆಯ ಭಾಷೆ. ಸ್ಥಳೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಅಕ್ಷರ ಕಲಿಯದ ಗ್ರಾಮೀಣ ಜನರ ಪ್ರತಿಭೆ ಅದ್ಭುತವಾದುದು," ಎಂದು ಕಲಾವಿದ ಆರ್.ಎನ್.ಲಿಂಗಪ್ಪ ಅಭಿಪ್ರಾಯಪಟ್ಟರು.



ಹೋಬಳಿಯ ಮರಿದಾಸನಹಳ್ಳಿ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹನುಮಂತನಹಳ್ಳಿಯ ಮದಕರಿ ಗಡಿನಾಡು ಸಾಂಸ್ಕೃತಿಕ ಕಲಾ ಸಂಘದ ವತಿಯಿಂದ ಹಮ್ಮಿಕೊಂಡಿದ್ದ 'ಗಡಿನಾಡು ಸಾಂಸ್ಕೃತಿಕ ಹಬ್ಬ–2026' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಬದುಕಿನ ಕಲೆಗಳು ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ವೃದ್ಧಿಸುತ್ತವೆ. ಆದರೆ, ಇಂದಿನ ಆಧುನಿಕ ಯುಗದಲ್ಲಿ ಈ ಸೊಗಡು ನಶಿಸುತ್ತಿರುವುದು ವಿಷಾದನೀಯ. ಈ ನಿಟ್ಟಿನಲ್ಲಿ ಇಂತಹ ಕಲೆಗಳನ್ನು ಪ್ರೋತ್ಸಾಹಿಸುವ ಮತ್ತು ಮುಂದಿನ ಪೀಳಿಗೆಗೆ ದಾಟಿಸುವ ಕಾರ್ಯ ತುರ್ತಾಗಿ ಆಗಬೇಕಿದೆ ಎಂದರು.

ಮುಖಂಡ ಈರಕ್ಯಾತಪ್ಪ ಮಾತನಾಡಿ, "ಜಾನಪದವು ತಲೆತಲಾಂತರದಿಂದ ಸಾಗಿಬಂದ ನಮ್ಮ ಬದುಕಿನ ಅಸ್ಮಿತೆ. ಈ ಪರಂಪರೆಯನ್ನು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ," ಎಂದು ಕರೆ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ವಿವಿಧ ಕಲಾತಂಡಗಳಿಂದ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಪುರಮೆರವಣಿಗೆ ನಡೆಯಿತು. ವೇದಿಕೆಯಲ್ಲಿ ಕೀಲುಕುದುರೆ, ಗಾರುಡಿ ಗೊಂಬೆ, ಹರೆವಾದನ ಹಾಗೂ ಶೋಬಾನೆ ಪದಗಳ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಎಂ. ಜಗನ್ನಾಥ ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಟಿ.ಎ.ಶಿವಣ್ಣ, ಕಲಾವಿದರಾದ ರಾಜಗೋಪಾಲ, ಬಲರಾಮ, ಮುಖಂಡರಾದ ಎಂ.ಡಿ.ಹನುಮಂತರಾಯಪ್ಪ ಸೇರಿದಂತೆ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

# ಜೀವಜಾಲ ರಕ್ಷಣೆಗೆ ನೀರುಣಿಸುವ ಅಭಿಯಾನ

ಚಿಕ್ಕಬಳ್ಳಾಪುರ

"ನೀರು ಕೇವಲ ಮನುಷ್ಯರಿಗಷ್ಟೇ ಅಲ್ಲ, ಭೂಮಿಯ ಮೇಲಿನ ಪ್ರತಿಯೊಂದು ಜೀವಸಂಕುಲಕ್ಕೂ ಅತ್ಯವಶ್ಯಕ. ಅದರಲ್ಲೂ ಬೇಸಿಗೆಯ ಈ ಸಂದರ್ಭದಲ್ಲಿ ಮೂಕ ಪ್ರಾಣಿ–ಪಕ್ಷಿಗಳ ದಾಹ ತಣಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ" ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಟಿ.ಪಿ. ರಾಮಲಿಂಗೇಗೌಡ ಅವರು ತಿಳಿಸಿದರು.



ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ ಹಾಗೂ 'ಫ್ರೆಂಡ್ ಫಾರ್ ವಾಯ್ಸ್‌ಲೆಸ್' ಸಂಸ್ಥೆಯ ಸಹಯೋಗದೊಂದಿಗೆ ನ್ಯಾಯಾಲಯದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ವಿಶ್ವ ಜಲ ದಿನ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಮ್ಮ ಮನೆಗಳ ಮುಂದೆ ಅಥವಾ ಅನುಕೂಲವಿರುವ ಸ್ಥಳಗಳಲ್ಲಿ ಸಣ್ಣ ಪಾತ್ರೆಗಳಲ್ಲಿ ನೀರನ್ನು ಇಡುವ ಮೂಲಕ ಪ್ರಾಣಿ–ಪಕ್ಷಿಗಳಿಗೆ ನೀರುಣಿಸುವ ಪುಣ್ಯದ ಕೆಲಸದಲ್ಲಿ ಎಲ್ಲರೂ ತೊಡಗಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಪರಿಸರ ಸಂರಕ್ಷಣೆಯ ಭಾಗವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ 5 ಲಕ್ಷ ಗಿಡಗಳನ್ನು ನೆಡುವ ಬೃಹತ್ ಅಭಿಯಾನಕ್ಕೆ ಈಗಾಗಲೇ ಚಾಲನೆ ನೀಡಲಾಗಿದ್ದು, ಸಾರ್ವಜನಿಕರು ಈ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಅವರು ಆಶಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಲತಾ ಕುಮಾರಿ ಎಂ, ಪ್ರಧಾನ ಕೌಟುಂಬಿಕ ನ್ಯಾಯಾಧೀಶರಾದ ಶಾರದಾ ಬಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಉಮೇಶ್ ಎಚ್.ಕೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಿಲ್ಪಾ ಬಿ ಉಪಸ್ಥಿತರಿದ್ದರು.

# ದೇವಸ್ಥಾನದ ಜಮೀನು ಕಬಳಿಕೆ ಅರ್ಚಕನ ಸ್ಕೆಚ್

ಮಾಲೂರು

ತಾಲ್ಲೂಕಿನ ಲಕ್ಕೂರು ಹೋಬಳಿಯ ವಪ್ಪಚಹಳ್ಳಿ ಗ್ರಾಮದ ಐತಿಹಾಸಿಕ ಶ್ರೀ ಆಂಜನೇಯ ಸ್ವಾಮಿ ದೇವಾಲಯಕ್ಕೆ ಸೇರಿದ ಕೋಟ್ಯಂತರ ರೂಪಾಯಿ ಬೆಲೆಬಾಳುವ ಜಮೀನನ್ನು ಅರ್ಚಕರು ಅಕ್ರಮವಾಗಿ ಮಾರಾಟ ಮಾಡಲು ಮುಂದಾಗಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ವಪ್ಪಚಹಳ್ಳಿ ಗ್ರಾಮದ ಸುಮಾರು 200 ವರ್ಷಗಳ ಪುರಾತನ ಮುಜರಾಯಿ ದೇವಾಲಯವನ್ನು ಗ್ರಾಮಸ್ಥರು ಕೋಟಿ ರೂಪಾಯಿ ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡಿದ್ದಾರೆ. ಅಂದಿನ ಕಾಲದಲ್ಲಿ ದಾನಿಗಳಾದ ಕೆಂಪಮ್ಮ ಎಂಬುವರು ದೇವಾಲಯದ ನಿತ್ಯ ಪೂಜೆ ಹಾಗೂ ಅರ್ಚಕರ ಜೀವನೋಪಾಯಕ್ಕಾಗಿ ಸರ್ವೆ ನಂಬರ್ 26/3ರಲ್ಲಿ 13.20 ಎಕರೆ ಜಮೀನನ್ನು ಮುಜರಾಯಿ ಇಲಾಖೆಗೆ ದಾನವಾಗಿ ನೀಡಿದ್ದರು.

ಆದರೆ, ಇಲ್ಲಿನ ಅರ್ಚಕ ಶಾಮಾಚಾರ್ ಎಂಬುವರ ಕುಟುಂಬವು ಬೆಂಗಳೂರಿಗೆ ವಲಸೆ ಹೋಗಿದ್ದು, ದೇವಾಲಯದಲ್ಲಿ ಸರಿಯಾಗಿ ಪೂಜೆ ಮಾಡುತ್ತಿಲ್ಲ. ಅಷ್ಟೇ ಅಲ್ಲದೆ, ದೇವಾಲಯಕ್ಕೆ ಸೇರಿದ 10 ಎಕರೆ ಜಮೀನನ್ನು ಈಗಾಗಲೇ ಮಾರಾಟ ಮಾಡಿದ್ದು, ಉಳಿದ 2 ಎಕರೆ 23 ಗುಂಟೆ ಜಮೀನನ್ನೂ ತನ್ನ ಹೆಸರಿಗೆ ಮಾಡಿಕೊಂಡು ಮಾರಾಟ ಮಾಡಲು ಸಂಚು ರೂಪಿಸಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಈ ಬಗ್ಗೆ ಪ್ರಶ್ನಿಸಿದ ಗ್ರಾಮದ ಮುಖಂಡರಿಗೆ ಅರ್ಚಕರ ಕುಟುಂಬದವರು ಮೊಬೈಲ್ ಮೂಲಕ ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ ಎಂದು ಗ್ರಾಮ ಪಂಚಾಯಿತಿ ಸದಸ್ಯ ರಾಜಪ್ಪ ಆರೋಪಿಸಿದರು. "ದಾನಿಗಳು ನೀಡಿದ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಯಾರಿಗೂ ಇಲ್ಲ. ತಕ್ಷಣವೇ ಈ ಅರ್ಚಕನನ್ನು ಬದಲಾಯಿಸಿ, ದೇವಾಲಯದ ಆಸ್ತಿಯನ್ನು ಮುಜರಾಯಿ ಇಲಾಖೆ ವಶಕ್ಕೆ ಪಡೆಯಬೇಕು" ಎಂದು ಅವರು ಒತ್ತಾಯಿಸಿದರು.

ಗ್ರಾಮದ ಮುಖಂಡ ವಿ. ಮುನಿರಾಜು ಮಾತನಾಡಿ, "ಜಮೀನು ಉಳಿಸಿಕೊಳ್ಳಲು ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಮನವಿ ಸಲ್ಲಿಸಲಾಗಿದೆ. ಒಂದು ವೇಳೆ ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ ಶಾಸಕರ ಮನೆಗೆ ಪಾದಯಾತ್ರೆ ನಡೆಸಲಾಗುವುದು" ಎಂದು ಎಚ್ಚರಿಸಿದರು. ಪ್ರತಿಭಟನೆಯ ಅಂಗವಾಗಿ ಗ್ರಾಮಸ್ಥರು ಹಾಗೂ ಯುವಕರು ದೇವಸ್ಥಾನದ ಮುಂದೆ ಪೂಜೆ ಸಲ್ಲಿಸಿ, ಜಮೀನಿನವರೆಗೆ ಕಾಲ್ನಡಿಗೆ ಜಾಥಾ ನಡೆಸಿ ಘೋಷಣೆಗಳನ್ನು ಕೂಗಿದರು. ಸಭೆಯಲ್ಲಿ ಮುಖಂಡರಾದ ಸಗ್ಗಪ್ಪ, ವೆಂಕಟೇಶ್, ನಿವೃತ್ತ ಶಿಕ್ಷಕ ಕೃಷ್ಣಪ್ಪ ಸೇರಿದಂತೆ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.



## ಕೃಷಿ ಹೊಂಡ: ಬೇಸಿಗೆ ರಜೆ ಹಿನ್ನೆಲೆ ಮಕ್ಕಳ ಮೇಲೆ ಪೋಷಕರ ಕಣ್ಣಿರಲಿ

ಚಿಂತಾಮಣಿ

ತಾಲ್ಲೂಕಿನಾದ್ಯಂತ ರೈತರ ಆರ್ಥಿಕ ಪ್ರಗತಿಗಾಗಿ ನಿರ್ಮಿಸಲಾಗಿರುವ ಕೃಷಿ ಹೊಂಡಗಳು ಸುರಕ್ಷತಾ ಕ್ರಮಗಳ ಕೊರತೆಯಿಂದ ಅನಾಹುತಗಳಿಗೆ ದಾರಿ ಮಾಡಿಕೊಡುತ್ತಿವೆ. ಇತ್ತೀಚಿನ ದಿನಗಳಲ್ಲಿ ಜಾನುವಾರು ಹಾಗೂ ಸಾರ್ವಜನಿಕರು ಆಕಸ್ಮಿಕವಾಗಿ ಹೊಂಡಕ್ಕೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, ರೈತರು ತಕ್ಷಣವೇ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಅಮರನಾರಾಯಣರೆಡ್ಡಿ ಮನವಿ ಮಾಡಿದ್ದಾರೆ.

**ಸಹಾಯಧನದ ಸದುಪಯೋಗ ಪಡೆಯಿರಿ:** ತಾಲ್ಲೂಕಿನಲ್ಲಿ ಕಳೆದ ಒಂದು ದಶಕದಲ್ಲಿ ಸುಮಾರು 3 ಸಾವಿರಕ್ಕೂ ಅಧಿಕ ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ. ಈ ಹೊಂಡಗಳ ಸುತ್ತ ತಂತಿಬೇಲಿ ನಿರ್ಮಿಸಲು ಸರ್ಕಾರದಿಂದ ಸಹಾಯಧನ ನೀಡಲಾಗುತ್ತಿದೆ. ಕೃಷಿ ಭಾಗ್ಯ ಯೋಜನೆಯಡಿ ಹೊಸದಾಗಿ ನಿರ್ಮಿಸಲಾದ ಹೊಂಡಗಳಿಗೆ ಮಾತ್ರವಲ್ಲದೆ, ಹಳೆಯ ಹೊಂಡಗಳಿಗೂ ಬೇಲಿ ಅಳವಡಿಸಲು ಪ್ರೋತ್ಸಾಹಧನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ರೈತರು ಇದರ ಸದುಪಯೋಗ ಪಡೆದು ಕಡ್ಡಾಯವಾಗಿ ಬೇಲಿ ನಿರ್ಮಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

**ಪ್ರಾಣ ರಕ್ಷಣೆಗೆ ಸರಳ ಕ್ರಮಗಳು:** ಕೇವಲ ಬೇಲಿ ನಿರ್ಮಿಸುವುದಷ್ಟೇ ಅಲ್ಲದೆ, ಹೊಂಡದ ಬಳಿ ಕಡ್ಡಾಯವಾಗಿ 'ಅಪಾಯ' ಎಂಬ ಎಚ್ಚರಿಕೆ ಫಲಕಗಳನ್ನು ಅಳವಡಿಸಬೇಕು. ತುರ್ತು ಸಂದರ್ಭದಲ್ಲಿ ಪ್ರಾಣ ರಕ್ಷಣೆಗಾಗಿ ಹೊಂಡದ ನಾಲ್ಕು ಮೂಲೆಗಳಲ್ಲಿ ರಬ್ಬರ್ ಟ್ಯೂಬ್‌ಗಳನ್ನು ಕಟ್ಟಿ, ಹಗ್ಗಗಳನ್ನು ಇಳಿಬಿಡಬೇಕು. ಆಕಸ್ಮಿಕವಾಗಿ ಯಾರಾದರೂ ಒಳಗೆ ಬಿದ್ದರೆ ಈ ಹಗ್ಗದ ನೆರವಿನಿಂದ ಮೇಲೆ ಬರಲು ಸಾಧ್ಯವಾಗುತ್ತದೆ ಎಂದು ಅವರು ಸಲಹೆ ನೀಡಿದರು.

**ಬೇಸಿಗೆ ರಜೆ; ಪೋಷಕರು ಎಚ್ಚರ!** ಶಾಲಾ ಮಕ್ಕಳಿಗೆ ಈಗ ಬೇಸಿಗೆ ರಜೆ ಇರುವುದರಿಂದ, ಮಕ್ಕಳು ಈಜಲು ಹೋಗುವ ಸಾಧ್ಯತೆ ಹೆಚ್ಚಿದೆ. ಹೊಂಡದ ಬದಿಗಳಲ್ಲಿ ಪ್ಲಾಸ್ಟಿಕ್ ಹೊದಿಕೆ ಇರುವುದರಿಂದ ಕಾಲು ಜಾರಿ ಪ್ರಾಣಾಪಾಯ ಸಂಭವಿಸಬಹುದು. ಆದ್ದರಿಂದ ಪೋಷಕರು ಮಕ್ಕಳ ಮೇಲೆ ನಿಗಾ ಇಡಬೇಕು ಮತ್ತು ಕೃಷಿ ಹೊಂಡಗಳ ಬಳಿ ಹೋಗದಂತೆ ಜಾಗೃತಿ ಮೂಡಿಸಬೇಕು ಎಂದು ಅಮರನಾರಾಯಣರೆಡ್ಡಿ ಕೋರಿದ್ದಾರೆ.

# ವ್ಯಾಸರಾಯತೀರ್ಥರ ಮಹತ್ವದ ಕೊಡುಗೆಗಳ ಅನಾವರಣ: ಸ್ಫೂರ್ತಿದಾಯಕ ಉಪನ್ಯಾಸ

ಬಳ್ಳಾರಿ

ಐತಿಹಾಸಿಕ ಕಾಲಘಟ್ಟದಲ್ಲಿ ಶ್ರೀ ವ್ಯಾಸರಾಯತೀರ್ಥರು ಸಂಗೀತ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳನ್ನು ಹುಟ್ಟು ಹಾಕಿ, ವ್ಯಾಸ ಕೂಟ–ದಾಸ ಕೂಟ ನಿರ್ಮಿಸಿ ಕನಕ, ಪುರಂದರ ದಾಸರಂತಹವರಿಗೆ ಗುರುಗಳಾಗಿದ್ದರು. ಆ ಕಾಲದಲ್ಲಿಯೇ ಅವರು 700ಕ್ಕೂ ಅಧಿಕ ಕೆರೆಗಳನ್ನು ನಿರ್ಮಿಸಿ, ಎಲ್ಲ ಸಮುದಾಯಗಳ ಅಭ್ಯುದಯವನ್ನು ಬಯಸಿದ್ದರು. ತತ್ವ ಶಾಸ್ತ್ರದ ಅಧ್ಯಯನಕ್ಕೆ ಅನೇಕ ಗುರುಕುಲಗಳನ್ನು ಸ್ಥಾಪಿಸಿದ್ದ ಮಹನೀಯರಾಗಿದ್ದರು ಎಂದು ಬೆಂಗಳೂರು ಜೈನ್ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕರು, ಲೇಖಕರು, ಸಂಶೋಧಕರಾದ ವಿದ್ವಾನ್ ಶ್ರೀನಿವಾಸ ಆಚಾರ್ಯ ಮುತ್ತಿಗಿ ಹೇಳಿದರು.



ಇಲ್ಲಿನ ಶ್ರೀ ಸತ್ಯನಾರಾಯಣ ಪೇಟೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಸಭಾಂಗಣದಲ್ಲಿ ಶುಕ್ರವಾರದಂದು ಸಂಜೆ ಬಳ್ಳಾರಿಯ ಪುನರುತ್ಥಾನ ಅಧ್ಯಯನ ಕೇಂದ್ರದಿಂದ ಆಯೋಜಿಸಿದ್ದ ಪುನರುತ್ಥಾನ ಉಪನ್ಯಾಸ ಸಂವೃತ್ತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಶ್ರೀಮದ್ ವ್ಯಾಸರಾಯರ ಮೇರು ವ್ಯಕ್ತಿತ್ವ ಹಾಗೂ ಅವರ ಐತಿಹಾಸಿಕ, ಸಾಂಸ್ಕೃತಿಕ, ಸಮಾಜಮುಖಿ ಮಹತ್ಕಾರ್ಯಗಳ ಕುರಿತಂತೆ ವಿದ್ವತ್ಪೂರ್ಣವಾಗಿ, ವಿಮರ್ಶಾತ್ಮಕವಾಗಿ, ಐತಿಹಾಸಿಕ ಆಧಾರ ಆಕರಗಳ ಮಾಹಿತಿಯ ಸಹಿತವಾಗಿ, ಸ್ಫೂರ್ತಿದಾಯಕ ಉಪನ್ಯಾಸ ನೆರವೇರಿಸಿದರು.

'ಕರ್ನಾಟಕ ವಿಜಯನಗರ ಸಾಮ್ರಾಜ್ಯ' ಸಂಸ್ಥಾಪನೆಯ ಶುಭ ದಿನೋತ್ಸವ ಸ್ಮೃತಿಯಲ್ಲಿ ಶ್ರೀ ವ್ಯಾಸರಾಜತೀರ್ಥ ಸ್ವಾಮಿ ನಿರ್ಮಿತ 'ವ್ಯಾಸ ಸಮುದ್ರ' ಜಲಾಶಯಕ್ಕೆ 500 ವರ್ಷಗಳು ಸಂದಿರುವ ಐತಿಹಾಸಿಕ ಸುದಿನದ ವೇಳೆ 'ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಶ್ರೀ ವ್ಯಾಸತೀರ್ಥ ಯತಿಗಳ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಸಮಾಜಮುಖಿ ಮಹಾತ್ಕಾರ್ಯಗಳು... ಕೊಡುಗೆಗಳು' ಕುರಿತು ಸಾದ್ಯಂತವಾಗಿ ವಿವರಿಸಿದ ಅವರು, 'ವ್ಯಾಸ ಸಮುದ್ರ' ಜಲಾಶಯ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಕಾರ್ಮಿಕರಿಗೆ ನೀರುಣಿಸುತ್ತಿದ್ದ ಇಬ್ಬರು ಸಾಮಾನ್ಯ ಸಹೋದರರಿಂದ ಲೋಕಾರ್ಪಣೆಗೊಳಿಸಿದ್ದು ವ್ಯಾಸರಾಯ ತೀರ್ಥರ ದೊಡ್ಡಸ್ತಿಕೆ. ಆಗ ಆ ಜಲಾಶಯವನ್ನು ಅವರು ಮನಸ್ಸು ಮಾಡಿದ್ದಿದ್ದರೆ ಚಕ್ರವರ್ತಿ ಶ್ರೀಕೃಷ್ಣದೇವಾಯ ಅಥವಾ ಸಮಾಜದ ಉನ್ನತ ವ್ಯಕ್ತಿಳಿಗಂದ ಲೋಕಾರ್ಪಣೆ ಮಾಡಬಹುದಿತ್ತು. ಆದರೆ, ಜನಸಾಮಾನ್ಯರಿಗೆ ಅವರು ಆದ್ಯತೆ ನೀಡಿದ್ದರು ಎಂದು ಸ್ಮರಿಸಿದರು.

ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಕಂದಕೂರು ಗ್ರಾಮದ ಬಳಿಯ ಬರಡು ಪ್ರದೇಶದಲ್ಲಿ 'ಪಾಪಾಘ್ನಿ' ನದಿ ಬಳಸಿಕೊಂಡು ಬೃಹತ್ ಜಲಾಶಯ ನಿರ್ಮಿಸಿದ್ದಾರೆ. ಕಾಲುವೆಗಳು, ತೂಬುಗಳು ಇಂದಿನ ಜಲತಂತ್ರಜ್ಞರಿಗೆ ಮತ್ತು ನೀರಾವರಿ ತಜ್ಞರಿಗೆ ಮಾದರಿಯಾಗಿವೆ. ಆ ಕಾಲದಲ್ಲಿ ಕೆರೆಗಳನ್ನು ಕಟ್ಟಿಸುವಾಗ ಗರ್ಭಿಣಿ ಸ್ತ್ರೀಯರಿಗೆ ಬಲಿ ಕೊಡುವ, ಕೆರೆಗೆ ಹಾರದಂತಹ ಪದ್ಧತಿ ಇತ್ತು. ಇದನ್ನು ನಿರ್ಮೂಲನೆ ಮಾಡಿದ ವ್ಯಾಸರಾಯತೀರ್ಥರು ಸಾಲಿಗ್ರಾಮ ಶಿಲೆ, ಶ್ರೀ ವೆಂಕಟೇಶ, ಶ್ರೀ ನರಸಿಂಹ ದೇವರು ಮತ್ತು ಶ್ರೀ ಪ್ರಾಣದೇವರ ತೂಬುಗಳನ್ನು ನಿರ್ಮಿಸಿ, ನೀರಿನ ಪ್ರವಾಹ ತಡೆದುಕೊಳ್ಳಲು ದೈವೀ ಶಕ್ತಿ ಸಂಚಯಿಸುವಂತೆ ಮಾಡಿದ್ದರು. ಆ ಕಾಲದಲ್ಲೇ ಇದೊಂದು ದೊಡ್ಡ ಕ್ರಾಂತಿಕಾರಿ ಬೆಳವಣಿಗೆ. 'ವ್ಯಾಸ ಸಮುದ್ರ' 500 ವರ್ಷಗಳುರುಳಿದರೂ ಇಂದಿಗೂ ಹಾಗೆಯೇ ಇರುವುದು ವಿಶೇಷ. ಮಳೆ ಇಲ್ಲದೇ ಬರಡಾಗಿದ್ದ ಕಂದಕೂರು ಗ್ರಾಮದಲ್ಲಿ 12 ವರ್ಷಗಳ ಕಾಲ ಅಲ್ಲಿಯೇ ನೆಲೆಗೊಂಡಿದ್ದ ಅವರು ಜಲಾಶಯ ನಿರ್ಮಾಣ ಮಾಡಿರುವ ಕುರಿತು ಅನೇಕ ಶಾಸನೋಕ್ತ, ಸಾಹಿತ್ಯಾಧಾರಗಳಿವೆ. ಸೋಮನಾಥ ಕವಿಯ ವ್ಯಾಸ ಚರಿತ್ರೆ, ಕಾವ್ಯಗಳು, ಹತ್ತಾರು ಶಾಸನಗಳು, ತಾಮ್ರ ಪತ್ರದ ಆಧಾರಗಳನ್ನಾಧರಿಸಿ ವಿದ್ವಾನ್ ಮುತ್ತಿಗಿ ಅವರು 'ವ್ಯಾಸ ಸಮುದ್ರ' ದ ಇತಿಹಾಸದ ಮೇಲೆ ಬೆಳಕು ಚೆಲ್ಲಿದರು. ವಿಜಯನಗರ ಆಳರಸರಾದ ಸಾಳ್ವ ನರಸಿಂಹ ರಾಯನಿಂದ ಮೊದಲುಗೊಂಡು ಅಚ್ಯುತದೇವರಾಯರವರೆಗೂ 6 ಜನ ಚಕ್ರವರ್ತಿಗಳ ಕುಲಗುರುಗಳಾಗಿ ಮಾರ್ಗದರ್ಶನ ನೀಡಿದಂತಹ ಮಹತ್ ರಾಜ್ಯ ಕಾರ್ಯ ಅವರದಾಗಿತ್ತು. ವಿಶೇಷವಾಗಿ ಶ್ರೀ ಕೃಷ್ಣದೇವರಾಯರ ಕಾಲಘಟ್ಟದಲ್ಲಿ ನಡೆದ ಯುದ್ಧಗಳಲ್ಲಿ ವ್ಯಾಸತೀರ್ಥರು ಪ್ರತ್ಯಕ್ಷವಾಗಿ ಭಾಗಿಯಾಗಿ, ಸೂಕ್ತ ಮಾರ್ಗದರ್ಶನ ನೀಡಿ ಗೆಲುವಿಗೆ ಪ್ರೇರಣೆ ನೀಡಿದ್ದರು. ಕೃಷ್ಣದೇವರಾಯ ರಾಯಚೂರು ಮೇಲಿನ ಘೋರ ಯುದ್ಧದ ವೇಳೆ ವ್ಯಾಸರಾಯರ ಕೊಡುಗೆ ಅನನ್ಯವಾಗಿತ್ತು ಎನ್ನುವುದನ್ನು ವಿದೇಶಿ ಪ್ರವಾಸಿಗರು ದಾಖಲಿಸಿದ್ದಾರೆ. ಯುದ್ಧದ ಕ್ಯಾಂಪ್ ನಲ್ಲಿದ್ದುಕೊಂಡು ಯುದ್ಧ ಸೋಲುವಂಥ ಸನ್ನಿವೇಶಗಳಲ್ಲಿ ಗೆಲುವಿನ ರೂವಾರಿಗಳೆನಿಸಿದ್ದರು. ರಾಜ್ಯಾಡಳಿತ ಕಾರ್ಯಗಳಲ್ಲಿ ಶ್ರೀಕೃಷ್ಣ ದೇವರಾಯರಿಗೆ ಆಗಾಗ ಸೂಕ್ತ ಸಲಹೆಗಳನ್ನು ನೀಡುತ್ತಿದ್ದ ವ್ಯಾಸರಾಯರು ವಿಜಯನಗರ ಸಾಮ್ರಾಜ್ಯದುದ್ದಕ್ಕೂ 732 ಪ್ರಾಣದೇವರುಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದರು. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಇಂದಿಗೂ ಶ್ರೀ ವ್ಯಾಸರಾಜ ಪ್ರತಿಷ್ಠಾಪಿತ ಆಂಜನೇಯ ಸ್ವಾಮಿ ದೇವಾಲಯಗಳಿವೆ. ಸಮಾಜದ ಎಲ್ಲ ಜಾತಿ, ಮತ, ಪಂಥಗಳ ಭೇದವಿಲ್ಲದೇ ಎಲ್ಲರೂ ಆಂಜನೇಯನನ್ನು ಪೂಜಿಸಿ, ಆರಾಧಿಸಲು ಅವಕಾಶ ಮಾಡಿಕೊಟ್ಟಿದ್ದರು. ಹಳ್ಳಿಗಳಲ್ಲಿ ಆ ಕಾಲಘಟ್ಟದಲ್ಲಿಯೇ ಸನಾತನ ಹಿಂದೂ ಧರ್ಮದ ಸಂಘಟನೆ, ಒಗ್ಗಟ್ಟು ಮತ್ತು ಐಕ್ಯತೆ ಮೂಡಿಸುತ್ತ ಜನರಲ್ಲಿ ಭಕ್ತಿ ಭಾವನೆಗಳನ್ನು ಬಿತ್ತುವ ಮೂಲಕ ದೊಡ್ಡ ಮಟ್ಟದ ಕ್ರಾಂತಿಗೈದಿದ್ದಾರೆ ಎಂದರು.

ಹಿರಿಯ ಖ್ಯಾತ ವಕೀಲರಾದ ಶ್ರೀನಿವಾಸ ಢಣಾಪುರ ಸ್ವಾಗತಿಸಿದರೆ, ಪುನರುತ್ಥಾನದ ಶ್ರೀನಾಥ ಜೋಷಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬಿ.ಹರಿಪ್ರಸಾದ್ ಅವರು ಪ್ರಾರ್ಥಿಸಿದರೆ, ಸೌಭಾಗ್ಯ ತಂಡದವರು, ಕುಮಾರಿ ಚಿ.ಶ್ರೇಯ, ಶ್ರೀರಕ್ಷಾ ಕಾವಿ, ಚಿಕ್ಕ ಕು.ಸಾಧನಾ ಅವರು ಗೀತಗಾಯನ ನಡೆಸಿಕೊಟ್ಟರು. ನಿವೃತ್ತ ಶಿಕ್ಷಕರು ಹಾಗೂ ಸಮಾಜ ಸೇವಕರಾದ ಗುಂಡಾಚಾರ್ ವಂದಿಸಿದರು. ಸತ್ಯನಾರಾಯಣ ಪೇಟೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ವ್ಯವಸ್ಥಾಪಕರು, ಸಿಬ್ಬಂದಿ ವರ್ಗ ಹಾಗೂ ಕಾರ್ಯಕರ್ತರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು. ಡಿ.ಕೆ. ಪ್ರಸಾದ್ ಸೇರಿದಂತೆ ಕಾರ್ಯಕ್ರಮದಲ್ಲಿ ಅನೇಕ ಇತಿಹಾಸಪ್ರಿಯರು ಪಾಲ್ಗೊಂಡಿದ್ದರು.

ಪರಂಪರಾಗತ ಐತಿಹ್ಯದಂತೆ, ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನೆಯು ಸಂಭವಿಸಿದ್ದು – ಶಾಲಿವಾಹನ ಶಕ 1258, ಧಾತ್ರ ಸಂವತ್ಸರ, ವೈಶಾಖ ಶುದ್ಧ ಸಪ್ತಮಿ – ಏಪ್ರಿಲ್ 17, 1336ರ ಸ್ಮರಣೆಗಾಗಿ ಈ ಕಾರ್ಯಕ್ರಮ ಚೇತೋಹಾರಿಯಾಗಿ ಜರುಗಿದ್ದು ವಿಶೇಷವಾಗಿತ್ತು.

ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ

ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ಭಾರತ ಸಾರಥಿ
BHARATHA SARATHI KANNADA DAILY NEWS PAPER
23/04/2026



# ಬಸವ ತತ್ವಗಳ ಚರ್ಚೆ, ಸಮ ಸಮಾಜ ನಿರ್ಮಾಣಕ್ಕೆ ವೇದಿಕೆಯಾಗಲಿ: ಅರವಿಂದ ಜತ್ತಿ

ಕೋಲಾರ

ಬಸವ ತತ್ವಗಳ ಚರ್ಚೆಯ ಮೂಲಕ ಜಾತಿಮತಬೇಧವಿಲ್ಲದ ಸಮಾಜ ನಿರ್ಮಾಣದ ಪ್ರಯತ್ನವಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸುವರ್ಣ ಗಂಗಾ ಕ್ಯಾಂಪಾಸ್‌ನಲ್ಲಿ ಅನುಭವ ಮಂಟಪದ ಉದ್ಘಾಟನೆ ನಡೆಸಿರುವುದು ಶ್ಲಾಘನೀಯ ಕಾರ್ಯ ಎಂದು ಕೇಂದ್ರ ಬಸವ ಸಮಿತಿ ಅಧ್ಯಕ್ಷರು ಮಾಜಿ ಉಪರಾಷ್ಟ್ರಪತಿ ಬಿಡಿ ಜತ್ತಿ ಅವರ ಪುತ್ರ ಅರವಿಂದ ಜತ್ತಿ ತಿಳಿಸಿದರು.

ನಗರ ಹೊರವಲಯದ ಮಂಗಸಂದ್ರದ ಸುವರ್ಣಗಂಗಾ ಕ್ಯಾಂಪಾಸ್‌ನಲ್ಲಿ ಬೆಂಗಳೂರು ಉತ್ತರ ವಿವಿಯಿಂದ ನಡೆದ ಬಸವಜಯಂತಿ ಕಾರ್ಯಕ್ರಮದಲ್ಲಿ ಅನುಭವ ಮಂಟಪದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಈ ಅನುಭವ ಮಂಟಪದಲ್ಲಿ ಬಸವ ತತ್ವಗಳ ಚರ್ಚೆ ನಡೆಸಿ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ನೆರವಾಗಬೇಕು, ಬಸವಣ್ಣನವರ ಸ್ಮರಣೆ ಜತೆಗೆ ಜಾತಿ, ಧರ್ಮ, ಕುಲ, ಮತಬೇಧವಿಲ್ಲದ ಮನಸ್ಥಿತಿ ಬಲಗೊಳ್ಳಬೇಕು ಎಂದು ಕರೆ ನೀಡಿದರು.

ದೇಹ, ಮನಸ್ಸು, ಆತ್ಮದ ನಡುವಿನ ಸೂಕ್ಷ್ಮ ತತ್ವಗಳನ್ನು ಅರಿತುಕೊಳ್ಳಬೇಕು, ಬಸವಣ್ಣನವರು ಹೇಳಿದಂತೆ ನಾವು



ದೇವರನ್ನು ದೇವಾಲಯ, ಚರ್ಚ್, ಮಸೀದಿಗಳಲ್ಲಿ ಹುಡುಕುವ ಅಗತ್ಯವಿಲ್ಲ, ನಮ್ಮನ್ನು ನಾವೇ ಅರಿತರೆ ಅದೇ ದೈವತ್ವ ಎಂದರು.

ದಮನಿತರ ಧ್ವನಿಯಾಗಿದ್ದ ಬಸವಣ್ಣನವರ ಅನುಭವ ಮಂಟಪದ ಈ ವೇದಿಕೆ ದೇಶದ ಗಮನ ಸೆಳೆಯಬೇಕು, ವಿದ್ಯಾರ್ಥಿಗಳು ವ್ಯಕ್ತಿಗತವಾಗಿ ತಮ್ಮ ಧ್ವನಿ ಏನು ಎಂಬುದನ್ನು ಅರಿಯಬೇಕು, ಅಸ್ಪೃಶ್ಯತೆಗೆ ತಿಲಾಂಜಲಿ ಇಡಬೇಕು, ಸ್ತ್ರೀ ಸಮಾನತೆಗೆ ಒತ್ತು ನೀಡಬೇಕು ಎಂದರು.

ವಿಶ್ವವಿದ್ಯಾಲಯದಲ್ಲಿ ಬಸವ ಬೀಜವನ್ನು ಭಿತ್ತಿದ್ದೀರಿ, ಇದು ನಿಮ್ಮ ಬದಲಾವಣೆಯ ಮಾರ್ಗ, ನಿಮ್ಮೊಳಗಿನ ಆತ್ಮ ಚೈತನ್ಯವನ್ನು ಅರಿವಾಗಿಟ್ಟುಕೊಂಡು ಬದುಕು ಸಾಗಿಸಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ಉತ್ತರ ವಿವಿಯ ಕುಲಪತಿ ಪ್ರೊ. ಬಿ.ಕೆ.ರವಿ ಮಾತನಾಡಿ, ಬಸವಣ್ಣನವರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಕೊಟ್ಟಿರುವ ಸಂದೇಶದ ಬುನಾದಿಯ ಮೇಲೆ ಸಮ ಸಮಾಜದ ತಳಹದಿಯ ಬುನಾದಿ ಹಾಕಿಕೊಟ್ಟವರು, ಜನಸಾಮಾನ್ಯರಿಗೆ ಸಂದೇಶಗಳನ್ನು ವಚನಗಳ ಮೂಲಕ ತಲುಪಿಸಿದರು ಎಂದರು.

ಬಸವಣ್ಣನವರ ವಚನಗಳಾದ ಉಳ್ಳವರು ಶಿವಾಲಯ ಮಾಡುವರು, ಮತ್ತು ಕಾಯಕವೇ ಕೈಲಾಸ ಮತ್ತಿತರ ತತ್ವಗಳ ಮಹತ್ವ ಸಮಾಜಕ್ಕೆ ಬೆಳಕು ನೀಡಿದೆ ಎಂದ ಅವರು, ಬಸವಣ್ಣನವರು ಸಾಮಾನಿಕ, ಆರ್ಥಿಕ,ರಾಜಕೀಯ ಬದಲಾವಣೆಗೆ ಅಡಿಪಾಯ ಹಾಕಿಕೊಟ್ಟ ಮಹಾಪುರುಷರು ಎಂದು ತಿಳಿಸಿದರು.

ಅನುಭವ ಮಂಟಪ ವೇದಿಕೆಯನ್ನು ಬಳಸಿಕೊಂಡು ಚರ್ಚೆಗಳ ಮೂಲಕ ಬಸವ ತತ್ವಗಳ ಮಹತ್ವ ಅರಿತು ಸಮ ಸಮಾಜದ ನಿರ್ಮಾಣಕ್ಕೆ ನೆರವಾಗಬೇಕು, ನಮ್ಮ ನಡುವಿನ ದ್ವೇಷ,ಅಸೂಯೆ ಕೊನೆಗೊಳ್ಳಬೇಕು, ಉಪನ್ಯಾಸಕರು, ವಿದ್ಯಾರ್ಥಿಗಳ ನಡುವೆ ಚರ್ಚೆಯ ವಿಷಯಗಳ ವಿನಿಯಮವಾಗಬೇಕು ಒಟ್ಟಾರೆ ಜ್ಞಾನಾರ್ಜನೆಗೆ ಈ ವೇದಿಕೆ ಬಳಕೆಯಾಗಲಿ ಎಂದರು.

ಅರವಿಂದ ಜತ್ತಿಯವರ ಬಸವ ತತ್ವಗಳ ಪ್ರಚಾರಕ್ಕೆ ನಡೆಸಿರುವ ಪ್ರಾಮಾಣಿಕ ಪ್ರಯತ್ನದ ಕುರಿತು ಕುಲಪತಿಗಳು ಶ್ಲಾಘಿಸಿ, ಅವರ ಪ್ರಯತ್ನ ಸಮ ಸಮಾಜಕ್ಕೆ ಕಾರಣವಾಗಲಿ ಎಂದರು. ಉತ್ತರ ವಿವಿಯ ಮೌಲ್ಯಮಾಪನ ಕುಲಸಚಿವ ಲೋಕನಾಥ್, ಅರವಿಂದ ಜತ್ತಿಯವರ ಸರಳ, ಸಜ್ಜನಿಕೆ ಮತ್ತು ಉತ್ಸಾಹ,ಚೈತನ್ಯ ಚಿಲುಮೆಗೆ ಅವರ ಬಸವತತ್ವ ಪಾಲನೆ ಮತ್ತು ಅಂತರಂಗ, ಬಹಿರಂಗ ಶುದ್ದಿಯೇ ಕಾರಣ ಎಂದರು. 6ನೇ ಶತಮಾನದಲ್ಲಿ ಬುದ್ದನ ಶಾಂತಿ ಮಂತ್ರ, ಅದೇ ದಾರಿಯಲ್ಲಿ 12ನೇ ಶತಮಾನದಲ್ಲಿ ಬಸವಣ್ಣನವರು ಜಾತಿ ಪದ್ಧತಿ ವಿರುದ್ದ ಧ್ವನಿಯೆತ್ತುವ ಮೂಲಕ ಪಂಚಭೂತಗಳು ಯಾರ ಸ್ವತ್ತಲ್ಲ ಎಂದು ಪ್ರತಿಪಾದಿಸಿದರು ಎಂದರು. ಉತ್ತರ ವಿವಿ ವಿತ್ತಾಧಿಕಾರಿ ವಸಂತಕುಮಾರ್ ಮಾತನಾಡಿ, ಅರವಿಂದ ಜತ್ತಿಯವರು ಬಸವಣ್ಣನವರ ತತ್ವಗಳ ಪ್ರಚಾರಕ್ಕಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದಾರೆ, ಅವರ ಪ್ರಯತ್ನದಿಂದ ಸಮಾಜಕ್ಕೆ ಉತ್ತಮ ಸಂದೇಶ ರವಾನೆಯಾಗುತ್ತಿದೆ ಎಂದರು.

ಸಿಂಡಿಕೇಟ್ ಸದಸ್ಯ ಗೋಪಾಲಗೌಡ ಮಾತನಾಡಿ, ಕೋಲಾರದ ಮಣ್ಣು ದೇಶಕ್ಕೆ ಮಹಾನ್ ವ್ಯಕ್ತಿಗಲನ್ನು ಕೊಡುಗೆಯಾಗಿ ನೀಡಿದೆ, ವಿದ್ಯಾರ್ಥಿಗಳು ಯಾವುದೇ ಕ್ಷೇತ್ರವನ್ನು ಆಯ್ಕೆಮಾಡಿಕೊಮಡರು ಆ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು, ಬಸವಣ್ಣ,ಬುದ್ದರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಆಡಳಿತ ಕುಲಸಚಿವ ಸಿ.ಎನ್. ಶ್ರೀಧರ್, ಸುವರ್ಣಗಂಗೆ ಸ್ನಾತಕೋತ್ತರ ಕೇಂದ್ರದ ನಿರ್ದೇಶಕಿ ಕುಮುದಾ, ಪಿ.ಎಂ. ಉಷಾ ನೋಡಲ್ ಅಧಿಕಾರಿ ರಮೇಶ್, ಸಿಂಡಿಕೇಟ್ ಸದಸ್ಯರಾದ ಸೀಸಂದ್ರ ಗೋಪಾಲಗೌಡ, ಅಕಾಡೆಮಿಕ್ ಕೌನ್ಸಿಲ್ ಸದಸ್ಯ ರಾಜಶೇಖರ್, ಲೋಕೇಶ್, ಬಸವರಾಜ್, ರಾಮಚಂದ್ರಪ್ಪ, ಮುನಿಶಾಮಿಗೌಡ ಮತ್ತಿತರಿದ್ದರು. ಕಾರ್ಯಕ್ರಮದಲ್ಲಿ ಬಸವ ಸಮಿತಿಯ ಪ್ರೊ. ವಿಶ್ವನಾಥ್ ಕವನ ವಾಚಿಸಿಸಿದರು. ಗಣಿತಶಾಸ್ತ್ರ ಉಪನ್ಯಾಸಕಿ ಸಿ.ಎಸ್.ಶ್ರೀಲತಾ ನಿರೂಪಿಸಿದ ಕಾರ್ಯಕ್ರಮದಲ್ಲಿ ಉಪನ್ಯಾಸಕಿ ನಂದಶ್ರೀ ಸ್ವಾಗತಿಸಿ, ಡಾ. ಗಾಯತ್ರಿದೇವಿ ಅತಿಥಿಗಳ ಪರಿಚಯ ಮಾಡಿಕೊಟ್ಟರು.

# ಚೌಡೇಶ್ವರಿ ಅಮ್ಮನವರ 13ನೇ ವಾರ್ಷಿಕೋತ್ಸವ

ದೇವನಹಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಪಟ್ಟಣದ ಪಾರ್ಕ್ ಶಾಲೆಯ ಪಕ್ಕದಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮನವರ ದೇವಾಲಯದ 13ನೇ ವರ್ಷದ ವಾರ್ಷಿಕೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಲೋಕ ಕಲ್ಯಾಣಾರ್ಥವಾಗಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಹೋಮ–ಹವನಗಳಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಪುನೀತರಾದರು.

ವಾರ್ಷಿಕೋತ್ಸವದ ಅಂಗವಾಗಿ ಅಮ್ಮನವರಿಗೆ ವಿಶೇಷ ಪುಷ್ಪಾಲಂಕಾರ ಮಾಡಲಾಗಿತ್ತು. ವಿಶೇಷವಾಗಿ ದೇವಿಗೆ ಮಾಡಿದ್ದ 'ಪ್ರತ್ಯಂಗಿರಾ ದೇವಿ' ಅಲಂಕಾರವು ಹೆಂಗಳೆಯರ ಹಾಗೂ ಸಾರ್ವಜನಿಕರ ವಿಶೇಷ ಗಮನ ಸೆಳೆಯಿತು. ಅಕ್ಷಯ ತೃತೀಯದ ಶುಭ ದಿನದಂದೇ ಲಲಿತ ಸಹಸ್ರನಾಮ ಪಠಣ, ಪಂಚಾಮೃತ ಅಭಿಷೇಕ ಹಾಗೂ ವಿವಿಧ ಮಂಗಳ ದ್ರವ್ಯಗಳೊಂದಿಗೆ ಪೂಜಾ ಕೈಂಕರ್ಯಗಳು ಜರುಗಿದವು.

ಸಮಾಜದ ಸರ್ವ ದೋಷಗಳ ನಿವಾರಣೆ, ಶಾಂತಿ, ಸಮೃದ್ಧಿ ಹಾಗೂ ಆರೋಗ್ಯ ಭಾಗ್ಯಕ್ಕಾಗಿ ಈ ವರ್ಷ ವಿಶೇಷವಾಗಿ ಪ್ರತ್ಯಂಗಿರಾ ಹೋಮ (ಮೆಣಸಿನಕಾಯಿ ಹೋಮ) ನಡೆಸಲಾಯಿತು. ನೂರಾರು ಭಕ್ತರು ಏಕಾಗ್ರ ಚಿತ್ತದಿಂದ ಹೋಮದಲ್ಲಿ ಭಾಗಿಯಾಗಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಸಂಕಲ್ಪ ಮಾಡಿಕೊಂಡರು.

ಈ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 'ನಂದಗೋಕುಲ' ಧಾರವಾಹಿ ಖ್ಯಾತಿಯ ನಟಿ ಎಸ್.ವಿ. ಮೇಘ ಮಾತನಾಡಿ, "ನಾನು ಹುಟ್ಟಿ ಬೆಳೆದ ಈ ಐತಿಹಾಸಿಕ ದೇವನಹಳ್ಳಿಯ ಚೌಡೇಶ್ವರಿ ಅಮ್ಮನವರ ದರ್ಶನ ಪಡೆದಿರುವುದು ಧನ್ಯತೆ ತಂದಿದೆ. ದೈವ ಮತ್ತು ಧರ್ಮವನ್ನು ನಂಬಿದರೆ ಬದುಕಿನಲ್ಲಿ ಸೋಲಿಲ್ಲ. ನಮ್ಮ ಮುಂದಿನ ಪೀಳಿಗೆಗೆ ಇಂತಹ ಸಂಸ್ಕಾರ ಮತ್ತು ಭಕ್ತಿಯನ್ನು ಕಲಿಸಿಕೊಡುವುದು ನಮ್ಮೆಲ್ಲರ ಜವಾಬ್ದಾರಿ," ಎಂದು ತಿಳಿಸಿದರು.

ದೇವಸ್ಥಾನದ ಸಮಿತಿಯ ಅಧ್ಯಕ್ಷ ಸಿ. ಅಶ್ವಥ್ ನಾರಾಯಣ್ ಹಾಗೂ ನಿವೃತ್ತ ತಹಶೀಲ್ದಾರ್ ಪಿ. ಗಂಗಾಧರ್ ಮಾತನಾಡಿ, ಕಳೆದ 12 ವರ್ಷಗಳಿಂದ ನಡೆಯುತ್ತಿರುವ ಈ ಸಂಪ್ರದಾಯವು ಈ ಬಾರಿ ಅದ್ದೂರಿಯಾಗಿ ನಡೆದಿದೆ. ಪಟ್ಟಣದ ಮಹಿಳೆಯರು ಅಮ್ಮನವರ ಚಿನ್ನದ ಲೇಪಿತ ಉತ್ಸವ ಮೂರ್ತಿಯನ್ನು ರಾಜಬೀದಿಗಳಲ್ಲಿ ಹೊತ್ತು ಸಾಗಿದ ಮೆರವಣಿಗೆ ಭಕ್ತಿ ಪರವಶತೆ ಮೂಡಿಸಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಜಿ. ಚಂದ್ರಣ್ಣ, ಪಿಳ್ಳಮುಂಚಮ್ಮಪ್ಪ, ಡಾ. ಎಲ್.ಎನ್. ನಾರಾಯಣಸ್ವಾಮಿ, ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸಿ. ಜಗನ್ನಾಥ್, ಪುರಸಭಾ ಸದಸ್ಯರು, ವಿವಿಧ ಸಂಘಗಳ ಪದಾಧಿಕಾರಿಗಳು ಹಾಗೂ ಸಾವಿರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಪಾಲ್ಗೊಂಡಿದ್ದರು.

# ಧರ್ಮಸ್ಥಳ ಸಂಘದಿಂದ 2 ಲಕ್ಷ ರೂ. ಸಹಾಯಧನ ವಿತರಣೆ

ಬಂಗಾರಪೇಟೆ

ತಾಲ್ಲೂಕಿನ ಹಿರೇಕರಪನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ವತಿಯಿಂದ 2 ಲಕ್ಷ ರೂಪಾಯಿಗಳ ಸಹಾಯಧನವನ್ನು ವಿತರಿಸಲಾಯಿತು.

ಸಹಾಯಧನ ವಿತರಿಸಿ ಮಾತನಾಡಿದ ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ಶಿವಾನಂದ ಚಾರ್ಯ, "ಧರ್ಮಸ್ಥಳ ಸಂಘವು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. 'ಕೆರೆಯ ನೀರು ಕೆರೆಗೆ ಚೆಲ್ಲಿ' ಎಂಬಂತೆ ಭಕ್ತರ ಕಾಣಿಕೆಯನ್ನು ಸಮಾಜದ ಏಳಿಗೆಗೇ ಬಳಸಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಈ ವರ್ಷ 38 ಕೆರೆಗಳ ಪುನಶ್ಚೇತನ ಮಾಡಲಾಗಿದೆ. ಅಲ್ಲದೆ, 800ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಶಿಕ್ಷಕರನ್ನು ಒದಗಿಸುವುದು ಹಾಗೂ ಡೆಸ್ಕ್–ಕುರ್ಚಿಗಳಂತಹ ಪರಿಕರಗಳನ್ನು ನೀಡುವ ಕೆಲಸ ಮಾಡಲಾಗಿದೆ. ಜಿಲ್ಲೆಯ ದೇವಾಲಯಗಳ ಅಭಿವೃದ್ಧಿಗೆ 10 ಕೋಟಿ ರೂ. ಅನುದಾನ ನೀಡಲಾಗಿದೆ," ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಹಾಲು ಒಕ್ಕೂಟದ ಉಪವ್ಯವಸ್ಥಾಪಕ ಡಾ. ಗಿರೀಶ್ ಗೌಡ, ವಿಸ್ತರಣಾಧಿಕಾರಿ ಎನ್.ಎಸ್. ಭಾನುಪ್ರಕಾಶ್, ಎಂಪಿಎಸ್ ಅಧ್ಯಕ್ಷ ಸಿ. ಗಜೇಂದ್ರ, ಉಪಾಧ್ಯಕ್ಷೆ ಕೃಷ್ಣಮ್ಮ ಹಾಗೂ ಮುಖ್ಯ ಕಾರ್ಯನಿರ್ವಾಹಕ ಎಂ. ಬಾಬು ಉಪಸ್ಥಿತರಿದ್ದರು.

# ಶ್ರಮ ಮತ್ತು ಸಂಯಮವೇ ಯಶಸ್ಸಿನ ಸೂತ್ರ; ಪ್ರಾಂಶುಪಾಲ ಪ್ರೊ. ಈರಪ್ಪ ನಾಯಕ

ಕೊರಟಗೆರೆ

"ವಿದ್ಯಾರ್ಥಿಗಳು ಜೀವನದಲ್ಲಿ ಶ್ರೇಷ್ಠ ಸಾಧನೆ ಮಾಡಬೇಕಾದರೆ ಕಠಿಣ ಪರಿಶ್ರಮ ಹಾಗೂ ಸಂಯಮ ಅತಿ ಮುಖ್ಯ. ಈ ಎರಡು ಗುಣಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಉತ್ತಮ ಶೈಕ್ಷಣಿಕ ಫಲಿತಾಂಶ ಪಡೆಯಲು ಸಾಧ್ಯ" ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಈರಪ್ಪ ನಾಯಕ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ 'ಸಮಾಜಶಾಸ್ತ್ರೀಯ ಸಿದ್ಧಾಂತ ರಚನೆಯಲ್ಲಿರುವ ಸವಾಲುಗಳು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಾಜಮುಖಿ ಜೀವನದ ಅಗತ್ಯ: ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಿಕ್ಷಣದ ಮಹತ್ವವನ್ನು ಅರಿತುಕೊಳ್ಳಬೇಕು. ಕೇವಲ ಪದವಿ ಪಡೆಯುವುದಷ್ಟೇ ಗುರಿಯಾಗಬಾರದು, ಸಮಾಜಕ್ಕೆ ಕೊಡುಗೆ ನೀಡುವ ಮೂಲಕ ಜವಾಬ್ದಾರಿಯುತ ಪ್ರಜೆಗಳಾಗಿ ರೂಪುಗೊಳ್ಳಬೇಕು. ಉತ್ತಮ ಸಾಧನೆಯ ಮೂಲಕ ಪೋಷಕರ ಆಸೆಗಳನ್ನು ಈಡೇರಿಸಬೇಕು ಎಂದು ಅವರು ಕರೆ ನೀಡಿದರು.

ಸಂಶೋಧನೆಯೇ ಸತ್ಯದ ಶೋಧ: ಪಾವಗಡ ಸರ್ಕಾರಿ ಕಾಲೇಜಿನ ಉಪನ್ಯಾಸಕ ಡಾ. ಎನ್.



ಶ್ರೀಧರ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿ, "ಸಾಮಾಜಿಕ ಸಂಶೋಧನೆಯ ಮೂಲ ಉದ್ದೇಶ ಸತ್ಯವನ್ನು ಹುಡುಕುವುದಾಗಿದೆ. ನೈಸರ್ಗಿಕ ವಿಜ್ಞಾನಗಳಿಗಿಂತ ಸಾಮಾಜಿಕ ವಿಜ್ಞಾನಗಳು ಸಂಕೀರ್ಣವಾಗಿದ್ದರೂ, ಸಮಾಜದ ಕಲ್ಯಾಣಕ್ಕಾಗಿ ಸತ್ಯಾಂಶಗಳನ್ನು ಹೊರತರುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ" ಎಂದರು.

ಐಕ್ಯೂಎಸಿ ಸಂಚಾಲಕಿ ಡಾ. ಡಿ.ಎಸ್. ದೀಪಾ ಮಾತನಾಡಿ, ವಿದ್ಯಾರ್ಥಿಗಳು ಜ್ಞಾನಾರ್ಜನೆಯ ಜೊತೆಗೆ ಹೊಸ ಹೊಸ ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಪ್ರತಿಭಾನ್ವಿತರಿಗೆ ಗೌರವ" ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಅಶ್ವಖ್ ಅಹಮದ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಲೇಜಿನ ಗ್ರಾಮೀಣ ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರೊ. ಗೋವಿಂದ ರಾಜು, ಡಾ. ಶಿವಪ್ಪ, ಡಾ. ರೂಪ, ಡಾ. ತಿಮ್ಮರಾಜು, ಡಾ. ಮಹೇಶ್, ಡಾ. ರಘುನಾಥ್, ಶಿಲ್ಪಾ, ಡಿ.ಕೆ. ಕಾವ್ಯ, ಮೋನಿಕಾ ಸೇರಿದಂತೆ ಸಮಾಜಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಹಾಗೂ ಬೋಧಕ ವರ್ಗದವರು ಉಪಸ್ಥಿತರಿದ್ದರು.

# ಧರ್ಮ ಪೀಠ ಸ್ಥಾಪಿಸಿದ ಕ್ರಾಂತಿಕಾರಿ ಶಂಕರರು: ಸಿಪಿಐ ಅನಿಲ್



ದೇವನಹಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಪಟ್ಟಣದ ಪಾರ್ಕ್ ಶಾಲೆಯ ಪಕ್ಕದಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮನವರ ದೇವಾಲಯದ 13ನೇ ವರ್ಷದ ವಾರ್ಷಿಕೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಲೋಕ ಕಲ್ಯಾಣಾರ್ಥವಾಗಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಹೋಮ–ಹವನಗಳಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಪುನೀತರಾದರು.

ವಾರ್ಷಿಕೋತ್ಸವದ ಅಂಗವಾಗಿ ಅಮ್ಮನವರಿಗೆ ವಿಶೇಷ ಪುಷ್ಪಾಲಂಕಾರ ಮಾಡಲಾಗಿತ್ತು. ವಿಶೇಷವಾಗಿ ದೇವಿಗೆ ಮಾಡಿದ್ದ 'ಪ್ರತ್ಯಂಗಿರಾ ದೇವಿ' ಅಲಂಕಾರವು ಹೆಂಗಳೆಯರ ಹಾಗೂ ಸಾರ್ವಜನಿಕರ ವಿಶೇಷ ಗಮನ ಸೆಳೆಯಿತು. ಅಕ್ಷಯ ತೃತೀಯದ ಶುಭ ದಿನದಂದೇ ಲಲಿತ ಸಹಸ್ರನಾಮ ಪಠಣ, ಪಂಚಾಮೃತ ಅಭಿಷೇಕ ಹಾಗೂ ವಿವಿಧ ಮಂಗಳ ದ್ರವ್ಯಗಳೊಂದಿಗೆ ಪೂಜಾ ಕೈಂಕರ್ಯಗಳು ಜರುಗಿದವು.

ಸಮಾಜದ ಸರ್ವ ದೋಷಗಳ ನಿವಾರಣೆ, ಶಾಂತಿ, ಸಮೃದ್ಧಿ ಹಾಗೂ ಆರೋಗ್ಯ ಭಾಗ್ಯಕ್ಕಾಗಿ ಈ ವರ್ಷ ವಿಶೇಷವಾಗಿ ಪ್ರತ್ಯಂಗಿರಾ ಹೋಮ (ಮೆಣಸಿನಕಾಯಿ ಹೋಮ) ನಡೆಸಲಾಯಿತು. ನೂರಾರು ಭಕ್ತರು ಏಕಾಗ್ರ ಚಿತ್ತದಿಂದ ಹೋಮದಲ್ಲಿ ಭಾಗಿಯಾಗಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಸಂಕಲ್ಪ ಮಾಡಿಕೊಂಡರು.

ಈ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 'ನಂದಗೋಕುಲ' ಧಾರವಾಹಿ ಖ್ಯಾತಿಯ ನಟಿ ಎಸ್.ವಿ. ಮೇಘ ಮಾತನಾಡಿ, "ನಾನು ಹುಟ್ಟಿ ಬೆಳೆದ ಈ ಐತಿಹಾಸಿಕ ದೇವನಹಳ್ಳಿಯ ಚೌಡೇಶ್ವರಿ ಅಮ್ಮನವರ ದರ್ಶನ ಪಡೆದಿರುವುದು ಧನ್ಯತೆ ತಂದಿದೆ. ದೈವ ಮತ್ತು ಧರ್ಮವನ್ನು ನಂಬಿದರೆ ಬದುಕಿನಲ್ಲಿ ಸೋಲಿಲ್ಲ. ನಮ್ಮ ಮುಂದಿನ ಪೀಳಿಗೆಗೆ ಇಂತಹ ಸಂಸ್ಕಾರ ಮತ್ತು ಭಕ್ತಿಯನ್ನು ಕಲಿಸಿಕೊಡುವುದು ನಮ್ಮೆಲ್ಲರ ಜವಾಬ್ದಾರಿ," ಎಂದು ತಿಳಿಸಿದರು.

ದೇವಸ್ಥಾನದ ಸಮಿತಿಯ ಅಧ್ಯಕ್ಷ ಸಿ. ಅಶ್ವಥ್ ನಾರಾಯಣ್ ಹಾಗೂ ನಿವೃತ್ತ ತಹಶೀಲ್ದಾರ್ ಪಿ. ಗಂಗಾಧರ್ ಮಾತನಾಡಿ, ಕಳೆದ 12 ವರ್ಷಗಳಿಂದ ನಡೆಯುತ್ತಿರುವ ಈ ಸಂಪ್ರದಾಯವು ಈ ಬಾರಿ ಅದ್ದೂರಿಯಾಗಿ ನಡೆದಿದೆ. ಪಟ್ಟಣದ ಮಹಿಳೆಯರು ಅಮ್ಮನವರ ಚಿನ್ನದ ಲೇಪಿತ ಉತ್ಸವ ಮೂರ್ತಿಯನ್ನು ರಾಜಬೀದಿಗಳಲ್ಲಿ ಹೊತ್ತು ಸಾಗಿದ ಮೆರವಣಿಗೆ ಭಕ್ತಿ ಪರವಶತೆ ಮೂಡಿಸಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಜಿ. ಚಂದ್ರಣ್ಣ, ಪಿಳ್ಳಮುಂಚಮ್ಮಪ್ಪ, ಡಾ. ಎಲ್.ಎನ್. ನಾರಾಯಣಸ್ವಾಮಿ, ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸಿ. ಜಗನ್ನಾಥ್, ಪುರಸಭಾ ಸದಸ್ಯರು, ವಿವಿಧ ಸಂಘಗಳ ಪದಾಧಿಕಾರಿಗಳು ಹಾಗೂ ಸಾವಿರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಪಾಲ್ಗೊಂಡಿದ್ದರು. ವಾರ್ಷಿಕೋತ್ಸವದ ಅಂಗವಾಗಿ ಅಮ್ಮನವರಿಗೆ ವಿಶೇಷ ಪುಷ್ಪಾಲಂಕಾರ ಮಾಡಲಾಗಿತ್ತು. ವಿಶೇಷವಾಗಿ ದೇವಿಗೆ ಮಾಡಿದ್ದ 'ಪ್ರತ್ಯಂಗಿರಾ ದೇವಿ' ಅಲಂಕಾರವು ಹೆಂಗಳೆಯರ ಹಾಗೂ ಸಾರ್ವಜನಿಕರ ವಿಶೇಷ ಗಮನ ಸೆಳೆಯಿತು. ಅಕ್ಷಯ ತೃತೀಯದ ಶುಭ ದಿನದಂದೇ ಲಲಿತ ಸಹಸ್ರನಾಮ ಪಠಣ, ಪಂಚಾಮೃತ ಅಭಿಷೇಕ ಹಾಗೂ ವಿವಿಧ ಮಂಗಳ ದ್ರವ್ಯಗಳೊಂದಿಗೆ ಪೂಜಾ ಕೈಂಕರ್ಯಗಳು ಜರುಗಿದವು.

ಸಮಾಜದ ಸರ್ವ ದೋಷಗಳ ನಿವಾರಣೆ, ಶಾಂತಿ, ಸಮೃದ್ಧಿ ಹಾಗೂ ಆರೋಗ್ಯ ಭಾಗ್ಯಕ್ಕಾಗಿ ಈ ವರ್ಷ ವಿಶೇಷವಾಗಿ ಪ್ರತ್ಯಂಗಿರಾ ಹೋಮ (ಮೆಣಸಿನಕಾಯಿ ಹೋಮ) ನಡೆಸಲಾಯಿತು. ನೂರಾರು ಭಕ್ತರು ಏಕಾಗ್ರ ಚಿತ್ತದಿಂದ ಹೋಮದಲ್ಲಿ ಭಾಗಿಯಾಗಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಸಂಕಲ್ಪ ಮಾಡಿಕೊಂಡರು.

ಈ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 'ನಂದಗೋಕುಲ' ಧಾರವಾಹಿ ಖ್ಯಾತಿಯ ನಟಿ ಎಸ್.ವಿ. ಮೇಘ ಮಾತನಾಡಿ, "ನಾನು ಹುಟ್ಟಿ ಬೆಳೆದ ಈ ಐತಿಹಾಸಿಕ ದೇವನಹಳ್ಳಿಯ ದೈವ ಮತ್ತು ಧರ್ಮವನ್ನು ನಂಬಿದರೆ ಬದುಕಿನಲ್ಲಿ ಸೋಲಿಲ್ಲ. ನಮ್ಮ ಮುಂದಿನ ಪೀಳಿಗೆಗೆ ಇಂತಹ ಸಂಸ್ಕಾರ ಮತ್ತು ಭಕ್ತಿಯನ್ನು ಕಲಿಸಿಕೊಡುವುದು ನಮ್ಮೆಲ್ಲರ ಜವಾಬ್ದಾರಿ," ಎಂದು ತಿಳಿಸಿದರು.

ದೇವಸ್ಥಾನದ ಸಮಿತಿಯ ಅಧ್ಯಕ್ಷ ಸಿ. ಅಶ್ವಥ್ ನಾರಾಯಣ್ ಹಾಗೂ ನಿವೃತ್ತ ತಹಶೀಲ್ದಾರ್ ಪಿ. ಗಂಗಾಧರ್ ಮಾತನಾಡಿ, ಕಳೆದ 12 ವರ್ಷಗಳಿಂದ ನಡೆಯುತ್ತಿರುವ ಈ ಸಂಪ್ರದಾಯವು ಈ ಬಾರಿ ಅದ್ದೂರಿಯಾಗಿ ನಡೆದಿದೆ. ಪಟ್ಟಣದ ಮಹಿಳೆಯರು ಅಮ್ಮನವರ ಚಿನ್ನದ ಲೇಪಿತ ಉತ್ಸವ ಮೂರ್ತಿಯನ್ನು ರಾಜಬೀದಿಗಳಲ್ಲಿ ಹೊತ್ತು ಸಾಗಿದ ಮೆರವಣಿಗೆ ಭಕ್ತಿ ಪರವಶತೆ ಮೂಡಿಸಿತು.

# ಪತ್ರಕರ್ತರ ಸಹಕಾರ ಸಂಘದ ಕಾರ್ಯಕಾರಿ ಸಮಿತಿ ಸಭೆ

ಕೋಲಾರ

ಪತ್ರಕರ್ತರಿಗೆ ಸೂರು ಕಲ್ಪಿಸುವ ಸದುದ್ದೇಶದಿಂದ ನಿವೇಶನಗಳಿಗಾಗಿ ಸರ್ಕಾರಿ ಜಮೀನು ಪಡೆಯಲು ಜಿಲ್ಲಾಧಿಕಾರಿ ಹಾಗೂ ಜಿಲ್ಲೆಯ ಎಲ್ಲಾ ಶಾಸಕರಿಗೆ ಮನವಿ ಸಲ್ಲಿಸುವುದು ಮತ್ತು ಖಾಸಗಿ ಮಾಲೀಕತ್ವದ ಲೇಔಟ್‌ಗಳಲ್ಲಿ ಪತ್ರಕರ್ತರಿಗೆ ರಿಯಾಯಿತಿ ದರದಲ್ಲಿ ನಿವೇಶನ ಒದಗಿಸಲು ಕ್ರಮವಹಿಸಲು ಜಿಲ್ಲಾ ಕಾರ್ಯನಿರತ ಪತ್ರಕರ್ತರ ವಿವಿಧೋದ್ದೇಶ ಸಹಕಾರ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಸಂಘದ ಅಧ್ಯಕ್ಷ ಕೆ.ಎಸ್. ಗಣೇಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಉಪಾಧ್ಯಕ್ಷ ಅಬ್ಬಣಿ ಶಂಕರ್ ಹಾಗೂ ಸಂಘದ ನಿರ್ದೇಶಕರಾದ ಎ.ಜಿ. ಸುರೇಶ್‌ಕುಮಾರ್, ರಾಜೇಂದ್ರ, ರವಿ, ಸಿ.ವಿ.ನಾಗರಾಜ್ ಮತ್ತಿತರರು, ಪತ್ರಕರ್ತರಿಗೆ ನಿವೇಶನ ವಿತರಿಸುವ ಕುರಿತ ಅವಕಾಶ ವಿವಿಧೋದ್ದೇಶ ಸಹಕಾರ ಸಂಘ ಬೈಲಾದಲ್ಲೇ ಇರುವುದರಿಂದ ಈ ಕುರಿತು ಗಂಭೀರ ಪ್ರಯತ್ನ ಮಾಡಬೇಕೆಂದು ಸಲಹೆ ನೀಡಿದರು.

ಆದ್ದರಿಂದ ಆದಷ್ಟು ಶೀಘ್ರ ಸರ್ಕಾರಿ ನಿವೇಶನ



ಪಡೆಯಲು ಪ್ರಯತ್ನಿಸಿ, ಇಲ್ಲವಾದಲ್ಲಿ ಖಾಸಗಿ ಲೇಔಟ್ ಮಾಲೀಕರ ಮನವೊಲಿಸಿ ಪತ್ರಕರ್ತರಿಗೆ ರಿಯಾಯಿತಿ ದರದಲ್ಲಿ ನಿವೇಶನ ಒದಗಿಸಲು ಕ್ರಮವಹಿಸಿ ಎಂದು ಸಲಹೆ ನೀಡಿದರು.

ಇದಕ್ಕೆ ಉತ್ತರಿಸಿದ ಅಧ್ಯಕ್ಷ ಕೆ.ಎಸ್.ಗಣೇಶ್, ಶೀಘ್ರ ಈ ಸಂಬಂಧ ಸರ್ಕಾರಿ ಜಮೀನಿಗಾಗಿ ಡಿಸಿಯವರಿಗೆ ಮನವಿ ಸಲ್ಲಿಸೋಣ, ವಸತಿ ಸಚಿವರೊಂದಿಗೆ ಮಾತನಾಡಿ, ಪತ್ರಕರ್ತರಿಗೆ ನಿವೇಶನಕ್ಕಾಗಿ ಲೇಔಟ್ ಮಾಡುವ ಕುರಿತು ಕ್ರಮವಹಿಸೋಣ ಎಂದರು.

ಈ ಸಂಬಂಧ ಮುಖ್ಯಮಂತ್ರಿಗಳು, ಉಸ್ತುವಾರಿ ಸಚಿವರು, ಜಿಲ್ಲೆಯ ಎಲ್ಲಾ ಶಾಸಕರಿಗೂ ಮನವಿ ಸಲ್ಲಿಸೋಣ, ತಾಲ್ಲೂಕು ಹಂತದಲ್ಲೂ ಪತ್ರಕರ್ತರಿಗೆ ನಿವೇಶನ ಸಿಗುವಂತೆ ಮಾಡಲು ಸದಾ ಕ್ರಿಯಾಶೀಲರಾಗಿದ್ದು, ಕ್ರಮವಹಿಸೋಣ ಎಂದರು.

ಅಂಬೇಡ್ಕರ್ ವಿಚಾರಧಾರೆ ಅರಿಯಲು ಅಂಬೇಡ್ಕರ್ ಮತ್ತು ಪತ್ರಿಕೋದ್ಯಮ ಆಶಯಗಳ ಕುರಿತು ವಿಚಾರ ಸಂಕಿರಣವನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಕಾರದೊಂದಿಗೆ ಪತ್ರಕರ್ತರ ಭವನದಲ್ಲೇ ನಡೆಸಲು ತೀರ್ಮಾನಿಸಲಾಯಿತು.

ಸಾಮಾಜಿಕ ಕಾರ್ಯಗಳಲ್ಲೂ ಸಹಕಾರ ಸಂಘ ಪ್ರಮುಖ ಪಾತ್ರವಹಿಸಲು ಮುಂದಾಗಿದ್ದು, ಮುಂದಿನ ದಿನಗಳಲ್ಲಿ ದಾನಿಗಳ ಸಹಭಾಗಿತ್ವ ಪಡೆದು ಸರ್ಕಾರಿ ಶಾಲೆಗಳ ಮಕ್ಕಳಿಗೆ ನೋಟ್ ಪುಸ್ತಕ, ಬ್ಯಾಗ್, ಶೂ,ಟ್ರ್ಯಾಕ್‌ಶೂಟ್ ಮತ್ತಿತರ ನೆರವು ಒದಗಿಸುವ ಚಿಂತನೆಗೂ ಸಭೆಯಲ್ಲಿ ಬೆಂಬಲ ವ್ಯಕ್ತವಾಯಿತು.

ಉಪಾಧ್ಯಕ್ಷ ಅಬ್ಬಣಿ ಶಂಕರ್ ಮಾತನಾಡಿ, ಷೇರು ಬಂಡವಾಳ ಹೆಚ್ಚಿಸುವ ನಿಟ್ಟಿನಲ್ಲಿ ಷೇರು ಮೌಲ್ಯ ಐದು ಸಾವಿರಕ್ಕೆ ಹೆಚ್ಚಿಸುವ ಕುರಿತು ನಿರ್ಣಯ ಮಾಡಿ, ಇದನ್ನು ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಅಂಗೀಕರಿಸಲು ಕ್ರಮವಹಿಸೋಣ ಎಂದರು.

ಪತ್ರಕರ್ತರು ಹಾಗೂ ಸಂಘದ ಸದಸ್ಯರು, ಕುಟುಂಬದವರಿಗೆ ಆರೋಗ್ಯ ತಪಾಸಣಾ ಶಿಬಿರ ನಡೆಸಲು ನಿರ್ಧಾರ ಕೈಗೊಂಡಿದ್ದು, ಒಟ್ಟಾರೆ ಇದು ವಿವಿಧೋದ್ದೇಶ ಸಹಕಾರ ಸಂಘವಾಗಿರುವುದರಿಂದ ಬೈಲಾ ಪ್ರಕಾರವೇ ನಾವು ನಿವೇಶನ, ಮನೆ ಹಂಚಿಕೆ, ಸೇರಿದಂತೆ ವಿವಿಧ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶವಿದೆ ಎಂದು ತಿಳಿಸಿದರು.

ಈ ಸಭೆಯಲ್ಲಿ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷರು ಹಾಗೂ ನಿರ್ದೇಶಕ ಬಿ.ವಿ. ಗೋಪಿನಾಥ್, ಸಹಕಾರ ಸಂಘದ ನಿರ್ದೇಶಕರಾದ ಎಂ.ವರಲಕ್ಷ್ಮೀ ಸೋಮಶೇಖರ್, ಎಸ್.ವಿ.ಲೋಕೇಶ್, ಎಚ್. ಎಲ್.ಸುರೇಶ್, ಎಂ.ನಾಗರಾಜಯ್ಯ, ಈಶ್ವರ್, ಶಬ್ಬೀರ್, ಪತ್ರಕರ್ತ ಚಾಂದ್ ಪಾಷಾ ಮತ್ತಿತರರಿದ್ದರು. ಕಾರ್ಯದರ್ಶಿ ಗಂಗಾಧರ್ ಸ್ವಾಗತಿಸಿದರು.

# 'ಕೋಚಿಮುಲ್ ಅನುದಾನ ರೈತರ ಪಾಲಾಗಲಿ'

ಬೇತಮಂಗಲ

"ನನಗೆ ಬರುವ ಅನುದಾನವು ನೇರವಾಗಿ ರೈತರಿಗೆ ತಲುಪಬೇಕು ಎಂಬ ಉದ್ದೇಶದಿಂದ ಒಕ್ಕೂಟದ ವ್ಯಾಪ್ತಿಯ 62 ಹಾಲು ಉತ್ಪಾದಕರ ಸಂಘಗಳಿಗೆ ಚೇರ್ ಮತ್ತು ಟೇಬಲ್‌ಗಳನ್ನು ವಿತರಿಸಲಾಗುತ್ತಿದೆ" ಎಂದು ಕೋಚಿಮುಲ್ ನಿರ್ದೇಶಕ ಜಯಸಿಂಹ ಕೃಷ್ಣಪ್ಪ (ಗೋಪಿ) ತಿಳಿಸಿದರು.

ತಾಲ್ಲೂಕಿನ ಕಮ್ಮಸಂದ್ರ ಗ್ರಾಮದ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಪೀಠೋಪಕರಣ ವಿತರಣಾ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

"ಸಂಘಗಳ ಅಭಿವೃದ್ಧಿಗಾಗಿ ಈಗಾಗಲೇ ವಾಟರ್ ಫಿಲ್ಟರ್‌ಗಳನ್ನು ನೀಡಲಾಗುತ್ತಿದೆ. ಕ್ಯಾಸಂಬಳ್ಳಿ ಆಸ್ಪತ್ರೆಗೂ ಫಿಲ್ಟರ್ ಒದಗಿಸಲಾಗಿದೆ. ಹಾಲಿನ ಸಹಾಯಧನವನ್ನು ಹೆಚ್ಚಳ ಮಾಡುವುದರ ಜೊತೆಗೆ, ಕೊರೊನಾ ಸಂಕಷ್ಟದ ಸಮಯದಲ್ಲಿ ಕಾರ್ಯದರ್ಶಿಗಳ ಕೆಲಸ ಸುಲಭವಾಗಲಿ ಎಂದು ದಕ್ಷಿಣ ಕೊರಿಯಾದಿಂದ ಟ್ಯಾಬ್‌ಗಳನ್ನು ತರಿಸಿಕೊಡಲಾಗಿತ್ತು. ನಾನು ಪ್ರಚಾರಕ್ಕಾಗಿ ಕೆಲಸ ಮಾಡುವ ವ್ಯಕ್ತಿಯಲ್ಲ, ನಾನು ಮಾಡುವ ಸೇವೆ ಜನರಿಗೆ ತಿಳಿದಿದೆ. ಕಳೆದ ಚುನಾವಣೆಯಲ್ಲಿ ಮತದಾರರು ನೀಡಿದ ಬೆಂಬಲವೇ ಇದಕ್ಕೆ ಸಾಕ್ಷಿ" ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ನಿರ್ದೇಶಕಿ ಕಾಂತಮ್ಮ ಸೋಮಣ್ಣ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಕಮ್ಮಸಂದ್ರ ಸಂಘದ ಅಧ್ಯಕ್ಷ ಪ್ರಸಾದ್, ಕಾರ್ಯದರ್ಶಿ ಶಿವಣ್ಣ, ಡಿಎಂಓ ಗಿರೀಶ್ ಗೌಡ, ಮುಖಂಡರಾದ ಆನಂದ್ ರೆಡ್ಡಿ, ಅಭಿ ರೆಡ್ಡಿ ಹಾಗೂ ವಿವಿಧ ಸಂಘಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಬಾಸ್ಕೆಟ್‌ಬಾಲ್ ಅಂಕಣಕ್ಕೆ ಸಿಂಥೆಟಿಕ್ ಸ್ಪರ್ಶದ ಭರವಸೆ: ಡಿಸಿ ಶುಭ ಕಲ್ಯಾಣ್

ತುಮಕೂರು

"ಜಿಲ್ಲೆಯಲ್ಲಿ ಕ್ರೀಡಾ ಚಟುವಟಿಕೆಗಳನ್ನು ಉತ್ತೇಜಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಹಾಗೂ ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಒದಗಿಸಲಾಗುವುದು" ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದರು.

ನಗರದ ಮಹಾತ್ಮಾಗಾಂಧಿ ಕ್ರೀಡಾಂಗಣದ ಆವರಣದಲ್ಲಿರುವ ಡಾ. ಜಿ. ಪರಮೇಶ್ವರ್ ಒಳಾಂಗಣ ಕ್ರೀಡಾಂಗಣದಲ್ಲಿ ತುಮಕೂರು ಜಿಲ್ಲಾ ಬಾಸ್ಕೆಟ್‌ಬಾಲ್ ಅಸೋಸಿಯೇಶನ್ ಹಮ್ಮಿಕೊಂಡಿದ್ದ 'ಬಾಸ್ಕೆಟ್‌ಬಾಲ್ ಬೇಸಿಗೆ ಶಿಬಿರ' ಉದ್ಘಾಟಿಸಿ ಅವರು ಮಾತನಾಡಿದರು.

ಬಾಸ್ಕೆಟ್‌ಬಾಲ್ ಅಂಕಣಕ್ಕೆ ಹೊಸ ರೂಪ: ಸ್ಮಾರ್ಟ್ ಸಿಟಿ ಯೋಜನೆಯಡಿ ಕ್ರೀಡಾಂಗಣ ನವೀಕರಣಗೊಂಡಾಗ ಹಳೆಯ ಬಾಸ್ಕೆಟ್‌ಬಾಲ್ ಅಂಕಣ ತೆರವುಗೊಳಿಸಲಾಗಿತ್ತು. ಅಸೋಸಿಯೇಷನ್ ಮನವಿಯ ಮೇರೆಗೆ 10 ಲಕ್ಷ ರೂ. ವೆಚ್ಚದಲ್ಲಿ ಹೊಸ ಅಂಕಣ ನಿರ್ಮಿಸಿಕೊಡಲಾಗಿದೆ. "ಸಿಮೆಂಟ್ ಅಂಕಣ ಜಾರುತ್ತಿರುವುದರಿಂದ ಸಿಂಥೆಟಿಕ್ ಬಣ್ಣ ಮಾಡಿಸಿಕೊಡುವಂತೆ ಕ್ರೀಡಾಪಟುಗಳು ಕೋರಿದ್ದಾರೆ. ಶೀಘ್ರದಲ್ಲೇ ಒಲಿಂಪಿಕ್ ಅಸೋಸಿಯೇಷನ್ ಮೂಲಕ ಸಿಂಥೆಟಿಕ್ ಕೋರ್ಟ್ ವ್ಯವಸ್ಥೆ ಮಾಡಲಾಗುವುದು" ಎಂದು ಡಿಸಿ ಭರವಸೆ ನೀಡಿದರು.

ಮೊಬೈಲ್ ಬಿಟ್ಟು ಮೈದಾನಕ್ಕಿಳಿದ ಮಕ್ಕಳು: ಜಿಲ್ಲೆಯಲ್ಲಿ ಕ್ರೀಡಾ ವಾತಾವರಣ ಗರಿಗೆದರುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, "ಅಮಾನಿಕೆರೆಯಲ್ಲಿ ಕಯಾಕಿಂಗ್ ತರಬೇತಿ ಆರಂಭವಾಗಿದೆ. ನೂರಾರು ಮಕ್ಕಳು ಮೊಬೈಲ್ ವ್ಯಾಮೋಹ ಬಿಟ್ಟು ಕ್ರೀಡಾಂಗಣಕ್ಕೆ ಇಳಿಯುತ್ತಿರುವುದು ಉತ್ತಮ ಬೆಳವಣಿಗೆ. ಮಕ್ಕಳ ಈ ಉತ್ಸಾಹಕ್ಕೆ ಜಿಲ್ಲಾಡಳಿತ ಸದಾ ಬೆಂಬಲ ನೀಡಲಿದೆ" ಎಂದರು.

8 ವರ್ಷಗಳ ನಂತರ ಸಿಕ್ಕಿದ ಅಂಕಣ: ಜಿಲ್ಲಾ ಬಾಸ್ಕೆಟ್‌ಬಾಲ್ ಅಸೋಸಿಯೇಷನ್‌ನ ಅನಿಲ್ ಕುಮಾರ್ ಮಾತನಾಡಿ, "ಜಿಲ್ಲಾಡಳಿತದ ನೆರವಿನಿಂದಾಗಿ ಬರೋಬ್ಬರಿ 8 ವರ್ಷಗಳ ನಂತರ ಬಾಸ್ಕೆಟ್‌ಬಾಲ್ ಆಟಗಾರರಿಗೆ ಅಂಕಣ ದೊರೆತಿದೆ. ಈ ಬೇಸಿಗೆ ಶಿಬಿರದಲ್ಲಿ 6 ರಿಂದ 16 ವರ್ಷದ 35ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದು, ಹಿರಿಯ ಆಟಗಾರರು ತರಬೇತಿ ನೀಡುತ್ತಿದ್ದಾರೆ. ಇದು ಜಿಲ್ಲೆಯಲ್ಲಿ ಬಲಿಷ್ಠ ಬಾಸ್ಕೆಟ್‌ಬಾಲ್ ತಂಡ ಕಟ್ಟಲು ನೆರವಾಗಲಿದೆ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಸೋಸಿಯೇಷನ್ ಸದಸ್ಯರಾದ ಮಧುಸೂಧನ್ ಬಿ., ರಕ್ಷಿತ ವಿ., ಆರ್. ಕಾರ್ತಿಕ್ ಗೌಡ, ಹರ್ಷ, ಸಾಗರ್ ಆರ್. ಸೇರಿದಂತೆ ಹಲವು ಕ್ರೀಡಾ ಪ್ರೇಮಿಗಳು ಉಪಸ್ಥಿತರಿದ್ದರು.



6
23/04/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಬಸವಣ್ಣನವರ ವಚನಗಳು ಸಮಾಜದ ಬದಲಾವಣೆಗೆ ಪ್ರೇರಣೆ: ರುದ್ರೇಶ್ ಮೂರ್ತಿ



ವಿಜಯಪುರ

"12ನೇ ಶತಮಾನದ ವಚನ ಚಳವಳಿಯು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ವಿಶಿಷ್ಟ ಕಾಲಘಟ್ಟ. ಸಾಮಾಜಿಕ ಅಸಮಾನತೆ ಹಾಗೂ ಜಾತಿ ವ್ಯವಸ್ಥೆಯಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಬಸವಣ್ಣನವರು ಮತ್ತು ವಚನಕಾರರು ತಮ್ಮ ಸರಳ ವಚನಗಳ ಮೂಲಕ ಸಮಾಜದಲ್ಲಿ ಹೊಸ ಚಿಂತನೆಯ ಕ್ರಾಂತಿ ಮೂಡಿಸಿದರು" ಎಂದು ಬೆಂಗಳೂರು ಗ್ರಾಮಾಂತರ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಚ್.ಎಸ್. ರುದ್ರೇಶ್ ಮೂರ್ತಿ ತಿಳಿಸಿದರು.

ಪಟ್ಟಣದ 13ನೇ ವಾರ್ಡ್‌ನಲ್ಲಿರುವ ಶ್ರೀ ಬಸವೇಶ್ವರ ದೇವಾಲಯದಲ್ಲಿ ಹಮ್ಮಿಕೊಂಡಿದ್ದ 'ಬಸವ ಜಯಂತಿ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪುರಸಭೆಯ ಮಾಜಿ ಸದಸ್ಯ ಎಸ್. ಭಾಸ್ಕರ್ ಮಾತನಾಡಿ, "ವಚನಕಾರರು ಯಾವುದೇ ಜಾತಿಯ ಹಂಗಿಲ್ಲದೆ ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದರು. ಅಂತಹ ಶ್ರೇಷ್ಠ ಚಿಂತಕರಿಗೆ ಹಾಗೂ ಕಾಯಕ ಜೀವಿಗಳಿಗೆ 'ಅನುಭವ ಮಂಟಪ'ದ ಮೂಲಕ ವೇದಿಕೆ ಕಲ್ಪಿಸಿಕೊಟ್ಟವರು ಜಗಜ್ಯೋತಿ ಬಸವಣ್ಣನವರು" ಎಂದರು. ಇದೇ ಸಂದರ್ಭದಲ್ಲಿ ಕಾಯಕಯೋಗಿ ಮುನಿಯಪ್ಪ ಅವರನ್ನು ಸಮಾಜದ ಪರವಾಗಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಪುರಸಭೆ ಮಾಜಿ ಅಧ್ಯಕ್ಷೆ ರಾಜೇಶ್ವರಿ ಭಾಸ್ಕರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಕವಿ ಮಾ. ಸುರೇಶ್ ಬಾಬು, ಚಂದ್ರಶೇಖರ ಹಡಪದ್, ಬಸವರಾಜು, ಪ್ರಕಾಶ್, ಪ್ರಭುದೇವ್ ಸೇರಿದಂತೆ ವಾರ್ಡಿನ ಪ್ರಮುಖರು ಹಾಗೂ ಭಕ್ತಾಧಿಗಳು ಪಾಲ್ಗೊಂಡಿದ್ದರು.

# ನಾರಿಶಕ್ತಿ ವಂದನ್‌ಗೆ ವಿರೋಧ- ಬಿಜೆಪಿ ಮಹಿಳಾ ಮೋರ್ಚಾ ಬೃಹತ್ ಪ್ರತಿಭಟನೆ

ಕೋಲಾರ

ಕೇಂದ್ರದ ಮೋದಿ ನೇತೃತ್ವದ ಸರ್ಕಾರ ಸಂಸತ್‌ನಲ್ಲಿ ಮಂಡಿಸಿದ್ದ 'ನಾರಿಶಕ್ತಿ ವಂದನ್'ಮಸೂದೆಗೆ ಅಡ್ಡಿಪಡಿಸುವ ಮೂಲಕ ದೇಶದ ಮಹಿಳೆಯರ ಸ್ವಾಭಿಮಾನಕ್ಕೆ ಧಕ್ಕೆ ತಂದು ಮಹಾದ್ರೋಹ ಬಗೆದಿರುವ ಭ್ರಷ್ಟ ಕಾಂಗ್ರೆಸ್ ಮತ್ತವರ ಬೆಂಬಲಿಗ ಪಕ್ಷಗಳನ್ನು ಚುನಾವಣೆಯಲ್ಲಿ ಬಹಿಷ್ಕರಿಸಲು ಬಿಜೆಪಿ ಮುಖಂಡರು ಕರೆ ನೀಡಿದರು.

ನಗರದ ಬಸ್‌ನಿಲ್ದಾಣ ವೃತ್ತದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ, ಮಾಜಿ ಸಚಿವ ವರ್ತೂರು ಪ್ರಕಾಶ್, ಮಾಜಿ ಸಂಸದ ಎಸ್. ಮುನಿಸ್ವಾಮಿ ಅವರ ಪತ್ನಿ ಶೈಲಜ ಮುನಿಸ್ವಾಮಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅರುಣಮ್ಮ ಮತ್ತಿತರರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ನೂರಾರು ಮಹಿಳೆಯರು ಭಾಗವಹಿಸಿ ಮಾನವ ಸರಪಳಿ ನಿರ್ಮಿಸಿದ್ದಲ್ಲದೇ ರಾಹುಲ್‌ಗಾಂಧಿ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಘೋಷಣೆ ಕೂಗಿದರು.

ಮಾಜಿ ಸಚಿವ ವರ್ತೂರು ಪ್ರಕಾಶ್ ಮಾತನಾಡಿ, ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ವಿಧೇಯಕ ಮಂಡಿಸಲಾಗಿದ್ದು ಈ ವಿಧೇಯಕ ಸೋಲಿಗೆ ಪ್ರಮುಖ ಪಾತ್ರ ವಹಿಸಿರುವ ಕಾಂಗ್ರೆಸ್ ಪಕ್ಷದ ವಿರುದ್ದ ಮಹಿಳೆಯರು ಹೋರಾಟ ನಡೆಸುವುದು ಮಾತ್ರವಲ್ಲ ಮುಂದಿನ ಚುನಾವಣೆಯಲ್ಲಿ ಬಹಿಷ್ಕರಿಸಬೇಕು ಎಂದು ಕರೆ ನೀಡಿದರು.




ಮಹಿಳೆಯರನ್ನು ಅಧಿಕಾರದಿಂದ ದೂರವಿಡಬೇಕು ಎಂಬುದು ಕಾಂಗ್ರೆಸ್‌ನ ಸಿದ್ಧಾಂತವಾಗಿದೆ, ಇಂತಹ ಸಂದರ್ಭದಲ್ಲಿ ಮಹಿಳೆಯರು ಏಕೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಪ್ರಶ್ನಿಸಿದ ಅವರು ಹೆತ್ತತಾಯಿಗೂ ಗೌರವ ನೀಡದ ಸಂಸ್ಕೃತಿ ಈ ಕಾಂಗ್ರೆಸ್ಸಿಗರದ್ದು ಎಂದು ಖಂಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ ಮಾತನಾಡಿ, ದಶಕಗಳ ಕಾಲದಿಂದ ಮಹಿಳಾ ಮೀಸಲಾತಿ ಮಸೂದೆಯನ್ನು ಮೂಲೆ ಗುಂಪು ಮಾಡಿದ್ದ ಕಾಂಗ್ರೆಸ್ ಪಕ್ಷ ಇದೀಗ ಪ್ರಧಾನಿ ನರೇಂದ್ರ ಮೋದಿಯವರು ಇಚ್ಛಾಶಕ್ತಿ ಹಾಗೂ ಮಹಿಳೆಯರ ಮೇಲಿನ ಗೌರವದಿಂದ ಸಂಸತ್‌ನಲ್ಲಿ ನಾರಿಶಕ್ತಿ ವಂದನ್ ಮಸೂದೆ ಮೂಡಿಸಿದಾಗ ಅದನ್ನು ವಿರೋಧಿಸುವ ಮೂಲಕ ತಮ್ಮ ಕೀಳು ಮಟ್ಟದ ರಾಜಕೀಯ ಸಂಸ್ಕೃತಿಗೆ ಸಾಕ್ಷಿಯಾಗಿದ್ದಾರೆ ಎಂದು ಟೀಕಿಸಿದರು.

ಮಹಿಳಾ ಮೀಸಲಾತಿಯ ಬಿಲ್ ವಿರೋಧಿಸಿರುವ ಕಾಂಗೇಸ್ ಪಕ್ಷದ ವಿರುದ್ದ ರಾಜ್ಯ ಮಟ್ಟದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆಯನ್ನು ನಡೆಸಲಿದೆ ಎಂದ ಅವರು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಮಹಿಳೆಯರಿಗಾದ ಅನ್ಯಾಯದ ವಿರುದ್ದ ಎಚ್ಚತ್ತು ಕೊಳ್ಳುವಂತೆ ಮಹಿಳೆಯರವನ್ನು ಸಂಘಟಿಸಿ ಹೋರಾಟ ಮಾಡಲಾಗುವುದು ಎಂದರು.

ಮಾಜಿ ಸಂಸದ ಎಸ್. ಮುನಿಸ್ವಾಮಿ ಅವರ ಪತ್ನಿ ಶೈಲಜಾ ಮುನಿಸ್ವಾಮಿ ಮಾತನಾಡಿ, ಕಾಂಗ್ರೆಸ್ ಮತ್ತದರ ಮಿತ್ರ ಪಕ್ಷಗಳ ಇಂಡೀ ಕೂಟ ಮಹಿಳಾ ಮೀಸಲಾತಿ ಮಸೂದೆಗೆ ವಿರೋಧ ವ್ಯಕ್ತಪಡಿಸುವ ಮೂಲಕ ಭಾರತೀಯ ಸಂಸ್ಕೃತಿಯಲ್ಲಿ ಪವಿತ್ರ ಸ್ಥಾನ ಹೊಂದಿರುವ ಇಡೀ ಮಹಿಳಾ ಕುಲಕ್ಕೆ ಅಪಮಾನ ಮಾಡಿದ್ದಾರೆ ಎಂದು ಖಂಡಿಸಿದರು.

ಪ್ರಧಾನಿ ಮೋದಿಯವರು 'ನಾರಿಶಕ್ತಿ ವಂದನ್' ಮಹಿಳೆಯರಿಗೆ ವಂದಿಸುವ ಪ್ರತೀಕವಾಗಿ ಮಸೂದೆ ಮಂಡಿಸಿದ್ದು, ಬಿಜೆಪಿಯ ಸಂಸ್ಕೃತಿಯನ್ನು ಅನಾವರಣಗೊಳಿಸಿದರು. ಆದರೆ ಕಾಂಗ್ರೆಸ್ ಮುಖಂಡರು ಇದಕ್ಕೆ ಧಕ್ಕೆ ತಂದು ಮಹಿಳೆಯರ ಸ್ವಾಭಿಮಾನಕ್ಕೆ ಧಕ್ಕೆ ತಂದರು, ಇದೇ ಕಾಂಗ್ರೆಸ್ ಹಿಂದೆ ದೇವೇಗೌಡರು ಪ್ರಧಾನಿಯಾಗಿದ್ದಾಗಲೂ ಈ ಮಸೂದೆಗೆ ವಿರೋಧ ವ್ಯಕ್ತಪಡಿಸಿದ್ದರು ಎಂದರು.

ಇಂದಿರಾ, ಸೋನಿಯಾ, ಪ್ರಿಯಾಂಕ ಈ ಕುಟುಂಬ ರಾಜಕೀಯದ ಕುಡಿಗಳು ಮಾತ್ರವೇ ಮಹಿಳೆಯರೇ ಎಂದು ಪ್ರಶ್ನಿಸಿದ ಅವರು, ಬಡ, ಸಾಮಾನ್ಯ ಮಹಿಳೆಯೂ ಸಂಸತ್, ವಿಧಾನಸಭೆ ಪ್ರವೇಶಿಸಿ ಅಲ್ಲಿ ಜನಪರ ಧ್ವನಿಯಾಗುವ ಅವಕಾಶವನ್ನು ಕಿತ್ತುಕೊಳ್ಳುವ ಕೀಳುಮಟ್ಟದ ರಾಜಕೀಯ ಮಾಡಿದ್ದಾರೆ ಎಂದು ಖಂಡಿಸಿದ ಅವರು, ಹೆಣ್ಣು ಅಬಲೆಯಲ್ಲ ಸಬಲೆ ಎಂಬುದನ್ನು ಮುಂದಿನ ಚುನಾವಣೆಯಲ್ಲಿ ತೋರಿಸಬೇಕು ಕಾಂಗ್ರೆಸ್ಸನ್ನು ಧಿಕ್ಕರಿಸಬೇಕು ಎಂದರು.

ಮಹಿಳೆಯರಿಂದ ನಿರಂತರ ಹೋರಾಟ: ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅರುಣಮ್ಮ ಮಾತನಾಡಿ, ಮಹಿಳೆಯರು ಕಾಂಗ್ರೆಸ್ ಮಾಡಿರುವ ಈ ಮಹಾದ್ರೋಹದ ಕುರಿತು ಎಚ್ಚೆತ್ತುಕೊಳ್ಳಬೇಕು, ಬೀದಿಗಿಳಿದು ಹೋರಾಟ ಮಾಡುವ ಸಂಕಲ್ಪ ಮಾಡಬೇಕು, ನಿಮ್ಮೊಂದಿಗೆ ಬಿಜೆಪಿ ಮಹಿಳಾ ಮೋರ್ಚಾ ಸದಾ ನಿಲ್ಲುತ್ತದೆ ಎಂದು ತಿಳಿಸಿ, ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲು ಕರೆ ನೀಡಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ಮಮತಮ್ಮ, ಅಶ್ವಿನಿ, ಗೀತಾ,ಶ್ವೇತಾ, ನಗರಸಭೆ ಮಾಜಿ ಸದಸ್ಯ ಪ್ರವೀಣ್‌ಗೌಡ, ಬಿಜೆಪಿ ಮುಖಂಡರಾದ ವಿಜಯಕುಮಾರ್, ಎಂ.ಪಿ. ನಾರಾಯಣಸ್ವಾಮಿ, ಅಪ್ಪಿನಾರಾಯಣಸ್ವಾಮಿ, ಕೆಂಬೋಡಿ ನಾರಾಯಣಸ್ವಾಮಿ,ಒಬಿಸಿ ಮೋರ್ಚಾ ಬಾಲಾಜಿ, ತಿಮ್ಮರಾಯಪ್ಪ, ಮಾಲೂರು ಕೃಷ್ಣಪ್ಪ, ಮುಳಬಾಗಿಲು ಮಂಜುನಾಥಗೌಡ, ಶಿವಣ್ಣ, ಲಕ್ಷ್ಮಣಗೌಡ, ಸುರೇಶ್, ಕಿರಣ್, ಬಂಗಾರಪೇಟೆ ಮಹೇಶ್, ಮಾಲೂರು ಅಪ್ಪಿರಾಜು, ಸಾ.ಮಾ. ಅನಿಲ್‌ಬಾಬು ಮತ್ತಿತರರಿದ್ದರು.

# ಬೇಸಿಗೆ ದಟ್ಟಣೆ ನಿರ್ವಹಣೆಗೆ ವಿಶೇಷ ರೈಲು ಸಂಚಾರ



ಹುಬ್ಬಳ್ಳಿ

ಬೇಸಿಗೆ ರಜೆಯ ಪ್ರಯುಕ್ತ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿರ್ವಹಿಸಲು, ನೈರುತ್ಯ ರೈಲ್ವೆಯು ಎಸ್.ಎಸ್.ಎಸ್ ಹುಬ್ಬಳ್ಳಿ ಮತ್ತು ಅಸ್ಸಾಂನ ನ್ಯೂ ಟಿನ್ಸುಕಿಯಾ ನಡುವೆ ಒಂದು ಟ್ರಿಪ್ ವಿಶೇಷ ರೈಲನ್ನು ಓಡಿಸಲು ನಿರ್ಧರಿಸಿದೆ.

ರೈಲು ಸಂಚಾರದ ವೇಳಾಪಟ್ಟಿ:

ರೈಲು ಸಂಖ್ಯೆ 07325 (ಹುಬ್ಬಳ್ಳಿ – ನ್ಯೂ ಟಿನ್ಸುಕಿಯಾ): ಏಪ್ರಿಲ್ 23, 2026 (ಗುರುವಾರ) ರಂದು ಬೆಳಿಗ್ಗೆ 11:45 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು, ಭಾನುವಾರ ಮಧ್ಯಾಹ್ನ 02:30 ಗಂಟೆಗೆ ನ್ಯೂ ಟಿನ್ಸುಕಿಯಾ ತಲುಪಲಿದೆ.

ರೈಲು ಸಂಖ್ಯೆ 07326 (ನ್ಯೂ ಟಿನ್ಸುಕಿಯಾ – ಹುಬ್ಬಳ್ಳಿ): ಏಪ್ರಿಲ್ 27, 2026 (ಸೋಮವಾರ) ರಂದು ರಾತ್ರಿ 10:00 ಗಂಟೆಗೆ ನ್ಯೂ ಟಿನ್ಸುಕಿಯಾದಿಂದ ಹೊರಟು, ಗುರುವಾರ ರಾತ್ರಿ 11:00 ಗಂಟೆಗೆ ಹುಬ್ಬಳ್ಳಿಗೆ ಆಗಮಿಸಲಿದೆ.

ಪ್ರಮುಖ ನಿಲ್ದಾಣಗಳು: ಈ ರೈಲು ಕರ್ನಾಟಕದ ಹಾವೇರಿ, ಹರಿಹರ, ದಾವಣಗೆರೆ, ಅರಸೀಕೆರೆ, ತುಮಕೂರು, ಎಸ್.ಎಂ.ವಿ.ಟಿ ಬೆಂಗಳೂರು ಮತ್ತು ಬಂಗಾರಪೇಟೆ ನಿಲ್ದಾಣಗಳ ಮೂಲಕ ಹಾದು ಹೋಗಲಿದೆ. ನಂತರ ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಳದ ಪ್ರಮುಖ ನಗರಗಳಾದ ವಿಜಯವಾಡ, ಭುವನೇಶ್ವರ, ಖರಗ್‌ಪುರ ಮತ್ತು ಮಾಲ್ಡಾ ಟೌನ್ ಮಾರ್ಗವಾಗಿ ಅಸ್ಸಾಂ ತಲುಪಲಿದೆ.

ಬೋಗಿಗಳ ವಿವರ:

ಈ ವಿಶೇಷ ರೈಲು ಒಟ್ಟು 20 ಬೋಗಿಗಳನ್ನು ಒಳಗೊಂಡಿರುತ್ತದೆ.

1 ಎಸಿ 2–ಟೈರ್ (AC 2–Tier)
6 ಎಸಿ 3–ಟೈರ್ (AC 3–Tier)
7 ಸ್ಲೀಪರ್ ಕ್ಲಾಸ್ (Sleeper Class)
4 ಜನರಲ್ ಸೆಕೆಂಡ್ ಕ್ಲಾಸ್ (General Second Class)
2 ಲಗೇಜ್ ಮತ್ತು ಬ್ರೇಕ್ ವ್ಯಾನ್ ಬೋಗಿಗಳು.

# ಉದ್ಯೋಗ ಮೇಳಕ್ಕೆ ಚಾಲನೆ



ಬೆಂಗಳೂರು

ಯುವಜನತೆಗೆ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಸದೃಢ ಸಮಾಜ ಕಟ್ಟಲು ಸಾಧ್ಯ. ಈ ನಿಟ್ಟಿನಲ್ಲಿ ಮಲ್ಲೇಶ್ವರದ ಉದ್ಯೋಗ ಮೇಳವು ಉದ್ಯೋಗಾಕಾಂಕ್ಷಿಗಳಿಗೆ ಹೊಸ ಭರವಸೆ ನೀಡಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಮಲ್ಲೇಶ್ವರ ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಮಲ್ಲೇಶ್ವರದ ಎಸ್.ಎಚ್.ವಿ.ಎನ್.ಎಂ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 'ಯುವೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಸವ ಜಯಂತಿಯ ಶುಭ ಸಂದರ್ಭದಲ್ಲೇ ಈ ಮೇಳವನ್ನು ಹಮ್ಮಿಕೊಂಡಿರುವುದು ಅರ್ಥಪೂರ್ಣವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಮಾರ್ಗದರ್ಶನವೇ ಯಶಸ್ಸಿನ ಸೂತ್ರ: ಬರೀ ಕೆಲಸ ಕೊಡಿಸುವುದು ಮಾತ್ರವಲ್ಲದೆ, ವಿದ್ಯಾರ್ಥಿಗಳಿಗೆ ಭವಿಷ್ಯದ ದೃಷ್ಟಿಯಿಂದ 'ಕರಿಯರ್ ಗೈಡೆನ್ಸ್' (ವೃತ್ತಿ ಮಾರ್ಗದರ್ಶನ) ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಹಲವಾರು ಪ್ರತಿಷ್ಠಿತ ಸಂಸ್ಥೆಗಳು ನಮ್ಮೊಂದಿಗೆ ಕೈಜೋಡಿಸಿವೆ ಎಂದು ಶಾಸಕರು ತಿಳಿಸಿದರು.

ಮೋದಿ ಸರ್ಕಾರದ ಸಾಧನೆ: ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಯುವಜನರಿಗಾಗಿ ಲಕ್ಷಾಂತರ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದ್ದಾರೆ. ಸರ್ಕಾರದ ವಿವಿಧ ಯೋಜನೆಗಳ ಮೂಲಕ ದೇಶಾದ್ಯಂತ ಉದ್ಯೋಗದ ಹರಿವು ಹೆಚ್ಚಾಗಿದೆ ಎಂದು ಅವರು ಶ್ಲಾಘಿಸಿದರು.

ಬಸವಣ್ಣನವರ ತತ್ವದ ಹಾದಿ: "ಕಾಯಕವೇ ಕೈಲಾಸ" ಎಂಬ ಬಸವಣ್ಣನವರ ವಾಣಿಯಂತೆ, ಪ್ರತಿಯೊಬ್ಬರಿಗೂ ಗೌರವಯುತ ಕೆಲಸ ಸಿಗಬೇಕು. ಸಮಾನತೆಯ ಸಮಾಜ ನಿರ್ಮಾಣಕ್ಕೆ ಉದ್ಯೋಗವಕಾಶಗಳು ಅಡಿಪಾಯವಾಗಲಿವೆ ಎಂದು ಅವರು ಆಶಯ ವ್ಯಕ್ತಪಡಿಸಿದರು.

# ಬಸವ ಪರ್ವ: ಮೇ 23ಕ್ಕೆ ಸಂಕಲ್ಪದ ಕಂಚಿನ ಪುತ್ಥಳಿ ಪ್ರತಿಷ್ಠಾಪನೆ

ಬಂಗಾರಪೇಟೆ

"ಸಮಾನತೆಯ ಹರಿಕಾರ ಬಸವಣ್ಣನವರ ತತ್ವಾದರ್ಶಗಳನ್ನು ಸಾರುವ ನಿಟ್ಟಿನಲ್ಲಿ ನಗರದಲ್ಲಿ ಪ್ರತಿಷ್ಠಾಪಿಸಲಾಗಿರುವ ಬಸವೇಶ್ವರರ ಭವ್ಯ ಪುತ್ಥಳಿಯು ಕೇವಲ ಮೂರ್ತಿಯಲ್ಲ, ಅದು ಸಮುದಾಯದ ದಶಕಗಳ ಕಾಲದ ಸಂಕಲ್ಪದ ಫಲವಾಗಿದೆ" ಎಂದು ಶಾಸಕ ಎಸ್.ಎನ್. ನಾರಾಯಣಸ್ವಾಮಿ ಬಣ್ಣಿಸಿದರು.

ಶ್ರೀ ಬಸವ ಜಯಂತಿಯ ಅಂಗವಾಗಿ ನಗರದ ಸಂತೆ ಗೇಟ್ ಬಳಿಯ ಅಂಬೇಡ್ಕರ್ ವೃತ್ತದಿಂದ ಆರಂಭವಾದ ಭವ್ಯ ಮೆರವಣಿಗೆಯ ನಂತರ, ಆಶ್ವಾರೂಢ ಶ್ರೀ ಬಸವೇಶ್ವರ ಸ್ವಾಮಿಯ ಕಂಚಿನ ಪುತ್ಥಳಿಗೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

"ಕಳೆದ ನಾಲ್ಕು ವರ್ಷಗಳಿಂದ ವೀರಶೈವ ಲಿಂಗಾಯತ ಸಮುದಾಯದ ಹಿರಿಯರು ಮತ್ತು ಯುವಕರು ಈ ಪುತ್ಥಳಿ ನಿರ್ಮಾಣಕ್ಕಾಗಿ ನಿರಂತರವಾಗಿ ಶ್ರಮಿಸಿದ್ದಾರೆ. ಅತ್ಯಂತ ಕಲಾತ್ಮಕವಾಗಿ ಮೂಡಿಬಂದಿರುವ ಈ ಪ್ರತಿಮೆಯು ಬಂಗಾರಪೇಟೆ ನಗರಕ್ಕೆ ಹೊಸ ಕಳೆಯನ್ನು ನೀಡಲಿದೆ. ಮುಂಬರುವ ಮೇ 23ರಂದು ನಾಡಿನ ಪ್ರಸಿದ್ಧ ಮಠಾಧೀಶರಾದ ಸಿದ್ದಗಂಗಾ ಮತ್ತು ಸುತ್ತೂರು ಶ್ರೀಗಳ ದಿವ್ಯ ಸಾನಿಧ್ಯದಲ್ಲಿ ಈ ಪುತ್ಥಳಿಯ ಅನಾವರಣ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಲಿದೆ," ಎಂದು ಶಾಸಕರು ತಿಳಿಸಿದರು.

ನಾಗಲಾಪುರ ವೀರ ಸಂಸ್ಥಾನ ಮಠದ ತೇಜೇಶಲಿಂಗ



ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿ, "ಬಸವಣ್ಣನವರು 12ನೇ ಶತಮಾನದಲ್ಲೇ ಸಮ ಸಮಾಜದ ಕನಸು ಕಂಡವರು. ಕೇವಲ ಪುತ್ಥಳಿ ಸ್ಥಾಪನೆಗೆ ಸೀಮಿತವಾಗದೆ, ಅವರ ವಚನಗಳನ್ನು ನಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ," ಎಂದರು. ಇದೇ ವೇಳೆ ಶಾಸಕರು ಮಂಜೂರು ಮಾಡಿರುವ 5 ಗುಂಟೆ ಜಾಗದಲ್ಲಿ ಅತ್ಯಾಧುನಿಕ ಸಮುದಾಯ ಭವನ ನಿರ್ಮಿಸಿಕೊಡುವಂತೆ ಸಮುದಾಯದ ಪರವಾಗಿ ಶಾಸಕರಿಗೆ ಮನವಿ ಮಾಡಲಾಯಿತು.

ಕಾರ್ಯಕ್ರಮಕ್ಕೆ ಮುಂಚಿತವಾಗಿ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ನಂತರ ಬಸವಣ್ಣನವರ ಕಂಚಿನ ವಿಗ್ರಹವನ್ನು ಕಳಶಗಳೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಶ್ರೀ ಬಸವೇಶ್ವರ ವೃತ್ತದಲ್ಲಿ ಪ್ರತಿಷ್ಠಾಪಿಸಲಾಯಿತು. 91ನೇ ವಯಸ್ಸಿನಲ್ಲೂ ಯುವಕರಂತೆ ಉತ್ಸಾಹದಿಂದ ಕೆಲಸ ಮಾಡುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಎನ್. ಸದಾಶಿವಯ್ಯ ಅವರ ಸಂಘಟನಾ ಶಕ್ತಿಯನ್ನು ಈ ಸಂದರ್ಭದಲ್ಲಿ ಶ್ಲಾಘಿಸಲಾಯಿತು.

ಕಾರ್ಯಕ್ರಮದಲ್ಲಿ ಸಮುದಾಯದ ಮುಖಂಡರಾದ ಕುಮಾರ್, ಕೆ.ಜಿ. ನಂಜಪ್ಪ, ಸದಾಶಿವಯ್ಯ, ಬಿ.ಎನ್. ರಾಜಶೇಖರ್, ಕೆ.ಸಿ. ಉಮೇಶ್ ಕುಮಾರ್, ಮಾಜಿ ಪೌರಾಧ್ಯಕ್ಷ ಗೋವಿಂದ ಮತ್ತಿತರರು ಉಪಸ್ಥಿತರಿದ್ದರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಶ್ರೀ ಬಸವ ಜಯಂತಿ ಪ್ರಯುಕ್ತ ಸೋಮವಾರ ಬೆಳಗ್ಗೆ ನವದೆಹಲಿಯ ಸಂಸತ್ ಭವನದಲ್ಲಿ ಆವರಣದಲ್ಲಿರುವ ಪ್ರೇರಣಾ ಸ್ಥಳದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರರಿಗೆ ಪುಷ್ಪ ನಮನ ಅರ್ಪಿಸಿದರು.

# 'ಸಂವಿಧಾನ ರಕ್ಷಣೆ ಯುವಕರ ಹೊಣೆ'

ಕೋಲಾರ

"ಭಾರತದ ಇತಿಹಾಸವು ಕೇವಲ ರಾಜರು, ಸುಲ್ತಾನರು ಮತ್ತು ಪಾಳೇಗಾರರ ವೈಭವದ ಚಿತ್ರಣಕ್ಕೆ ಸೀಮಿತವಾಗಿದೆ. ವಾಸ್ತವಿಕ ಭಾರತದ ಬಡತನದ ಚಿತ್ರಣವನ್ನು ಚರಿತ್ರೆಯಲ್ಲಿ ದಾಖಲಿಸದ ಕಾರಣ ದೇಶ ಇಂದಿಗೂ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಹೊಂದಿಲ್ಲ" ಎಂದು ನಿವೃತ್ತ ಡಿಸಿಪಿ ಹಾಗೂ ಭಾರತೀಯ ಬೌದ್ಧ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಎಸ್. ಸಿದ್ದರಾಜು ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

"ವಿಶ್ವದ 197 ರಾಷ್ಟ್ರಗಳ ಪೈಕಿ 154 ರಾಷ್ಟ್ರಗಳು ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಿವೆ ಎಂದರೆ, ಅವರು ನೀಡಿದ ಸಂವಿಧಾನದ ತಾಕತ್ತು ಎಂಥದ್ದು ಎಂಬುದು ತಿಳಿಯುತ್ತದೆ. ಅಂಬೇಡ್ಕರ್ ಅವರು ಸಿದ್ಧಪಡಿಸಿದ ಪ್ರಜಾಪ್ರಭುತ್ವದ ಆಶಯಗಳನ್ನು ಮೆಚ್ಚಿ ಇಂದು ಜಗತ್ತಿನ 54 ರಾಷ್ಟ್ರಗಳು ಭಾರತೀಯ ಸಂವಿಧಾನದ ಅಂಶಗಳನ್ನು ಎರವಲು ಪಡೆದುಕೊಂಡಿವೆ" ಎಂದು ಅವರು ಹೆಮ್ಮೆಯಿಂದ ತಿಳಿಸಿದರು.

ಅಂಬೇಡ್ಕರ್ ಅವರು ತಮ್ಮ ವೈಯಕ್ತಿಕ ಸುಖವನ್ನು ಬದಿಗೊತ್ತಿ ಸಮಾಜದ ಏಳಿಗೆಗಾಗಿ ಶ್ರಮಿಸಿದರು. ಇಂದು ಸಂಸತ್ತಿನಲ್ಲಿ ಚರ್ಚೆಯಾಗುತ್ತಿರುವ ಮಹಿಳಾ ಮೀಸಲಾತಿಗೆ ಅಂದೇ 'ಹಿಂದೂ ಕೋಡ್ ಬಿಲ್' ಮೂಲಕ ಅಡಿಪಾಯ ಹಾಕಿದ್ದರು. ಮಹಿಳೆಯರಿಗೆ ಬಿಡುಗಡೆ ಭಾಗ್ಯ ನೀಡಲು ಶ್ರಮಿಸಿದ ಮಹಾನ್ ಚೇತನ ಅಂಬೇಡ್ಕರ್ ಅವರ ಇತಿಹಾಸವನ್ನು ಇಂದಿನ ಯುವ ಪೀಳಿಗೆ ಹಾಗೂ ಹೆಣ್ಣುಮಕ್ಕಳು ಅರಿಯುವುದು ಅತ್ಯಗತ್ಯ ಎಂದರು. "ಸಂವಿಧಾನಕ್ಕೆ ಎಲ್ಲಾದರೂ ಧಕ್ಕೆ ಉಂಟಾಗುತ್ತದೆಯೇ ಎಂಬ ಭಯ ಕಾಡುತ್ತಿದೆ, ಈ ಬಗ್ಗೆ ಯುವ ಸಮೂಹ ಎಚ್ಚೆತ್ತುಕೊಳ್ಳಬೇಕು" ಎಂದು ಅವರು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಮುನಿಶಾಮಪ್ಪ ಎ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

"ಭಾರತದ ಇತಿಹಾಸವು ಕೇವಲ ರಾಜರು, ಸುಲ್ತಾನರು ಮತ್ತು ಪಾಳೇಗಾರರ ವೈಭವದ ಚಿತ್ರಣಕ್ಕೆ ಸೀಮಿತವಾಗಿದೆ. ವಾಸ್ತವಿಕ ಭಾರತದ ಬಡತನದ ಚಿತ್ರಣವನ್ನು ಚರಿತ್ರೆಯಲ್ಲಿ ದಾಖಲಿಸದ ಕಾರಣ ದೇಶ ಇಂದಿಗೂ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಹೊಂದಿಲ್ಲ" ಎಂದು ನಿವೃತ್ತ ಡಿಸಿಪಿ ಹಾಗೂ ಭಾರತೀಯ ಬೌದ್ಧ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಎಸ್. ಸಿದ್ದರಾಜು ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

"ವಿಶ್ವದ 197 ರಾಷ್ಟ್ರಗಳ ಪೈಕಿ 154 ರಾಷ್ಟ್ರಗಳು ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಿವೆ ಎಂದರೆ, ಅವರು ನೀಡಿದ ಸಂವಿಧಾನದ ತಾಕತ್ತು ಎಂಥದ್ದು ಎಂಬುದು ತಿಳಿಯುತ್ತದೆ. ಅಂಬೇಡ್ಕರ್ ಅವರು ಸಿದ್ಧಪಡಿಸಿದ ಪ್ರಜಾಪ್ರಭುತ್ವದ ಆಶಯಗಳನ್ನು ಮೆಚ್ಚಿ ಇಂದು ಜಗತ್ತಿನ 54 ರಾಷ್ಟ್ರಗಳು ಭಾರತೀಯ ಸಂವಿಧಾನದ ಅಂಶಗಳನ್ನು ಎರವಲು ಪಡೆದುಕೊಂಡಿವೆ" ಎಂದು ಅವರು ಹೆಮ್ಮೆಯಿಂದ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

"ವಿಶ್ವದ 197 ರಾಷ್ಟ್ರಗಳ ಪೈಕಿ 154 ರಾಷ್ಟ್ರಗಳು ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಿವೆ ಎಂದರೆ, ಅವರು ನೀಡಿದ ಸಂವಿಧಾನದ ತಾಕತ್ತು ಎಂಥದ್ದು ಎಂಬುದು ತಿಳಿಯುತ್ತದೆ. ಅಂಬೇಡ್ಕರ್ ಅವರು ಸಿದ್ಧಪಡಿಸಿದ ಪ್ರಜಾಪ್ರಭುತ್ವದ ಆಶಯಗಳನ್ನು ಮೆಚ್ಚಿ ಇಂದು ಜಗತ್ತಿನ 54 ರಾಷ್ಟ್ರಗಳು ಭಾರತೀಯ ಸಂವಿಧಾನದ ಅಂಶಗಳನ್ನು ಎರವಲು ಪಡೆದುಕೊಂಡಿವೆ" ಎಂದು ಅವರು ಹೆಮ್ಮೆಯಿಂದ ತಿಳಿಸಿದರು.

ಅಂಬೇಡ್ಕರ್ ಅವರು ತಮ್ಮ ವೈಯಕ್ತಿಕ ಸುಖವನ್ನು ಬದಿಗೊತ್ತಿ ಸಮಾಜದ ಏಳಿಗೆಗಾಗಿ ಶ್ರಮಿಸಿದರು. ಇಂದು ಸಂಸತ್ತಿನಲ್ಲಿ ಚರ್ಚೆಯಾಗುತ್ತಿರುವ ಮಹಿಳಾ ಮೀಸಲಾತಿಗೆ ಅಂದೇ 'ಹಿಂದೂ ಕೋಡ್ ಬಿಲ್' ಮೂಲಕ ಅಡಿಪಾಯ ಹಾಕಿದ್ದರು. ಮಹಿಳೆಯರಿಗೆ ಬಿಡುಗಡೆ ಭಾಗ್ಯ ನೀಡಲು ಶ್ರಮಿಸಿದ ಮಹಾನ್ ಚೇತನ ಅಂಬೇಡ್ಕರ್ ಅವರ ಇತಿಹಾಸವನ್ನು ಇಂದಿನ ಯುವ ಪೀಳಿಗೆ ಹಾಗೂ ಹೆಣ್ಣುಮಕ್ಕಳು ಅರಿಯುವುದು ಅತ್ಯಗತ್ಯ ಎಂದರು. "ಸಂವಿಧಾನಕ್ಕೆ ಎಲ್ಲಾದರೂ ಧಕ್ಕೆ ಉಂಟಾಗುತ್ತದೆಯೇ ಎಂಬ ಭಯ ಕಾಡುತ್ತಿದೆ, ಈ ಬಗ್ಗೆ ಯುವ ಸಮೂಹ ಎಚ್ಚೆತ್ತುಕೊಳ್ಳಬೇಕು" ಎಂದು ಅವರು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಮುನಿಶಾಮಪ್ಪ ಎ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

# 'ಯುವಜನತೆಗೆ ಬಸವ–ಶಿವಕುಮಾರ ಶ್ರೀಗಳ ಆದರ್ಶ ದಾರಿದೀಪ'

ಬೆಂಗಳೂರು

ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಬಸವೇಶ್ವರನಗರದಲ್ಲಿ ಕ್ರಾಂತಿಯೋಗಿ ಬಸವೇಶ್ವರ ಜಯಂತಿ ಹಾಗೂ ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ 119ನೇ ಜನ್ಮದಿನಾಚರಣೆಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು. ಬಸವೇಶ್ವರನಗರದ 'ಬಸವ ಬಳಗ' ಹಾಗೂ 'ಕಂಬಿ ಸಿದ್ದರಾಮಣ್ಣ ವಿದ್ಯಾರ್ಥಿ ನಿಲಯ'ದ ವತಿಯಿಂದ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪಾಲ್ಗೊಂಡು ಪುಷ್ಪನಮನ ಸಲ್ಲಿಸಿದರು.

ಕಂಬಿ ಸಿದ್ದರಾಮಣ್ಣ ವಸತಿ ನಿಲಯದಿಂದ ಹೊರಟ ಬಸವಣ್ಣನವರು ಹಾಗೂ ಶಿವಕುಮಾರ ಸ್ವಾಮೀಜಿಯವರ ಮೂರ್ತಿಗಳ ಭವ್ಯ ಮೆರವಣಿಗೆಯು ಅಂಬೇಡ್ಕರ್ ಕ್ರೀಡಾಂಗಣ, ಮಂಜುನಾಥನಗರ, ಮೋದಿ ವೃತ್ತದ ಮೂಲಕ ಸಾಗಿ ಸ್ವಾತಿ ಹೋಟೆಲ್ ಮೇಲುಸೇತುವೆ ಬಳಿಯ ಬಸವೇಶ್ವರ ಪ್ರತಿಮೆ ತಲುಪಿತು. ಮೆರವಣಿಗೆಯ ಉದ್ದಕ್ಕೂ ವೀರಗಾಸೆ, ಕಂಸಾಳೆ ಸೇರಿದಂತೆ ವಿವಿಧ



ಜಾನಪದ ಕಲಾತಂಡಗಳು ಪ್ರದರ್ಶನ ನೀಡಿ ಜನಮನ ಸೆಳೆದವು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮಾಜಿ ಸಚಿವರು ಹಾಗೂ ಶಾಸಕರುಗಳಾದ ಎಸ್. ಸುರೇಶ್ ಕುಮಾರ್, ಕೆ. ಗೋಪಾಲಯ್ಯ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ನಾಯಕರು, ಬಸವಣ್ಣನವರ ವಚನಗಳು ಹಾಗೂ ಸಿದ್ದಗಂಗಾ ಶ್ರೀಗಳ ಜೀವನ ಚರಿತ್ರೆ ಇಂದಿನ ಸಮಾಜಕ್ಕೆ ದಾರಿದೀಪವಾಗಿದೆ ಎಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಮಾಜಿ ಮಹಾಪೌರರಾದ ಗಂಗಾಂಬಿಕೆ ಮಲ್ಲಿಕಾರ್ಜುನ್, ಉಪಮಹಾಪೌರರಾದ ರಂಗಣ್ಣ, ಬಿ.ಎಸ್. ಪುಟ್ಟರಾಜು, ನಿವೃತ್ತ ಐಎಎಸ್ ಅಧಿಕಾರಿ ಸಿ. ಸೋಮಶೇಖರ್, ಬಿಜೆಪಿ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡರು, ಮುಖಂಡರಾದ ಮಲ್ಲಿಕಾರ್ಜುನಯ್ಯ, ಪಾಲನೇತ್ರ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ನವೀನ್ ಕುಮಾರ್ ಬಿಡದಿ ಹಾಗೂ ಬಸವ ಬಳಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# 'ಬಸವಣ್ಣ ಜ್ಞಾನದ ದೀಪ ಹಚ್ಚಿದ ಮಾನವತಾವಾದಿ'

ಬೂದಿಕೋಟೆ

ಜಗಜ್ಯೋತಿ ಬಸವಣ್ಣನವರು ತಮ್ಮ ಸರಳ ವಚನಗಳ ಮೂಲಕ ಸಮಾಜದಲ್ಲಿ ಜ್ಞಾನದ ದೀಪ ಹಚ್ಚಿದ ಮಹಾನ್ ಮಾನವತಾವಾದಿ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಹಾದಿ ಒಂದೇ ಆಗಿದ್ದು, ಯುವ ಪೀಳಿಗೆ ಅವರ ಆದರ್ಶಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಭಾರತೀಯ ಸುಹೇಲ್ ದೇವ್ ಸಮಾಜ ಪಕ್ಷದ ರಾಜ್ಯಾಧ್ಯಕ್ಷ ಅಭಿಮನ್ಯು ಮಣಿ ತಿಳಿಸಿದರು.

ನಗರದ ಕೋಲಾರ ಮುಖ್ಯ ರಸ್ತೆಯಲ್ಲಿರುವ ಅಂಬೇಡ್ಕರ್ ಪುತ್ಥಳಿ ಬಳಿ ಬಸವಣ್ಣನವರ ಭಾವಚಿತ್ರಕ್ಕೆ ಹಾಗೂ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ಸಮಾಜ ಸುಧಾರಣೆಯ ಕಾಲಘಟ್ಟ: 12ನೇ ಶತಮಾನವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ವಿಶಿಷ್ಟ ಕಾಲಘಟ್ಟ. ಸಾಮಾಜಿಕ ಅಸಮಾನತೆ ಮತ್ತು ಜಾತಿ ವ್ಯವಸ್ಥೆಯ



ಅನಿಷ್ಟ ಪದ್ಧತಿಗಳು ತಾಂಡವವಾಡುತ್ತಿದ್ದ ಕಾಲದಲ್ಲಿ ವಚನಕಾರರು ಬದಲಾವಣೆಯ ಕ್ರಾಂತಿ ಮಾಡಿದರು. ಇಂದು ಆ ಮಹಾನ್ ಪುರುಷರ ತತ್ವಗಳು ಕೇವಲ ಭಾಷಣಕ್ಕೆ ಸೀಮಿತವಾಗುತ್ತಿರುವುದು ವಿಷಾದನೀಯ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಅವರ ಹೆಸರು ಹೇಳದೆ ವಾಗ್ದಾಳಿ ನಡೆಸಿದ ಅವರು, "ಈ ಕ್ಷೇತ್ರದಲ್ಲಿ ಕೆಲವು ನಾಯಕರು ಹಿಟ್ಲರ್ ಧೋರಣೆ ಅನುಸರಿಸುತ್ತಿದ್ದಾರೆ. ಬೆದರಿಕೆಗಳಿಗೆ ಜಗ್ಗುವವನು ನಾನಲ್ಲ. ನಿಮ್ಮ ಸೋಲಿನ ಭೀತಿ ನಿಮ್ಮ ಮಾತುಗಳಲ್ಲಿ ವ್ಯಕ್ತವಾಗುತ್ತಿದೆ. 3 ಬಾರಿ ಶಾಸಕರಾಗಿ ಗೌರವ ಪಡೆದಿರುವ ನೀವು, ಮಾಡುತ್ತಿರುವ ಕೆಲಸಗಳನ್ನು ಸರಿಪಡಿಸಿಕೊಳ್ಳಬೇಕು. ನಿಮ್ಮ ಕೆಲಸಗಳು 'ಚಿನ್ನದ ಕೆಲಸ'ದಂತೆ ಕಾಣುತ್ತಿವೆ (ವ್ಯಂಗ್ಯವಾಗಿ), ಇದನ್ನು ಬದಲಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ಎದುರಿಸಬೇಕಾಗುತ್ತದೆ" ಎಂದು ಎಚ್ಚರಿಸಿದರು.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy